ಕ್ರಾಂತಿ ಗಂಗೋತ್ರಿ
ಶರಣೆ ಅಕ್ಕನಾಗಮ್ಮನವರು

■ ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಕ್ರಾಂತಿ ಗಂಗೋತ್ರಿ

ಶರಣೆ ಅಕ್ಕನಾಗಮ್ಮನವರು

ಸಂಪಾದಕರು :

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ.(ಹಿಂದಿ), ಎಂ.ಎ. (ಕನ್ನಡ)
ಸಿ.ವಾಯ್.ಇಡಿ. (ಯೋಗ ಶಿಕ್ಷಣ)

ಗೌ॥ ಸಂಪಾದಕರು, 'ಬಸವ ಬೆಳಗು' ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

೨೦೧೯

ಜಗಜ್ಯೋತಿ ಬಸವೇಶ್ವರ ಅನುಭಾವಪೀಠ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಕ್ರಾಂತಿ ಗಂಗೋತ್ರಿ

ಶರಣೆ ಅಕ್ಕನಾಗಮ್ಮನವರು

ಸಂಪಾದಕರು : **ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)**

ಎಂ.ಎ.(ತತ್ವಜ್ಞಾನ),ಎಲ್‌ಎಲ್.ಬಿ.(ಸ್ಪೇಶಲ್),
ಎಂ.ಎ.(ಹಿಂದಿ), ಎಂ.ಎ. (ಕನ್ನಡ)
ಸಿ.ವಾಯ್.ಇಡಿ. (ಯೋಗ ಶಿಕ್ಷಣ)

ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

© ಲೇಖಕರು

ಪ್ರಕಾಶಕರು : **ಜಗಜ್ಯೋತಿ ಬಸವೇಶ್ವರ ಅನುಭಾವಪೀಠ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೧೦೦೦

ಪುಟಗಳು : iv + ೪೪ = ೪೮

ಪೇಪರ ಬಳಸಿದ್ದು : ಮ್ಯಾಪ್ಲಿಥೋ ಮತ್ತು ಆರ್ಟ ಕಾರ್ಡ ಕವ್ಹರ ೨೫೦ ಜಿ.ಎಸ್.ಎಂ.

ಬೆಲೆ : **ನಾಲ್ವತ್ತು ರೂಪಾಯಿಗಳು ₹ ೪೦/-**

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : **ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ
ದೂರವಾಣಿ : ೦೮೩೩೫ - ೨೪೧೦೬೩

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಲೇಖಕರ ನಿವೇದನೆ

೧೨ನೆಯ ಶತಮಾನವು ಪ್ರಪಂಚದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದ ಶತಮಾನವಾಗಿದೆ. ಪ್ರಪಂಚದ ಜನಸಂಖ್ಯೆಯ ಅರ್ಧಭಾಗ ವಾಗಿರುವ ಮಹಿಳೆಯರಿಗೆ ಧಾರ್ಮಿಕ, ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕ, ಆರ್ಥಿಕವಾಗಿ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದ ಯುಗವಾಗಿದೆ. ಸ್ತ್ರೀ ಕುಲೋದ್ಧಾರಕ ಅಪ್ಪ ಬಸವಣ್ಣನವರು ಮುಕ್ತ ಸ್ವಾತಂತ್ರ್ಯ ಕಲ್ಪಿಸಿದರು.

ಪುರುಷ ಪ್ರಧಾನ ಸಮಾಜೋ-ಧಾರ್ಮಿಕ ವ್ಯವಸ್ಥೆಯಲ್ಲಿ ಮಹಿಳೆಯು ಮಾಯೆ, ಮಲದ ಭಾಂಡ, ಶೂದ್ರ, ಅಶ್ಪೃಶ್ಯ, ಭೋಗವಸ್ತು, ದಾನದ ವಸ್ತು ಎಂದು ಪರಿಗಣಿಸಲ್ಪಟ್ಟು ಅವಳ ಮೇಲೆ ದೌರ್ಜನ್ಯವೆಸಗುತ್ತಿದ್ದ ಕಾಲದಲ್ಲಿ ಸ್ತ್ರೀಕುಲೋದ್ಧಾರಕರಾಗಿ, ವಿಶ್ವಗುರು ಬಸವಣ್ಣನವರು ಇಂಗಳೇಶ್ವರ-ಬಾಗೇವಾಡಿಯ ಅಗ್ರಹಾರದಲ್ಲಿ ಮಾದರಸ-ಮಾದಲಾಂಬಿಕೆಯರ ಮಗನಾಗಿ ಜನಿಸಿದರು. ಇವರಿಗಿಂತ ೧೨ ವರುಷ ಹಿರಿಯಳಾಗಿದ್ದ ಇವರ ಅಕ್ಕ ನಾಗಲಾಂಬಿಕೆಯ ಮಮತೆಯಲ್ಲಿ ಬೆಳೆದರು. ಅಕ್ಕನಿಗಿಲ್ಲದ ಧಾರ್ಮಿಕ ಉಪನಯನ ಸಂಸ್ಕಾರ ತನಗೂ ಬೇಡವೆಂದು ತಿರಸ್ಕರಿಸಿ, ದಿಟ್ಟತನದಿಂದ ಜನಿವಾರವನ್ನು ಕಿತ್ತೆಸೆದರು. ಇದರಿಂದ ಸಿಟ್ಟಿಗೆದ್ದ ಕರ್ಮಠ ಸಂಪ್ರದಾಯವಾದಿ ಪುರೋಹಿತರು ಬಾಲಕ ಬಸವಣ್ಣನನ್ನು ಸಮಾಜದಿಂದ ಬಹಿಷ್ಕಾರ ಹಾಕಿದರು.

ಸಮಾಜದಿಂದ ಬಹಿಷ್ಕೃತನಾದ ಬಸವಣ್ಣನಿಗೆ ಬೆನ್ನಾಸರೆಯಾಗಿ ನಿಂತು ಬೆಳೆಸಿದ ಮಹಾತಾಯಿ ಅಕ್ಕನಾಗಮ್ಮಳು. ಸೋದರ ಬಸವಣ್ಣನನ್ನು ಜಗಜ್ಯೋತಿ ಯಾಗಿ, ಪುತ್ರ ಚೆನ್ನಬಸವಣ್ಣನನ್ನು ಜ್ಞಾನಜ್ಯೋತಿಯಾಗಿ ರೂಪಿಸುವಲ್ಲಿ ಅಕ್ಕನಾಗಮ್ಮಳ ಪಾತ್ರ ಮಹತ್ತರವಾಗಿದೆ.

ಕಲ್ಯಾಣಕ್ರಾಂತಿಯಲ್ಲಿ ವಚನವಾಙ್ಮಯ ರಕ್ಷಣೆಯ ಧೀರಸೇನಾನಿಯಾಗಿ ಹೋರಾಡಿ, ಉಳವಿಯವರೆಗೆ ಶರಣಸಂಕುಳವನ್ನು ಸಂರಕ್ಷಿಸಿದ ಮಹಾತಾಯಿ ಅಕ್ಕನಾಗಮ್ಮಳು. ಬಸವಪೂರ್ವದಲ್ಲಿ ಜನಿಸಿ, ಬಸವನಂತರವೂ ಬದುಕಿ ಬಸವ ತತ್ವ ಪ್ರಸಾರದ ಮಹಾಮಣಿಹ ಪೂರೈಸಿದ ಈ ತಾಯಿಯ ಜೀವನ ಸಾಧನೆ ಆದರ್ಶವಾಗಿದೆ.

ಈ ಪುಸ್ತಕ ರಚನೆಗೆ ಸಹಕಾರ ನೀಡಿದ ಶ್ರೀಮತಿ ಡಾ. ಕಲ್ಯಾಣಮ್ಮ ಲಂಗೋಟಿ ಅವರಿಗೂ, ಮುದ್ರಕರಾದ ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ ರಾಮದುರ್ಗ ಇವರಿಗೂ ಶರಣು-ಶರಣಾರ್ಥಿಗಳು

-ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಪರಿವಿಡಿ

ಕ್ರಾಂತಿ ಗಂಗೋತ್ರಿ
ಶರಣೆ ಅಕ್ಕನಾಗಮ್ಮನವರು

		ಪುಟ
೧.	ಪೀಠಿಕೆ- ೧೨ನೇ ಶತಮಾನ ಪೂರ್ವದ ಪರಿಸ್ಥಿತಿ	೧
೨.	ಇಂಗಳೇಶ್ವರ - ಬಾಗೇವಾಡಿಯ ಮನೆತನ	೫
೩.	ಅಕ್ಕನಾಗಮ್ಮಳ ಜನನ-ಬಾಲ್ಯ-ವಿವಾಹ	೬
೪.	ಬಸವಣ್ಣನವರ ಜನನ-ಬಾಲ್ಯ	೭
೫.	ಉಪನಯನ ಪ್ರಸಂಗ - ಅಗ್ರಹಾರದಿಂದ ಬಹಿಷ್ಕಾರ	೯
೬.	ಕಪ್ಪಡಿ ಸಂಗಮದಲ್ಲಿ - ವಿದ್ಯಾರ್ಜನೆ-ಇಷ್ಟಲಿಂಗ ಆವಿಷ್ಕಾರ	೧೧
೭.	ಅಕ್ಕನಾಗಮ್ಮ-ಚೆನ್ನಬಸವರಿಗೆ ಇಷ್ಟಲಿಂಗ ಸಂಸ್ಕಾರ	೧೩
೮.	ಬಸವಣ್ಣನವರ ದೇಶಪರ್ಯಟನ-ಲೋಕಾನುಭವ	೧೬
೯.	ಘಟಿಕೋತ್ಸವ - ಕಪಿಲಷಷ್ಠಿಯೋಗ	೧೬
೧೦.	ಅಕ್ಕನಾಗಮ್ಮಳು ಬಸವಣ್ಣನೊಂದಿಗೆ ಮಂಗಳವಾಡಕ್ಕೆ	೨೦
೧೧.	ಬಸವಣ್ಣನವರ ಕರಣಿಕ ಕಾಯಕ	೨೧
೧೨.	ಬಸವಣ್ಣ-ಗಂಗಾಂಬಿಕೆಯರ ವಿವಾಹ	೨೨
೧೩.	ಮಂಗಳವಾಡಿಯಲ್ಲಿ ಅನುಭಾವಗೋಷ್ಠಿ	೨೨
೧೪.	ಬಸವಣ್ಣ-ನೀಲಾಂಬಿಕೆಯರ ವಿವಾಹ	೨೩
೧೫.	ಅಕ್ಕನಾಗಮ್ಮ ಬಸವಣ್ಣನೊಂದಿಗೆ ಕಲ್ಯಾಣಕ್ಕೆ	೨೪
೧೬.	ಕಲ್ಯಾಣದಲ್ಲಿ ಕಾಯಕ-ದಾಸೋಹ	೨೫
೧೭.	ಅನುಭವ ಮಂಟಪ ಸ್ಥಾಪನೆ-ಶರಣರ ಆಗಮನ	೨೭
೧೮.	ಬಸವ ಮಹಾಮನೆಯ ಮಹಾತಾಯಿ	೩೦
೧೯.	ಕಲ್ಯಾಣ ಕ್ರಾಂತಿ-ಮರಣವೇ ಮಹಾನವಮಿ	೩೨
೨೦.	ಕ್ರಾಂತಿಯ ಧೀರಸೇನಾನಿ ಅಕ್ಕನಾಗಮ್ಮ	೩೭
೨೧.	ಅಕ್ಕನಾಗಮ್ಮ ಬಯಲಾದುದು.	೪೦
೨೨.	ಬಸವಾದಿ ಶರಣರ ವಚನಗಳಲ್ಲಿ ಅಕ್ಕನಾಗಮ್ಮ	೪೧
೨೩.	ಗ್ರಂಥ ಋಣ	೪೨

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕ್ರಾಂತಿ ಗಂಗೋತ್ರಿ
ಶರಣೆ ಅಕ್ಕನಾಗಮ್ಮನವರು

೧. ಪೀಠಿಕೆ – ೧೨ನೆಯ ಶತಮಾನ ಪೂರ್ವದ ಪರಿಸ್ಥಿತಿ :

ಭಾರತವು ಪ್ರಾಚೀನ ಕಾಲದಿಂದಲೂ ಜಂಬೂದ್ವೀಪವೆಂತಲೇ ಕರೆಯಲ್ಪಡುತ್ತಿತ್ತು. ಅಂದಿನ ಕಾಲದಲ್ಲಿ ಅತೀ ಪ್ರಾಚೀನವಾದ ಆದಿ ದ್ರಾವಿಡ ಜನಾಂಗದ ಮೂಲ ನಿವಾಸಿಗಳು ಈ ದೇಶದುದ್ದಗಲಕ್ಕೂ ವ್ಯಾಪಕವಾಗಿ ಹರಡಿಕೊಂಡಿದ್ದರು. ಸುಮಾರು ಹತ್ತು ಸಾವಿರ ವರುಷಗಳ ಪ್ರಾಚೀನ ಸಂಸ್ಕೃತಿ–ನಾಗರಿಕತೆ ಇಲ್ಲಿತ್ತು ಎಂದು ಸಂಶೋಧಕರು ಹೇಳುತ್ತಾರೆ. ಈ ಜನಾಂಗದ ಆರಾಧ್ಯದೇವರು ಶಿವ. ಶಿವ ಒಬ್ಬ ಯೋಗಿ ಪುರುಷ. ಆತನ ಅನುಯಾಯಿಗಳನ್ನು ಶಿವಗಣಂಗಳು, ಶಿವಭಕ್ತರು ಎಂದು ಕರೆಯುತ್ತಾರೆ.

ಶಿವನ ಪತ್ನಿ ಪಾರ್ವತಿ, ಪಾರ್ವತಿಗೆ ಗೌರಿ ಎಂಬ ಇನ್ನೊಂದು ಹೆಸರೂ ಇತ್ತೆಂದು ತಿಳಿದು ಬರುತ್ತದೆ. ಅದೇ ರೀತಿ ಶಿವನಿಗೆ ಶಂಕರ ಎಂಬ ಹೆಸರೂ ಇತ್ತು. ಶಿವಭಕ್ತರು ತಮ್ಮ ಆರಾಧ್ಯರಾದ ಶಿವ ಪಾರ್ವತಿಯರನ್ನು ಭಕ್ತಿಯಿಂದ ಅನೇಕ ರೀತಿಯಲ್ಲಿ ಸ್ತುತಿಸಿದ್ದಾರೆ. ಹಿಮಾಲಯ ಪರ್ವತ ಶ್ರೇಣಿಯ ಒಂದು ವಿಶಾಲವಾದ ಬೃಹತ್ತಾದ ಪರ್ವತ ಪ್ರದೇಶದಲ್ಲಿ ಶಿವ–ಪಾರ್ವತಿ ಹಾಗೂ ಶಿವಗಣಂಗಳ ವಾಸ. ಅಂತೆಯೇ ಅದನ್ನು ಗೌರಿಶಂಕರ ಪರ್ವತವೆಂದೂ, ಕೈಲಾಸಪರ್ವತವೆಂದೂ ಕರೆಯುತ್ತಾರೆ.

ಸಿಂಧೂ, ಬ್ರಹ್ಮಪುತ್ರ, ಗಂಗಾ ನದಿಗಳ ವಿಶಾಲವಾದ ಭೂಪ್ರದೇಶದಲ್ಲಿ ದ್ರಾವಿಡ ಜನಾಂಗದ ಮೂಲನಿವಾಸಿಗಳು ತಮ್ಮ ವಸತಿಗಳನ್ನು ನಿರ್ಮಿಸಿಕೊಂಡಿದ್ದರು. ಕಾಲಗತಿಸಿದಂತೆ ನಾಗರೀಕತೆ ಬೆಳೆಯಿತು. ದೇಶದದ್ದುಗಲಕ್ಕೂ ದ್ರಾವಿಡ ಜನಾಂಗದ ಶೈವ–ಶಾಕ್ತ ಮುಂತಾದ ಪರಂಪರೆಯ ದೇವಾಲಯಗಳನ್ನು ಕಾಣುತ್ತೇವೆ. ಶಿವಭಕ್ತರಲ್ಲಿಯ ವೈವಿಧ್ಯಮಯ ಆಚಾರ ವಿಚಾರಗಳಿಂದ ಭಿನ್ನ ಭಿನ್ನವಾದ ಮತ–ಪಂಥ–ಪಂಗಡಗಳು ರೂಪುತಾಳಿದವು. ಕಾಶ್ಮೀರಶೈವ, ರಸಶೈವ, ಕಾಳಾಮುಖ ಶೈವ, ಪಾಶುಪತಶೈವ, ಲಕುಲೀಶ ಶೈವ, ಶುದ್ಧಶೈವರು, ಶಾಕ್ತ ಮುಂತಾದ ಪರಂಪರೆಗಳು ಉದಯಿಸಿದವು.

ಸುಮಾರು ಮೂರುಸಾವಿರ ವರುಷಗಳ ಹಿಂದೆ ಮಧ್ಯ ಏಶಿಯಾ ಭಾಗದಿಂದ ಆಗಮಿಸಿದ ಆರ್ಯರು ಭಾರತಕ್ಕೆ ಬಂದು ನೆಲೆಸಿದರು. ದ್ರಾವಿಡರದು ಹರ ಸಂಸ್ಕೃತಿಯಾಗಿದ್ದರೆ, ಆರ್ಯಾಜನಾಂಗದವರದು ಹರಿ ಸಂಸ್ಕೃತಿಯಾಗಿತ್ತು. ದ್ರಾವಿಡ ಆರ್ಯರಲ್ಲಿ ಸಂಘರ್ಷ ನಡೆದು, ಕೊನೆಗೆ ಹೊಂದಾಣಿಕೆಯಾಗಿ ಭಾರತದಲ್ಲಿ

ವೈವಿಧ್ಯಮಯವಾದ ಧರ್ಮ-ಸಮಾಜ-ಸಂಸ್ಕೃತಿಗಳು ಉದಯಿಸಿದವು. ಬುದ್ಧಿವಂತ ಜನರು ತಮ್ಮ ತಮ್ಮ ಸಮಾಜ-ಜನಾಂಗಗಳಿಗಾಗಿ ಧರ್ಮ ಶಾಸ್ತ್ರ ಗ್ರಂಥಗಳನ್ನು ರಚಿಸಿದರು. ಕಾನೂನು ಕಟ್ಟಳೆಗಳನ್ನು ರೂಪಿಸಿದರು. ಬರಬರುತ್ತಾ ಆಡಳಿತ ವ್ಯವಸ್ಥೆ ಜಾರಿಗೆ ಬಂದಿತು. ರಾಜಕೀಯವಾಗಿ ರಾಜ-ಮಹಾರಾಜರು ತಮ್ಮ ತಮ್ಮ ಬಾಹುಬಲದಿಂದ ಸೈನ್ಯ ಕಟ್ಟಿ ರಾಜ್ಯಗಳನ್ನು ಹುಟ್ಟು ಹಾಕಿಕೊಂಡರು. ಇವರಿಗೆ ಮಾರ್ಗದರ್ಶಕರಾಗಿ ರಾಜಪುರೋಹಿತರು ನೇಮಕವಾದರು. ಅನೇಕ ಗುರುಕುಲಗಳು, ವಿದ್ಯಾಕೇಂದ್ರಗಳು ಸ್ಥಾಪಿತವಾದವು. ದೇವಾಲಯಗಳಲ್ಲಿ ಧಾರ್ಮಿಕ ಕೇಂದ್ರಗಳಲ್ಲಿ ಪೂಜಾರಿ-ಪುರೋಹಿತರು ನೇಮಕವಾದರು. ಅನೇಕ ಸ್ವಾರ್ಥಿಗಳು ಸಮಾಜ-ಧರ್ಮವ್ಯವಸ್ಥೆಯನ್ನು ವರ್ಣ-ಜಾತಿಗಳಾಗಿ ವಿಭಜಿಸಿ ಮೇಲು-ಕೀಳು, ಉಚ್ಚ-ನೀಚ, ಸ್ಪೃಶ್ಯ-ಅಸ್ಪೃಶ್ಯ ಮುಂತಾದ ಭೇದಗಳನ್ನು ಸೃಷ್ಟಿಸಿದರು. ಇದರ ಪರಿಣಾಮವಾಗಿ ಶೋಷಣೆಯೂ ಸುರುವಾಯಿತು.

ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗಗಳಲ್ಲಿ ಬಲಶಾಲಿಗಳು, ಬುದ್ಧಿವಂತರು ಪುರುಷ ಪ್ರಧಾನ ವ್ಯವಸ್ಥೆ ಜಾರಿಗೆ ತಂದರು. ಇದರ ಪರಿಣಾಮವಾಗಿ ಚಾತುರ್ವರ್ಣ ಸಮಾಜ-ಧರ್ಮ ವ್ಯವಸ್ಥೆಯಲ್ಲಿ ಶೂದ್ರಾತಿ ಶೂದ್ರರಂತೆ ಸ್ತ್ರೀಯರೂ ಶೋಷಣೆಗೊಳಗಾದರು.

೧೨ನೆಯ ಶತಮಾನದ ಬಸವೋದಯ ಕಾಲಕ್ಕೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಮೇಲ್ಜಾತಿಯವರು ಪ್ರಬಲರಾಗಿ ಜನಸಾಮಾನ್ಯರನ್ನು ತಮ್ಮ ಕಪಿಮುಷ್ಠಿಯಲ್ಲಿರಿಸಿಕೊಂಡರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ದಲಿತ ಅಸ್ಪೃಶ್ಯ ವರ್ಣ-ಜಾತಿಗಳವರಿಗೆ ಸಮಾಜೋ-ಧಾರ್ಮಿಕ ನೀತಿ-ನಿಯಮಾವಳಿಗಳು, ಕಾನೂನುಗಳನ್ನು ರಚಿಸಿ ಜಾರಿಗೆ ತಂದರು. ಇದರ ಪರಿಣಾಮವಾಗಿ ಆಳುವ ವರ್ಗ-ಆಳಿಸಿಕೊಳ್ಳುವ ವರ್ಗ, ಶೋಷಕರ ವರ್ಗ-ಶೋಷಿತರ ವರ್ಗ, ಭೂಮಾಲಿಕ ವರ್ಗ-ಕೂಲಿ ಕಾರ್ಮಿಕ ವರ್ಗಗಳಾಗಿ ಜನರು ವಿಭಜಿತರಾದರು. ಕೆಲವೇ ಕೆಲವು ಪಟ್ಟಭದ್ರರ ಕೈಯಲ್ಲಿ ಅಧಿಕಾರ ದೊರೆತು ಬಹುಸಂಖ್ಯಾತ ಶೂದ್ರಾತಿ ಶೂದ್ರರು ಎಲ್ಲ ರೀತಿಯ ಸುಖ-ಭೋಗ ಸೌಲಭ್ಯಗಳಿಂದ ವಂಚಿತರಾದರು.

ಎಲ್ಲ ವರ್ಣ-ಜಾತಿ-ವರ್ಗಗಳ ಸ್ತ್ರೀಯರು ಸ್ಮೃತಿಗಳ ಕಾಲದಲ್ಲಿ ಶೂದ್ರಾತಿ ಶೂದ್ರ ಪುರುಷರಂತೆಯೇ ಸ್ವಾತಂತ್ರ್ಯದಿಂದ ವಂಚಿತರಾಗಿ ಗುಲಾಮರಾದರು, ದಾಸಿಯರಾದರು, ಪುರುಷ ವರ್ಗದ ಭೋಗ ವಸ್ತುವಾದರು. ಹೆರಿಗೆಮನೆ-ಅಡಿಗೆಮನೆಗಳಿಗೆ ಸೀಮಿತರಾದರು. ನಿಮ್ನ ಜಾತಿಯ ಸ್ತ್ರೀಯರನ್ನು ದೇವದಾಸಿ, ಬಸವಿ, ವೇಶ್ಯೆಯರನ್ನಾಗಿಸಿ, ನರ್ತಕಿಯರಾಗಿಸಿ ಮೇಲ್ಜಾತಿಯವರು ನಿರಂತರವಾಗಿ ಉಪಭೋಗಿಸುತ್ತಾ ಬಂದರು.

ಮೇಲ್ಜಾತಿಗಳ ಸ್ತ್ರೀಯರನ್ನು ಧಾರ್ಮಿಕ ವ್ರತ-ನೇಮಗಳಲ್ಲಿ ಹಗಲಿರುಳು

ತೊಡಗಿಸಿಕೊಂಡಿರುವಂತೆ ಮಾಡಿದರು. ಅವರು ಸ್ವತಂತ್ರವಾಗಿ ಮನ-ಭಾವ ವಿಕಾಸ ಮಾಡಿಕೊಂಡು ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಾಧ್ಯವಾಗದಂತೆ ನೋಡಿಕೊಂಡರು. ಒಂದೆಡೆ ಮಾತೃದೇವೋಭವ, ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ ಎಂದು ಹೊಗಳುತ್ತಲೇ- **'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'** ಎಂದರೆ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರೇ ಅಲ್ಲ ಎಂದೂ ಸಾರಿದರು. ಸ್ಮೃತಿಕಾರರ ಈ ದ್ವಂದ್ವನೀತಿಯು ಮುಖದ ಮೇಲೆ ಕೈಯಾಡಿಸುತ್ತಲೇ ಕೆನ್ನೆಗೆ ಬಾರಿಸುವಂತಹ ಕುತ್ಸಿತ ಮನೋಭೂಮಿಕೆಯಾಗಿದೆ.

ಬಾಲಯಾ ಯುವತ್ಯಾ ವಾ ವೃದ್ಧಯಾ ವಾಪಿ ಯೋಷ್ಿತಾ ।
ನ ಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್‌ಕಾರ್ಯಂ ಗೃಹೇಷ್ವಪಿ ॥
(ಮನುಸ್ಮೃತಿ-ಅಧ್ಯಾಯ ೫ ಶ್ಲೋಕ್ ೧೪೭)

ಅಂದರೆ ಬಾಲಕಿಯು, ಯುವತಿಯು, ಮುದುಕಿಯು ಅಥವಾ ಹೆಂಗಸು ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೇ, ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡಕೂಡದು.

ಈ ರೀತಿ ಎಲ್ಲ ವರ್ಗ-ವರ್ಣ-ಜಾತಿಗಳ ಸ್ತ್ರೀಯರಿಗೆ ಬೇಡಿ ಹಾಕಿ, ಅವರನ್ನು ಬಂಧನದೊಳಗೆ ಇಟ್ಟಂತೆ, ಗೃಹಬಂಧನದಲ್ಲಿಟ್ಟರು. ಮದುವೆಯ ಕಾಲಕ್ಕೆ ಕನ್ಯೆಯು, 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬಂತೆ 'ಕನ್ಯಾದಾನ' ಪದ್ಧತಿಯನ್ನು ಆಚರಣೆಯಲ್ಲಿ ರೂಢಿಸಿದ್ದರು. ಅನ್ನದಾನ, ವಸ್ತ್ರದಾನ, ಹಿರಣ್ಯದಾನ, ಗೋದಾನ, ಭೂದಾನದಂತೆಯೇ ಕನ್ಯಾದಾನದ ಮೂಲಕ, ಕನ್ಯೆಯೂ ಜಡ ವಸ್ತುವಿನಂತೆ ಪರಿಗಣಿಸಲ್ಪಟ್ಟಿದ್ದಳು.

ವಿದ್ಯಾಹೀನ ಮಾನವಾಃ ಪಶುಸಮಾನಃ ಎಂದು ಹೇಳುತ್ತಲೇ ವಿದ್ಯೆಯನ್ನು ಕೇವಲ ಮೇಲ್ಜಾತಿಯ ಪುರುಷರಿಗೆ (ಬಾಲಕರಿಗೆ) ನೀಡುತ್ತಿದ್ದುದಲ್ಲದೇ, ಶೂದ್ರಾತಿಶೂದ್ರರು ಹಾಗೂ ಸ್ತ್ರೀಯರು ವಿದ್ಯಾಲಯ-ಗುರುಕುಲಗಳಿಗೆ ಹೋಗಿ ಕಲಿಯುವಂತಿರಲಿಲ್ಲ. ಮೇಲ್ಜಾತಿ ಸ್ತ್ರೀಯರು ವಿದ್ಯೆ-ಅಕ್ಷರಜ್ಞಾನ ಕಲಿಯಬೇಕಾದರೆ ಮನೆಯಲ್ಲಿ ತಂದೆ-ಸಹೋದರರೋ, ಅಜ್ಜನೋ ಕಲಿಸುತ್ತಿದ್ದರು. ಹೊಲ-ಮನೆ, ಭೂಮಿ-ಸೀಮೆ, ಪ್ರಾಣಿ-ಪಕ್ಷಿಗಳಂತೆ ಸ್ತ್ರೀಯೂ ಕೂಡ ಪುರುಷನ ಆಸ್ತಿಯಾಗಿದ್ದಳು. ಬೇಕಾದಾಗ ಇಟ್ಟುಕೊಳ್ಳುವುದು, ಬೇಡಾದಾಗ ಮಾರಾಟ ಮಾಡುವುದು ವ್ಯವಹಾರವಾದಂತಾಗಿತ್ತು. ಇಂತಹ ಹೀನಾಯ ಸ್ಥಿತಿಯಲ್ಲಿ ಸ್ತ್ರೀಕುಲವು ತಮ್ಮ ಉದ್ಧಾರಕ್ಕಾಗಿ ಒಳಗೊಳಗೇ ಸಂಕಟದಿಂದ ಪರಿತಪಿಸುತ್ತಿತ್ತು.

ಇನ್ನು ಶೂದ್ರ-ಅಸ್ಪೃಶ್ಯರ ಅಂದರೆ ಹಿಂದುಳಿದ, ಪರಿಶಿಷ್ಟ-ಜಾತಿಗಳ ಸ್ಥಿತಿ-ಗತಿಗಳಂತೂ ಶೋಚನೀಯವಾಗಿದ್ದವು. ಶೂದ್ರರು ದುಡಿದು ದುಡಿದು ಮೇಲ್ಜಾತಿಯವರ ಖಜಾನೆ ತುಂಬಿಸುವುದಕ್ಕೆ ಎತ್ತು-ಕತ್ತೆಗಳಂತೆ ಶ್ರಮಪಡುತ್ತಿದ್ದರು.

ಅಸ್ಪೃಶ್ಯ ದಲಿತ-ಪಂಚಮರು ಪಶುಗಳಿಗಿಂತ ಕಡೆಯಾಗಿ ಊರ ಹೊರಗೆ ಬೀದಿಗಳಲಿ ಗುಡಿಸಲುಗಳಲ್ಲಿ ವಾಸ, ಹೆಣದ ಮೇಲಿನ ಹಳೆ ಬಟ್ಟೆಗಳನ್ನುಟ್ಟು, ಯಾರೋ ಊರ ಹೊರಗೆ ತಂದು ಚೆಲ್ಲಿದ ತಂಗಳು-ಹಳಸಿದ ಅನ್ನ-ಆಹಾರ ತಿಂದೋ ಬದುಕುವದು. ಉಚ್ಚ ವರ್ಣೀಯರ ಮನೆ-ಓಣಿಗಳಲ್ಲಿ ದನ-ಕರುಗಳು ಸತ್ತು ಬಿದಿದ್ದರೆ ಅವುಗಳನ್ನು ಒಯ್ಯಲು ಮಧ್ಯಾಹ್ನ 'ಸಂಬೋಳಿ ಸಂಬೋಳಿ' ಎಂದು ಕೂಗುತ್ತಾ ಬರಬೇಕಾಗಿತ್ತು. ಕೊರಳಲ್ಲಿ ಮಡಿಕೆ, ಸೊಂಟಕ್ಕೆ ಪೊರಕೆ ಕಟ್ಟಿಕೊಂಡು ಬರಬೇಕಿತ್ತು. ಉಗುಳು ಬಂದರೆ ಕೊರಳಲ್ಲಿಯ ಮಡಿಕೆಯೊಳಗೆ ಉಗುಳುವುದು, ಉಚ್ಚಕುಲದವರು ನಡೆದಾಡುವ ಓಣಿಯಲ್ಲಿ ಉಗುಳುವಂತಿಲ್ಲ. ಇವರು ಬರಿಗಾಲಿನಲ್ಲಿ ನಡೆದು ಬಂದರೆ ಓಣಿಗಳ ರಸ್ತೆಯಲ್ಲಿ ಹೆಜ್ಜೆ ಮೂಡದಂತೆ ಪೊರಕೆ ಕೆಲಸ ಮಾಡುತ್ತಿತ್ತು. ಅವರ ಮನೆಗಳಲ್ಲಿ ನಡೆವ ಹೋಮ-ಹವನ ನೋಡುವಂತಿಲ್ಲ, ಮಂತ್ರಧ್ವನಿ ಕೇಳುವಂತಿಲ್ಲ. ಯಾವುದೇ ಮನೆಗಳ ಗೋಡೆಗಳನ್ನೋ, ವಸ್ತುಗಳನ್ನೋ ಮುಟ್ಟುವಂತಿಲ್ಲ. ಯಜ್ಞ-ಹೋಮ ನೋಡಿದರೆ ಕಣ್ಣು ಕೀಳಿಸುವುದು, ಮಂತ್ರ ಕೇಳಿದರೆ ಕಿವಿಯಲ್ಲಿ ಕಾದಸೀಸು ಸುರಿವುದು, ಮಂತ್ರ-ಉಚ್ಚರಣೆ ಮಾಡಿದರೆ ನಾಲಿಗೆ ಕತ್ತರಿಸುವುದು, ವಸ್ತುಗಳನ್ನು ಮುಟ್ಟಿದರೆ ಕೈ ಕತ್ತರಿಸುವ ಶಿಕ್ಷೆಗೆ ಪಾತ್ರರಾಗಬೇಕಿತ್ತು. ಉಚ್ಚವರ್ಣಿಯರ ಕೆರೆ-ಬಾವಿಗಳನ್ನು ಮುಟ್ಟುವಂತಿಲ್ಲ, ಹಳ್ಳ-ನದಿಗಳ ಕೆಳಭಾಗದಲ್ಲಿ ಹೋಗಿ ನೀರು ತರಬೇಕಿತ್ತು. ಇದೆಲ್ಲವನ್ನು ಗಮನಿಸಿದರೆ ಯಾವುದೋ ಒಂದು ಕ್ರೂರ-ಅಂಧಾಯುಗದಲ್ಲಿದ್ದೇವೆಂಬ ಭಾವನೆಯುಂಟಾಗುವ ಪರಿಸ್ಥಿತಿ ಇತ್ತು.

ಧಾರ್ಮಿಕವಾಗಿ ಶೂದ್ರಾತಿ ಶೂದ್ರರು ಹಾಗೂ ಮಹಿಳೆಯರಿಗೆ ಧಾರ್ಮಿಕ ಸಂಸ್ಕಾರ ನೀಡುತ್ತಿರಲಿಲ್ಲ. ಅವರಿಗೆ ದೇವಾಲಯಗಳ ಪ್ರವೇಶವಾಗಲೀ, ದೇವ ವಿಗ್ರಹಗಳ ಪೂಜೆಯಾಗಲೀ ನಿಷಿದ್ಧವಿತ್ತು. ದೇವಾಲಯಗಳ ನಿರ್ಮಾಣ, ವಿಗ್ರಹಗಳ ಕೆತ್ತನೆ ಶೂದ್ರರೇ ಮಾಡಿದರೂ ಕೂಡ, ಅವರಿಗೆ ಪ್ರವೇಶವಿರಲಿಲ್ಲ, ಹೆಬ್ಬಂಡೆಗಳನ್ನು ಒಡೆಯದ, ವಿಗ್ರಹ ಕೆತ್ತದ ಪೂಜಾರಿ-ಪುರೋಹಿತರು ಗರ್ಭಗುಡಿ ಪ್ರವೇಶಿಸಿ, ವಿಗ್ರಹಗಳ ಪೂಜೆ, ನೈವೇದ್ಯ-ಕಾಣಿಕೆ ಪಡೆದು ಭೋಗವಾದಿಗಳಾಗಿದ್ದರು. ಶೂದ್ರ-ಅಸ್ಪೃಶ್ಯರು-ಸ್ತ್ರೀಯರಿಗೆ ಕರ್ಮಸಿದ್ಧಾಂತ ಉಪದೇಶಿಸಿ ಹಿಂದಣ ಜನ್ಮಗಳ ಪಾಪದ ಫಲವಾಗಿ ನೀವು ಈ ಜನ್ಮದಲ್ಲಿ ಶೂದ್ರಾತಿ ಶೂದ್ರರಾಗಿ ಜನಿಸಿದ್ದೀರಿ. ಈ ಜನ್ಮದಲ್ಲಿ ನಮ್ಮ ಸೇವೆ ಮಾಡಿ ಪುಣ್ಯಗಳಿಸಿ, ಮುಂದಿನ ಜನ್ಮದಲ್ಲಿ ಒಳ್ಳೆಯ ಜನ್ಮ ಸಿಗಬಹುದು ಎಂದು ಆಶೆ ಹುಟ್ಟಿಸುತ್ತಿದ್ದರು. ಸ್ವರ್ಗದ ಆಸೆ, ನರಕದ ಭಯ ಹುಟ್ಟಿಸಿ ಅವರನ್ನು ಶಾಶ್ವತವಾಗಿ ಸೇವಕರಾಗಿ, ಗುಲಾಮರಾಗಿ, ದಾಸರಾಗಿ ದುಡಿಯುವಂತೆ ಮಾಡುತ್ತಿದ್ದರು.

ಸ್ತ್ರೀಯು ಮದುವೆಯಾಗಿ ಪತಿಯ ಸೇವೆ ಮಾಡುತ್ತಾ, ಆತನೇ ಪರಮೇಶ್ವರ ಎಂದು ಪೂಜಿಸಬೇಕು. ಆತನ ಮಕ್ಕಳಿಗೆ ಜನ್ಮನೀಡಬೇಕು. ಇನ್ನು ನಿಮ್ಮ ವರ್ಗದ ಬಾಲಕಿಯರನ್ನು ದೇವಾಲಯಗಳ ದೇವತೆಗಳಿಗೆ ವಿವಾಹ ಮಾಡಿಸಿ, ಮುತ್ತು

ಕಟ್ಟಿಸಿ, ಅವರನ್ನು ದೇವದಾಸಿ, ಬಸವಿ ಎಂದು ಕರೆದು, ಜೀವನಪರ್ಯಂತರ ದೇವತೆ-ದೇವಿಯರ ಹೆಸರಿನಲ್ಲಿ ಮೇಲ್ಜಾತಿಯವರು ಅವರನ್ನು ಭೋಗಿಸುತ್ತಿದ್ದರು. ಇವರುಗಳಿಗೆ ಹುಟ್ಟಿದ ಮಕ್ಕಳಿಗೆ ಶನಿಸಂತಾನವೆಂದು ಕರೆಯುತ್ತಿದ್ದರು. ಇವರಿಗೆ ತಾಯಿಯ ಹೆಸರು ಇರುತ್ತಿತ್ತೇ ಹೊರತು ತಂದೆಯ ಹೆಸರು ಇರುತ್ತಿರಲಿಲ್ಲ. [ಇಂದಿಗೂ ಕರ್ನಾಟಕದಲ್ಲಿ ಸವದತ್ತಿ, ಕೊಕಟನೂರ, ಎಲ್ಲಮ್ಮ ದೇವಾಲಯಗಳ ಪರಂಪರೆಯಲ್ಲಿ ದೇವದಾಸಿ ಪದ್ಧತಿ ಇದೆ.]

ಯಜ್ಞ-ಯಾಗ, ಹೋಮ-ಹವನಗಳ ನೆಪದಲ್ಲಿ ಪ್ರಾಣಿಬಲಿ, ಪೂರ್ಣಾಹುತಿ ಎಂದು ನಡೆಯುತ್ತಿತ್ತು. ಅಗ್ನಿದೇವನ ಪ್ರಸಾದವೆಂದು ಅದನ್ನು ಮೇಲ್ಜಾತಿಯವರು ತಿನ್ನುತ್ತಿದ್ದರು. ಪರಧನ, ಪರಸ್ತ್ರೀಯರ ಭೋಗ, ಅವ್ಯಾಹತವಾಗಿ ನಡೆದಿತ್ತು. ಕೆಲವು ಸಂಪ್ರದಾಯಗಳಲ್ಲಿ ಸ್ಮಶಾನದಲ್ಲಿ ಭೀಭತ್ಸ-ಭಯಾನಕ ಆಚರಣೆಗಳಿದ್ದವು. ಮದ್ಯ, ಮಾಂಸ, ಮೈಥುನ, ಮತ್ಸ್ಯ, ಮುದ್ರ ಎಂಬ ಪಂಚ 'ಮ' ಕಾರಗಳನ್ನು ಭೋಗಿಸಿ ಉನ್ಮಾದದಿಂದ ಕುಣಿದಾಡುತ್ತಿದ್ದರು. ಮಾಟ-ಮಂತ್ರ-ತಂತ್ರಗಳ ಹೆಸರಿನಲ್ಲಿ ಕನ್ಯಾಬಲಿ, ಕುರಿ-ಕೋಳಿ ಬಲಿ, ಕೋಣ ಬಲಿಗಳು ನಡೆಯುತ್ತಿದ್ದವು. ಜ್ಯೋತಿಷ್ಯ-ಪಂಚಾಂಗಗಳ ನೆಪದಲ್ಲಿ ಮೂಢ-ಮುಗ್ಧ ಜನರ ಶೋಷಣೆ ನಿರಂತರವಾಗಿ ಸಾಗಿತ್ತು.

ರಾಜರನ್ನು 'ರಾಜಾ ಭೂಮಿಯ ಮೇಲಿನ ಪ್ರತ್ಯಕ್ಷ ದೇವರು' ಎಂದು ಹೊಗಳಿ ಅವರಿಂದ ಹೇರಳವಾಗಿ ದತ್ತಿ-ದಾನ, ಮುತ್ತು-ರತ್ನಗಳ ಕಾಣಿಕೆ ಪಡೆಯುತ್ತಿದ್ದ ವಿಪ್ರರು, ತಮ್ಮನ್ನು ತಾವೇ ಭೂಸುರರು ಎಂದು ಸಾರಿಕೊಂಡಿದ್ದರು. ದುಡಿಯದೇ ದುಡ್ಡು ಬರುತ್ತಿದ್ದುದರಿಂದ, ಕಷ್ಟಪಡದೇ ಮೃಷ್ಟಾನ್ನ ದೊರೆಯುತ್ತಿದ್ದುದರಿಂದ ಗುರು. ಜಗದ್ಗುರು, ಆಚಾರ್ಯ, ಪುರೋಹಿತರು ಐಷಾರಾಮ ಭೋಗ ಜೀವನದಲ್ಲಿದ್ದರು. ಎಲ್ಲೆಡೆ ಉಚ್ಚ ವರ್ಣಿಯರಲ್ಲಿ ಭೋಗಜೀವನ, ಅಧಿಕಾರ ದಾಹ ತಾಂಡವಾಡುತ್ತಿದ್ದುದರಿಂದ ಪ್ರಜೆಗಳ ಸುಖ-ದುಃಖ, ಕಷ್ಟ-ಕಾರ್ಪಣ್ಯ ಕೇಳುವವರೇ ಇರಲಿಲ್ಲ. ಸಮಾಜೋ-ಧಾರ್ಮಿಕ ಪರಿಸ್ಥಿತಿಯು ಸಂಪೂರ್ಣ ಹದಗೆಟ್ಟು ಹೋಗಿತ್ತು.

೨. ಇಂಗಳೇಶ್ವರ-ಬಾಗೇವಾಡಿಯ ಮನೆತನ :

ಕ್ರಾಂತಿಗಂಗೋತ್ರಿ ಅಕ್ಕನಾಗಮ್ಮ ಹಾಗೂ ಜಗಜ್ಯೋತಿ ಬಸವೇಶ್ವರರು ಜನಿಸುವ ಪೂರ್ವದಲ್ಲಿ, ಅವರ ಪೂರ್ವಜರು ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಉನ್ನತ ಕುಲ, ಉನ್ನತ ಅಧಿಕಾರ, ಆರ್ಥಿಕ ಸಂಪನ್ನತೆ ಹೊಂದಿದವರಾಗಿದ್ದರು. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಭಾಗವಾಗಿದ್ದ ತರ್ದವಾಡಿ ೧೦೦೦ ಪ್ರಾಂತದ ಪ್ರಮುಖ ಪಟ್ಟಣವಾಗಿ ಇಂಗಳೇಶ್ವರ (ಅಂದಿನ ಹೆಸರು ಶಿಂಗಳೇಶ್ವರ) ಪ್ರಸಿದ್ಧವಾಗಿತ್ತು. ಇದಕ್ಕೆ ಹೊಂದಿಕೊಂಡು ಬಾಗೇವಾಡಿ ಎಂಬ ಬ್ರಾಹ್ಮಣ ಅಗ್ರಹಾರವಿತ್ತು.

ಇಂಗಳೇಶ್ವರದ ಪ್ರಸಿದ್ಧ ಬ್ರಾಹ್ಮಣ ಮನೆತನದ ಬಲದೇವರಸ ಮತ್ತು ಸಿದ್ಧರಸರೆಂಬ ಸಹೋದರರು ತರ್ದೇವಾಡ ೧೦೦೦ ಪ್ರಾಂತದ ಮಾಂಡಲಿಕ ರಾಜ ಕಲಚೂರಿ ಪೆರ್ಮಾಡಿಯ ರಾಜಧಾನಿ ಮಂಗಳವಾಡಿಯಲ್ಲಿ ಸಾಮಂತ ರಾಜನ ರಾಜಕೋಶದ ಮಂತ್ರಿ ಹಾಗೂ ದಣ್ಣಾಯಕರಾಗಿದ್ದರು. (ಇಂದಿನ ಸೋಲಾಪುರ ಜಿಲ್ಲೆಯಲ್ಲಿ) ಇವರ ಸೋದರಿ ಮಾದಲಾಂಬಿಕೆಯು ಇಂಗಳೇಶ್ವರದಲ್ಲಿಯೇ ತನ್ನ ತಾಯಿ-ತಂದೆಯವರ ಮನೆಯಲ್ಲಿದ್ದಳು. ಈ ಮಾದಲಾಂಬಿಕೆಯನ್ನು ಬಾಗೇವಾಡಿ ಅಗ್ರಹಾರದ ಅಧಿಪತಿ ಮಂಡಿಗೆಯ ಮಾದರಸನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಈ ಮಾದರಸರು ಶೈವಬ್ರಾಹ್ಮಣರಾಗಿದ್ದು ಶೈವಾಗಮಾಚಾರ್ಯ ಎಂಬ ಬಿರುದಾಂಕಿತರಾಗಿದ್ದ ಬ್ರಾಹ್ಮಣ ಶ್ರೇಷ್ಠ ವಿದ್ವಾಂಸರಾಗಿದ್ದು, ೫೦೦ ಬ್ರಾಹ್ಮಣ ಮನೆತನಗಳ ಮುಖ್ಯಸ್ಥರಾಗಿದ್ದರು.

೩. ಅಕ್ಕನಾಗಮ್ಮಳ ಜನನ-ಬಾಲ್ಯ-ವಿವಾಹ :

ಬಾಗೇವಾಡಿ ಅಗ್ರಹಾರದ ಅಧಿಪತಿ ಮಾದರಸ ಹಾಗೂ ಮಾದಲಾಂಬಿಕೆ ದಂಪತಿಗಳ ಉದರದಲ್ಲಿ ಕ್ರಿ.ಶ.೧೧೨೩ರಲ್ಲಿ ನಾಗಪಂಚಮಿಯ ದಿನ ಹೆಣ್ಣು ಮಗುವೊಂದು ಜನಿಸಿತು. ಮಾದಲಾಂಬಿಕೆಯ ತವರೂರು ಇಂಗಳೇಶ್ವರದಲ್ಲಿ ಈ ಹೆಣ್ಣು ಕೂಸು ಜನಿಸಿದ್ದು, ಆ ಮನೆತನದ ಸಂಪ್ರದಾಯದಂತೆ ನಾಗಪಂಚಮಿಯ ಸಂದರ್ಭದಲ್ಲಿ ಜನಿಸಿದ್ದರಿಂದ ಆ ಹೆಂಗೂಸಿಗೆ 'ನಾಗಲಾಂಬಿಕೆ' ಎಂದು ನಾಮಕರಣ ಮಾಡಲಾಯಿತು. ಬಸವಣ್ಣನವರಿಗಿಂತ ೧೨ ವರ್ಷ ಮೊದಲೇ ಜನಿಸಿದ್ದರಿಂದ ಬಸವಣ್ಣನವರ ಅಕ್ಕಳಾದುದರಿಂದ ಅಕ್ಕನಾಗಮ್ಮ, ಅಕ್ಕನಾಗಾಯಿ ಎಂದು ಕವಿಗಳು ವಚನಕಾರರು ಕರೆದಿರುವರು.

'ಅಕ್ಕನಾಗಮ್ಮ' ತಾಯಿಯ ತವರು ಮನೆಯಲ್ಲಿ ಮುತ್ತಬ್ಬೆಯ ಲಾಲನೆ-ಪಾಲನೆಯಲ್ಲಿ ಬೆಳೆದಳು. ತಂದೆ ಮಾದರಸರ ಮುದ್ದಿನ ಮಗಳಾಗಿ, ತಾಯಿ ಮಾದಲಾಂಬಿಕೆಯ ಅಕ್ಕರೆಯ ಕೂಸಾಗಿ, ಅಜ್ಜಿ ಮುತ್ತಬ್ಬೆಯ ವಾತ್ಸಲ್ಯದ ಮೊಮ್ಮಗಳಾಗಿ ಬೆಳೆದಳು. ಬಾಲ್ಯದಲ್ಲಿ ಬಾಗೇವಾಡಿಯ ಅಗ್ರಹಾರಕ್ಕಿಂತ ಹೆಚ್ಚಿಗೆ ಇಂಗಳೇಶ್ವರದ ಮುತ್ತಬ್ಬೆಯ ಹತ್ತಿರ ಬೆಳೆದುದರಿಂದ, ಇಂಗಳೇಶ್ವರ ಹೊರವಲಯದ ಗುಡ್ಡದಲ್ಲಿ ಜಡೆಸಿದ್ಧ ಮುನಿಗಳು ವಾಸವಿದ್ದರು. ಅವರ ದರ್ಶನಕ್ಕೆ ಮುತ್ತಬ್ಬೆಯೊಂದಿಗೆ ನಾಗಲಾಂಬಿಕೆಯೂ ಅಜ್ಜಿಯ ಕೈಹಿಡಿದು ಹೋಗುತ್ತಿದ್ದಳು. ಅವರು ಧ್ಯಾನ-ತಪಸ್ಸು ಮಾಡುತ್ತಿದ್ದುದನ್ನು ನೋಡುತ್ತಿದ್ದಳು. ತಾನೂ ಅವರಂತೆಯೇ ಧ್ಯಾನ ಮಾಡಬೇಕೆಂದು ಪಕ್ಕದ ಒಂದು ಗವಿಯಲ್ಲಿ ಹೋಗಿ ಕುಳಿತು ಗಂಟೆ-ಎರಡುಗಂಟೆ ಪದ್ಮಾಸನದಲಿ ಕಣ್ಣುಮುಚ್ಚಿ ಶಿವಧ್ಯಾನ ಮಾಡುತ್ತಿದ್ದಳು. ಮುತ್ತಬ್ಬೆ ಬಂದು ಎಚ್ಚರಿಸಿ, ಕರೆದುಕೊಂಡು ಮನೆಗೆ ಬರುತ್ತಿದ್ದಳು. ಹೀಗಾಗಿ ಆ ಗುಹೆಗೆ ಇಂದಿಗೂ **'ಅಕ್ಕನಾಗಮ್ಮ ಗವಿ'** ಎಂದು ಜನಪದರು ಕರೆದುಕೊಂಡು ಬಂದಿದ್ದಾರೆ.

ಹೆಣ್ಣು ಮಗು ಬೆಳೆದು ಹತ್ತು ವರುಷದವಳಾದಾಗ ಆಗಿನ ಸಂಪ್ರದಾಯ-

ದಂತೆ ಕಪ್ಪಡಿಸಂಗಮದ ಬ್ರಹ್ಮಪುರಿ (ಬ್ರಾಹ್ಮಣರ ಕೇರಿ)ಯಲ್ಲಿಯ ಯುವಕ **'ಶಿವದೇವ'** ನೊಂದಿಗೆ ವಿವಾಹ ನೆರವೇರಿಸಿದರು. ಆಗಿನ ಕಾಲದಲ್ಲಿ ಬಾಲ್ಯ ವಿವಾಹ ಸಂಪ್ರದಾಯ ಬದ್ಧವಾಗಿ ನಡೆಯುತ್ತಿತ್ತು. ಮದುವೆಯ ನಂತರವೂ ಬಾಲಕಿ ನಾಗಮ್ಮಳು ತಾಯಿ-ತಂದೆಯರ ಮನೆಯಲ್ಲಿಯೇ ಇರುತ್ತಿದ್ದಳು.

೪. ಬಸವಣ್ಣನವರ ಜನನ-ಬಾಲ್ಯ :

ಮಾದರಸ-ಮಾದಲಾಂಬಿಕೆಯರು ಪುತ್ರನೊಬ್ಬ ವಾರಸುದಾರಿಕೆಗೆ ಬೇಕೆಂಬ ಹಂಬಲದಿಂದ ಕಪ್ಪಡಿ ಸಂಗಮದ ಸ್ಥಾನಪತಿ ಶ್ರೀ ಈಶಾನ್ಯ ಗುರುಗಳಲ್ಲಿ ಹೋಗಿ ತಮ್ಮ ಮನದ ಅಪೇಕ್ಷೆಯನ್ನು ವ್ಯಕ್ತಗೊಳಿಸಿದರು. ಆಗ ಅವರ ಕುಲಗುರುಗಳಾದ ಈಶಾನ್ಯಗುರುಗಳು (ಸಂಗಮೇಶ್ವರ ದೇವಾಲಯದ ಸ್ಥಾನಪತಿಗಳಾಗಿದ್ದರಿಂದ ಸಂಗಮದ ಗುರುಗಳು, ಸಂಗಮೇಶ್ವರ ಗುರುಗಳು ಎಂದೂ ಕರೆಯಲಾಗಿದೆ.) ಮಾದರಸ-ಮಾದಲಾಂಬಿಕೆಯರಿಗೆ ಮಂತ್ರಾಕ್ಷತೆಗಳಿಂದ ಆಶೀರ್ವದಿಸುತ್ತಾ- 'ಬಾಗೇವಾಡಿ ಅಗ್ರಹಾರದಲ್ಲಿರುವ ಸಂಗಮೇಶ್ವರ ದೇವಾಲಯದ ವೃಷಭನ ಹೆಸರಿನಲ್ಲಿ ' ವೃಷಭ ನೋಂಪಿ ವ್ರತ' ಆಚರಿಸಲು ಸಲಹೆ ನೀಡಿದರು.

ಮಾದಲಾಂಬಿಕೆಯು ಹನ್ನೆರಡು ಮಾಸಗಳ ಕಾಲ 'ನಂದಿವ್ರತ' ಮೂಲಕ ದೇವಕರುಣೆಯಿಂದ ಗರ್ಭಿಣಿಯಾದಳು. ನಿರಂತರ ಶಿವನಾಮಸ್ಮರಣೆ, ಶಿವಧ್ಯಾನ ಮಾಡುತ್ತಾ ಇರಲು, ನವಮಾಸ ತುಂಬಿ ಅಕ್ಷತದಗಿ ಅಮವಾಸ್ಯೆಯ ವೈಶಾಖ ಮಾಸದ ಮೂರನೆಯ ದಿನ ಅಂದರೆ ಅಕ್ಷಯ ತೃತೀಯಾ ರೋಹಿಣಿ ನಕ್ಷತ್ರದಲಿ ಕ್ರಿ.ಶ. ೧೧೧೦ಶರಲ್ಲಿ ಗಂಡುಮಗು ಜನಿಸಿತು. ಮಾದರಸ ಮಾದಲಾಂಬಿಕೆಯರಿಗೆ ಪುತ್ರ ಸಂತಾನವಾದುದನ್ನು ತಿಳಿದ ಇಂಗಳೇಶ್ವರ ಬಾಗೇವಾಡಿಯ ಅಗ್ರಹಾರದಿಂದ ಬಂಧು-ಬಳಗದವರು ಆನಂದಪಟ್ಟರು.

ಮಾದಲಾಂಬಿಕೆಯ ತಾಯಿಯ ಮನೆಯಲ್ಲಿ (ಇಂಗಳೇಶ್ವರದ ಮುತ್ತಬ್ಬೆಯ ಮನೆಯಲ್ಲಿ) ಮಗು ಜನಿಸಿದಾಗ, ಅದು ಕಣ್ಣು ತೆರೆಯದೇ, ಮಿಸುಗದೇ ಇದ್ದುದರಿಂದ ಎಲ್ಲರಿಗೂ ಆತಂಕವಾಯಿತು. ಅದೇ ಕಾಲಕ್ಕೆ ಸಂಗಮದ ಈಶಾನ್ಯ ಗುರುಗಳು ದಯಮಾಡಿಸಿದರು. ಮಗುವಿನ ಹತ್ತಿರ ಹೋಗಿ ಯೋಗದೃಷ್ಟಿಯಿಂದ ಅರಿತು, ಮಗುವಿನ ಹಣೆಗೆ ವಿಭೂತಿ ಧರಿಸಿ, ಕಿವಿಯಲಿ ಓಂ ನಮಃ ಶಿವಾಯ ಎಂಬ ಪ್ರಣವ ಪಂಚಾಕ್ಷರಿ ಮಂತ್ರ ಉಸುರಲು, ಯೋಗಸಮಾಧಿಯಿಂದ ಹೊರಬರುವ ಶಿಶು ಕಣ್ದೆರೆದು ಈಶಾನ್ಯ ಗುರುಗಳನ್ನು ನೋಡಿ ಮುಗುಳ್ನಗೆ ಸೂಸಿತು. ಇಂಗಳೇಶ್ವರ ಬಾಗೇವಾಡಿಯ ಬಂಧುಗಳಿಗೆ, ತಂದೆ-ತಾಯಿ-ಮುತ್ತಬ್ಬೆಯರಿಗೆ ಸಂತಸವಾಯಿತು. ಎಲ್ಲರೂ ಗುರುಗಳಿಗೆ ವಂದಿಸಿ, ಸಂಗಮಕ್ಕೆ ಬೀಳ್ಕೊಟ್ಟರು.

ವೃಷಭ ನೋಂಪಿ ವ್ರತದಿಂದ, ಕರುಣೆಯಿಂದ ಜನಿಸಿದ ಪುತ್ರನಿಗೆ

'ಬಸವರಸ' ಎಂದು ನಾಮಕರಣ ಮಾಡಿದರು. ಅಕ್ಕನಾಗಮ್ಮಳ ಸಂತೋಷಕ್ಕೆ ಪಾರವೇ ಇರಲಿಲ್ಲ. ೧೧-೧೨ ವರುಷದ ನಾಗಮ್ಮ ತಮ್ಮನ ಲಾಲನೆ-ಪಾಲನೆಯಲ್ಲಿ ಮೈಮರೆತಳು. ತಾಯಿ ಮಾದಲಾಂಬಿಕೆ ಹೆರಿಗೆಯ ನಂತರ ಅನಾರೋಗ್ಯ ಪೀಡಿತಳಾದುದರಿಂದ ಬಾಗೇವಾಡಿಯಲ್ಲಿ ಮಗುವಿನ ಜವಾಬ್ದಾರಿ ನಾಗಮ್ಮಳೇ ವಹಿಸಿಕೊಳ್ಳಬೇಕಾಯಿತು. ಈ ಅನುಭವವನ್ನು ಅಕ್ಕನಾಗಮ್ಮ ಅನಂತರ ತನ್ನ ವಚನವೊಂದರಲ್ಲಿ ಅಭಿವ್ಯಕ್ತಗೊಳಿಸಿರುವುದು ಅನನ್ಯವಾಗಿದೆ-

ಬಸವನೇ ಮುಖಸೆಜ್ಜೆ, ಬಸವನೇ ಅಮಳೋಕ್ಯ
ಬಸವನ ನಾನೆತ್ತಿ ಮುದ್ದಾಡಿಸುವೆನು
ಬಸವಾ, ಸಂಗನಬಸವದೇವಾ ಜಯತು
ಬಸವಾ, ಸಂಗನಬಸವಲಿಂಗಾ ಜಯತು
ಬಸವಗೂ ಎನಗೂ ಭಾವ ಭೇದವಿಲ್ಲ
ಬಸವಗೂ ಎನಗೂ ರಾಸಿಕೂಟವುಂಟು
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯಾ
ಬಸವ ಬಸವ ಬಸವಾ

ಈ ರೀತಿಯಾಗಿ ಬಸವ ಶಿಶುವನ್ನು ಹೆತ್ತ ತಾಯಿಗಿಂತ ಮಿಗಿಲಾಗಿ ಹೊತ್ತ ತಾಯಿಯಾಗಿ ಪೊರೆದವಳು ಅಕ್ಕನಾಗಮ್ಮ. ಬಸವಣ್ಣನಿಗೆ ನುಡಿಗಲಿಸಿದಳು, ನಡೆಯಕಲಿಸಿದವಳು, ಆತನ ಬಾಲ ಸಹಜ ಪ್ರಶ್ನೆಗಳಿಗೆ ಉತ್ತರಿಸಿದವಳು ಅಕ್ಕನಾಗಮ್ಮ. ಆತನು ಓಡಾಡಲು ಪ್ರಾರಂಭಿಸಿದಾಗ ಅಗ್ರಹಾರದ ಒಳಹೊರಗೆಲ್ಲ ಕೈಹಿಡಿದು ನಡೆಸಿದವಳು, ಆಟ-ಪಾಠಗಳನ್ನು ಕಲಿಸಿದವಳು ಅಕ್ಕನಾಗಮ್ಮ. ತಾನು ಚಿಕ್ಕವಳಿದ್ದಾಗ ಇಂಗಳೇಶ್ವರದ ಮುತ್ತಜ್ಜಿ, ಸಿದ್ಧಮುನಿಗಳು ಹೇಳಿದ ಪುರಾತನ ಶಿವಭಕ್ತರ ಪುರಾಣ ಕಥೆಗಳನ್ನು ತಮ್ಮನಿಗೆ ಹೇಳುತ್ತಾ, ನಡು ನಡುವೆ ಆತನು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾ ವಿಚಾರಶಕ್ತಿ ಬೆಳೆಸಿದವಳು ಅಕ್ಕನಾಗಮ್ಮ.

ಬಾಲಕ ಬಸವಣ್ಣನಲ್ಲಿ ಸುಪ್ತವಾಗಿದ್ದ ಅರಿವನ್ನು ಜಾಗೃತಗೊಳಿಸಿ ಪ್ರತಿಭೆಯನ್ನು ಅರಳುವಂತೆ ಮಾಡಿ, ಬುದ್ಧಿ ವಿಕಾಸವಾಗುವಂತೆ ಮಾಡಿ ಸಮಾಜದ ಸ್ಥಿತಿ-ಗತಿಗಳ ಪರಿಚಯ ಮಾಡಿಸಿದ ಮಹಾತಾಯಿ ಅಕ್ಕನಾಗಮ್ಮ. ೫ನೆಯ ವಯಸ್ಸಿಗೆ ಬಸವಣ್ಣನಿಗೆ ಮನೆಯಲ್ಲಿಯೇ ಅಕ್ಷರಾಭ್ಯಾಸ, ಕನ್ನಡ-ಸಂಸ್ಕೃತ ವರ್ಣಮಾಲೆ, ವ್ಯಾಕರಣಗಳ ಅಭ್ಯಾಸ ನಡೆಯಿತು.

ಅಕ್ಕನಾಗಮ್ಮಳಿಗೆ ೧೮ ವರುಷ ತುಂಬಲು, ಕಪ್ಪಡಿ ಸಂಗಮದ ಬ್ರಹ್ಮಪುರಿಯಲ್ಲಿರುವ ಪತಿ ಶಿವದೇವರ ಮನೆಗೆ ಮಾದರಸ ಕಳುಹಿಸಿ ಬಂದರು. ಸಂಸ್ಕಾರವಂತಳೂ ಸುಶೀಲೆಯೂ ಜಾಣೆಯೂ ಆಗಿದ್ದ ನಾಗಲಾಂಬಿಕೆಯು ಪತಿಯ ಮನೆಯಲ್ಲಿ ಸಂಸಾರದ ಜವಾಬ್ದಾರಿ ಹೊತ್ತಳು.

೫. ಬಸವಣ್ಣನ ಉಪನಯನ ಪ್ರಸಂಗ-ಅಗ್ರಹಾರದಿಂದ ಬಹಿಷ್ಕಾರ :

ಬ್ರಾಹ್ಮಣ ಧರ್ಮ-ಸಂಪ್ರದಾಯದಂತೆ ಬಾಲಕ ಬಸವರಸನಿಗೆ ೮ ವರುಷ ತುಂಬಲು ಉಪನಯನ-ಮುಂಜಿವೆ ಸಂಸ್ಕಾರ ನೆರವೇರಿಸಲು ಮಾದರಸರು ನಿರ್ಧರಿಸಿ, ಅದಕ್ಕೆ ತಿಥಿ-ಮೂಹೂರ್ತ ಗೊತ್ತು ಮಾಡಿ ಪೂರ್ವಸಿದ್ಧತೆ ಮಾಡಿಕೊಂಡರು. ಈ ಸಮಾರಂಭಕ್ಕೆ ಕಪ್ಪಡಿ ಸಂಗಮದಿಂದ ಮಗಳು ನಾಗಲಾಂಬಿಕೆ ಹಾಗೂ ಅಳಿಯ ಶಿವದೇವರನ್ನು ಕರೆಯಿಸಿಕೊಂಡರು. ಇಂಗಳೇಶ್ವರದ ಮುತ್ತಜ್ಜಿ ಹಾಗೂ ಬಂಧು-ಬಳಗದವರಿಗೂ ಆಮಂತ್ರಣ ನೀಡಿದರು.

ಉಪನಯನ ಸಂಸ್ಕಾರದ ದಿನ ಬೆಳಗಿನ ಜಾವ ಹೋಮ-ಹವನದ ಸಿದ್ಧತೆ ಮಾಡಲಾಯಿತು. ವೈದಿಕ-ಶಿವಾಗಮ ಪುರೋಹಿತರು, ವಿಪ್ರವಿದ್ವಾಂಸರು ಆಗಮಿಸಿದರು. ಅಗ್ರಹಾರದ ಅಧಿಪತಿಯ ಮಗನ ಮುಂಜಿವೆ ಎಂದರೆ ಹೇಳುವುದೇನು?

ಬಾಲಕ ಬಸವಣ್ಣನಲ್ಲಿ ಕೆಲವು ಪ್ರಶ್ನೆಗಳು ಉದ್ಭವವಾದವು. ಅವುಗಳನ್ನು ಆ ಪುರೋಹಿತರು, ವಿದ್ವಾಂಸರ ಮುಂದೆ ಕೇಳತೊಡಗಿದನು.

೧. ಉಪನಯನವೆಂದರೇನು ? ಇದನ್ನು ಯಾಕೆ ಮಾಡಿಸಿಕೊಳ್ಳಬೇಕು ?

ಉಪನಯನವೆಂದರೆ ಇದೊಂದು ಧಾರ್ಮಿಕ ಸಂಸ್ಕಾರ, ನಿನ್ನೊಳಗಿನ ಅರಿವಿನ ಕಣ್ಣು ಜಾಗೃತವಾಗುತ್ತದೆ. ಹುಟ್ಟಿನಿಂದ ಎಲ್ಲರೂ ಶೂದ್ರರೇ, ಈ ಸಂಸ್ಕಾರದಿಂದ ನೀನು ದ್ವಿಜ ಅಂದರೆ ಎರಡನೆಯ ಜನ್ಮ, ಅಂದರೆ ಬ್ರಾಹ್ಮಣನಾಗುತ್ತೀ. ನಮ್ಮ ಶಾಸ್ತ್ರಗಳಲ್ಲಿ 'ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜಮುಚ್ಯತೆ' ಎಂದು ಹೇಳಲಾಗಿದೆ.

೨. ಅಗ್ರಹಾರದ ಹೊರಗೆ ಕೇರಿಗಳಲ್ಲಿ ನನ್ನ ವಯಸ್ಸಿನ ಗೆಳೆಯರಿದ್ದಾರೆ ಅವರಿಗೇಕೆ ಈ ಸಂಸ್ಕಾರ ಮಾಡುವದಿಲ್ಲ ?

ಅವರು ಶೂದ್ರರು, ಅಸ್ಪೃಶ್ಯರು ಅವರು ಉಚ್ಚವರ್ಣದವರ ಸೇವೆಗಾಗಿ ಹುಟ್ಟಿದವರು. ಅವರಿಗೆ ಈ ಸಂಸ್ಕಾರ ಕೊಡಲು ಬರುವದಿಲ್ಲ. ಇನ್ನು ಮುಂದೆ ನೀನು ಅವರೊಂದಿಗೆ ಆಡುವಂತಿಲ್ಲ, ಮುಟ್ಟಿಸಿಕೊಳ್ಳುವಂತಿಲ್ಲ, ಬ್ರಾಹ್ಮಣರಿಗೆ ಈ ಸಂಸ್ಕಾರ ಕಡ್ಡಾಯವಾಗಿದೆ ಎಂದರು.

೩. ನಮ್ಮ ಮನೆಯಲಿ ನನ್ನ ಅಕ್ಕ ನಾಗಮ್ಮ ಇದ್ದಾಳೆ. ಅವಳು ನನಗಿಂತ ಹಿರಿಯಳು. ಅವಳಿಗೇಕೆ ಈ ಸಂಸ್ಕಾರ ಮಾಡಿಲ್ಲ ? ನನ್ನೊಂದಿಗೆ ಅವಳಿಗೂ ಈ ಸಂಸ್ಕಾರ ಮಾಡಿರಿ ಎಂದು ಹಟ ಹಿಡಿದನು.

ಪುರೋಹಿತರು ಸಿಡಿಮಿಡಿಗೊಂಡು-ನಮ್ಮ ಧರ್ಮಶಾಸ್ತ್ರಗಳ್ಲಿ ಸ್ತ್ರೀಯರು

ಧಾರ್ಮಿಕ ಸಂಸ್ಕಾರಗಳಿಗೆ ಅನರ್ಹರು. ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ' ಎಂದು ಹೇಳಲಾಗಿದೆ. ಅವರೂ ಶೂದ್ರರೆಂದೇ ಪರಿಗಣಿಸಲಾಗಿದೆ ಎಂದರು.

ಆಗ ಬಸವಣ್ಣ ವಿಚಾರ ಮಾಡಿದ. ನನ್ನ ಅಕ್ಕ, ನನ್ನ ತಾಯಿ, ನನ್ನ ಅಜ್ಜಿ ಇವರೆಲ್ಲ ಹೆಣ್ಣುಮಕ್ಕಳೇ, ಇವರಿಗೆ ಸಂಸ್ಕಾರ ಇಲ್ಲದಿರುವದರಿಂದ ಇವರೆಲ್ಲ ಶೂದ್ರರು ಎನ್ನುವುದಾದರೆ, ನಾನ್ಹೇಗೆ ಬ್ರಾಹ್ಮಣನಾಗುತ್ತೇನೆ? ಜನಿವಾರ ಹಾಕುವದರಿಂದ ನಾನು ದ್ವಿಜನಾಗುವುದಾದರೆ, ಜನಿವಾರ ಹಾಕಿದರೆ ಅವರೂ ದ್ವಿಜರಾಗುವುದಿಲ್ಲವೆ? ನನ್ನ ಅಕ್ಕನಿಗೆ ಇಲ್ಲದ ಸಂಸ್ಕಾರ ನನಗೂ ಬೇಡ ಎಂದು ಹಟ ಹಿಡಿದನು.

ಆಗ ಪುರೋಹಿತರು ಒತ್ತಾಯದಿಂದ ಜನಿವಾರವನ್ನು ಆತನ ಕೈಯಲ್ಲಿ ಕೊಟ್ಟು-ಮಂತ್ರ ಹೇಳಲು ಮುಂದಾದರು. ಇದರಿಂದ ಸಿಟ್ಟಿನಿಂದ ಬಾಲಕ ಬಸವಣ್ಣನು-ಕರ್ಮಲತೆಯಂತೆ ಕಂಡ ಆ ಜನ್ನಿವಾರವನು ತೆಗೆದು ಬಿಸುಟನು. ಹರಿಹರ ಕವಿಯ 'ಬಸವರಾಜದೇವರ ರಗಳೆ' ಎಂಬ ಕಾವ್ಯದಲ್ಲಿ ಹೀಗೆ ವರ್ಣಿಸಲಾಗಿದೆ-

'ಶಿವಭಕ್ತಿಯುಂ ಕರ್ಮಮುಂ ಎಂದುಮೊಂದಾಗಿರದು ಎಂದೊಲ್ಲದೆ ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟ' ಎಂದು ಇರುತ್ತದೆ.

ಬಸವಣ್ಣನ ಈ ವರ್ತನೆಯಿಂದ ಸಿಟ್ಟಿಗೆದ್ದ ಪುರೋಹಿತರು ಬಾಲಕನ ಉದ್ಧಟತನ ಕಂಡು ನೀನು ಅಗ್ರಹಾರದಲ್ಲಿರಲು ಅಯೋಗ್ಯನಿರುವಿ, ಧರ್ಮಲಂಡನಾಗಿರುವಿ, ಎಂದು ಹೇಳುತ್ತಾ-ಅಗ್ರಹಾರದಿಂದ ಬಹಿಷ್ಕಾರ ಹಾಕಿದರು.

ತಂದೆ-ತಾಯಿ ಎಷ್ಟೇ ಗೋಗರೆದರೂ, ಬಸವಣ್ಣ ತನ್ನ ಹಟ ಬಿಡಲಿಲ್ಲ. ಮನೆಬಿಟ್ಟು ಹೊರಟನು. ಆಗ ಆತನ ಪ್ರೀತಿಯ ಅಕ್ಕನಾಗಮ್ಮ ಹಾಗೂ ಭಾವ ಶಿವದೇವರು ಬಸವಣ್ಣನ ಹಿಂದಿನಿಂದ ಹೊರಟರು. ಕೊನೆಗೆ ಆತನನ್ನು ಕರೆದುಕೊಂಡು ತಮ್ಮ ಊರಾದ ಕಪ್ಪಡಿ ಸಂಗಮಕ್ಕೆ ಬಂದರು.

ಈ ಸಮಾಚಾರ ತಿಳಿದ ಮಾದರಸ-ಮಾದಲಾಂಬಿಕೆಯರು ಕಪ್ಪಡಿ ಸಂಗಮಕ್ಕೆ ಬಂದು ಮಗನಿಗೆ ಈಶಾನ್ಯಗುರುಗಳ ಹತ್ತಿರ ಕರೆದೊಯ್ದು ತಿಳಿವಳಿಕೆ ಹೇಳಿಸಲು ಪ್ರಯತ್ನಿಸಿದರು. ಬಾಲಕ ಬಸವಣ್ಣನ ಸತ್ಯನಿಷ್ಠ ವಿಚಾರ ಅರಿತ ಗುರುಗಳು-ಬಸವಣ್ಣನನ್ನು ಇಲ್ಲಿಯೇ ಬಿಟ್ಟು ಹೋಗಿರಿ. ನಮ್ಮ ಗುರುಕುಲದಲ್ಲಿ ವಿದ್ಯಾರ್ಜನೆ ಮಾಡಲಿ ಎಂದರು.

ಸಿಂಗಿರಾಜನ ಅಮಲ ಬಸವ ಪುರಾಣದಲಿ ಈ ಪ್ರಸಂಗ ವರ್ಣಿತವಾಗಿದೆ- 'ಸಂಸಾರ ಭ್ರಾಂತಳಿಯದ ಅಳಿಯ ಶಿವದೇವ, ಮಗಳು ನಾಗಾಯಿಯನು ಆತಂಗೆ ಸೇವೆಗೋಸುಗಮಿತ್ತು ತಕ್ಕುದಂ ಕೊಟ್ಟು ಬಂದರು ಇತ್ತಲು' ಎಂದು ಹೇಳಲಾಗಿದೆ.

೬. ಕಪ್ಪಡಿ ಸಂಗಮದಲ್ಲಿ ವಿದ್ಯಾರ್ಜನೆ-ಇಷ್ಟಲಿಂಗದ ಆವಿಷ್ಕಾರ :

ಕಪ್ಪಡಿ ಸಂಗಮವು ಕೃಷ್ಣಾ ಹಾಗೂ ಮಲಾಪಹಾರಿ ನದಿಗಳ ಸಂಗಮದ ಸುಂದರ ತಾಣವಾಗಿದ್ದು, ಅಲ್ಲಿ ಪ್ರಾಚೀನ ಕಾಲದ ಸಂಗಮೇಶ್ವರ, ಕಾಳೇಶ್ವರ, ಆಚೇಶ್ವರ ಎಂಬ ಮೂರು ದೇವಾಲಯಗಳ ಶೈವ ಕ್ಷೇತ್ರವಾಗಿತ್ತು. ಪಾಶುಪತಶೈವರು ಮತ್ತು ಸ್ಥಾನಪತಿಗಳು, ವಿದ್ಯಾಗುರುಕುಲದ ಅಧಿಪತಿಗಳೂ ಆಗಿದ್ದ ಈಶಾನ್ಯಗುರುಗಳು ಇವರನ್ನೇ ಸಂಗಮದ ಗುರುಗಳು, ಸಂಗಮೇಶ್ವರದ ಗುರುಗಳು ಎಂದು ಕರೆಯಲಾಗುತ್ತಿತ್ತು.

ಈಶಾನ್ಯ ಗುರುಗಳ ಮಾರ್ಗದರ್ಶನದಲ್ಲಿ ಬಸವರಸನ ಅಧ್ಯಯನ ಪ್ರಾರಂಭವಾಯಿತು. ಪ್ರತಿದಿನ ಬೆಳಗಿನ ಮೂರು ಗಂಟೆಗೆ ಎದ್ದು, ನದಿಯಲ್ಲಿ ಈಜಾಡಿ ಸ್ನಾನ ಮಾಡಿ, ಮೂರು ದೇವಾಲಯಗಳಲ್ಲಿರುವ ಸ್ಥಾವರಲಿಂಗಗಳ ಪೂಜೆಯಲಿ ಭಾಗವಹಿಸಿ, ಸುಪ್ರಭಾತ ಸಮಯದಲಿ ಪ್ರಕೃತಿಯ ನಡುವೆ ಯೋಗಾಸನ, ಪ್ರಾಣಾಯಾಮ, ಧ್ಯಾನ ಮಾಡುತ್ತಿದ್ದನು. ಅನಂತರದ ಗುರುಕುಲದ ವೇಳಾಪತ್ರಿಕೆ ಅನುಸಾರ ಪ್ರಾರ್ಥನೆ, ವಿವಿಧ ಪಾಠಗಳ ಬೋಧನೆ ಕೇಳುವುದು, ಬರೆದುಕೊಳ್ಳುವುದು, ಪ್ರಾಚೀನ ಗ್ರಂಥಗಳ ವಿದ್ಯಾಭ್ಯಾಸ ವೇದ-ಆಗಮ-ಶಾಸ್ತ್ರ-ಪುರಾಣ ಷಡ್‌ದರ್ಶನಗಳು; ಚಾರ್ವಾಕ್, ಜೈನ, ಬೌದ್ಧ ದರ್ಶನಗಳು ರಾಮಯಣ, ಮಹಾಭಾರತಗಳ ಪಾಠ-ಪ್ರವಚನ, ಯೋಗದ ವಿವಿಧ ಪ್ರಕಾರಗಳ ಸಾಧನೆ, ಅಣಿಮಾದಿ ಅಷ್ಟಸಿದ್ಧಿಗಳ ಜ್ಞಾನ, ಭಾರತೀಯ ಸನಾತನ ಧರ್ಮ-ಪರಂಪರೆ, ವೇದಾಂತದ ವಿವಿಧ ಮತಗಳ ಪ್ರತಿಪಾದನೆ-ನಿರಸನ, ಮಂಡನೆ-ಖಂಡನೆ, ತರ್ಕ-ವಿತರ್ಕ, ಜ್ಯೋತಿರ್‌ವಿಜ್ಞಾನ, ಪಂಚಾಂಗ-ಜ್ಯೋತಿಷ್ಯಗಳು...ಒಂದೇ ಎರಡೇ ಎಲ್ಲ ಚೌಷಷ್ಠಿ ವಿದ್ಯೆಗಳ ಜ್ಞಾನ-ವಿಜ್ಞಾನ, ವಿಮರ್ಶೆ-ಪರಾಮರ್ಶೆಗಳ ಅಧ್ಯಯನ ನಡೆಯಿತು.

ಗುರುಕುಲದಿಂದ ಸಂಜೆ ಬ್ರಹ್ಮಪುರಿಯಲ್ಲಿಯ ಅಕ್ಕ-ಭಾವರ ಮನೆಗೆ ಬಂದು ವಾಸ್ತವ್ಯ. ಸಂಜೆಯ ಊಟದ ನಂತರ, ಅಕ್ಕನಾಗಮ್ಮಳೊಂದಿಗೆ ಅಂದು ಗುರುಕುಲದಲ್ಲಿ ನಡೆದ ಪಾಠ-ಪ್ರವಚನಗಳು, ಸಂವಾದಗಳ ಕುರಿತು ವರದಿ ನೀಡುತ್ತಿದ್ದನು. ಅಕ್ಕನಾಗಮ್ಮಳು ತಮ್ಮನ ಪ್ರತಿಭೆ-ಜಾಣ್ಮೆ-ಬೆಳವಣಿಗೆ ಕಂಡು ಹರ್ಷಿತಳಾಗುತ್ತಿದ್ದಳು. ಹೀಗೆಯೇ ಹತ್ತಾರು ವರುಷ ಅಧ್ಯಯನ ಸಾಗಿತು. ಬಸವಣ್ಣನವರ ಗುರುಕುಲ ಅಧ್ಯಯನವು ಪ್ರಾಥಮಿಕ-ಮಾಧ್ಯಮಿಕ ಹಂತಗಳನ್ನು ದಾಟಿ ಪ್ರೌಢ ಉನ್ನತ ಹಂತಕ್ಕೆ ತಲುಪತೊಡಗಿತು.

ಷೋಡಶ ವರುಷದ ಬಸವಣ್ಣನವರಲ್ಲಿ ಒಂದು ನಿರ್ಧಾರ ಘಟ್ಟಿಗೊಳ್ಳ ತೊಡಗಿತು. ವೇದಗಳ ಜ್ಞಾನಕಾಂಡವನ್ನು ಕರ್ಮಕಾಂಡದಲ್ಲಿ ಸ್ವಾರ್ಥಿಕರ್ಮಠ ಕೆಲವು ವಿಪ್ರರು, ಪುರೋಹಿತರು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ

ದುರುಪಯೋಗ ಪಡಿಸಿಕೊಂಡು ಸಮಾಜವನ್ನು ಶೋಷಿಸುತ್ತಿರುವುದು, ಧರ್ಮಶಾಸ್ತ್ರಗಳ ದುರ್ಬಳಕೆ ಮಾಡಿಕೊಂಡಿರುವುದು, ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆ, ಗಟ್ಟಿಗೊಳಿಸಿ ವರ್ಣಭೇದ, ಜಾತಿಭೇದ, ಲಿಂಗಭೇದ, ವರ್ಗಭೇದ, ಆಶ್ರಮಭೇದ ಕಲ್ಪಿಸಿರುವುದು ಅರಿವಿಗೆ ಬಂದಿತು. 'ಏಕಂ ಸತ್ ವಿಪ್ರಃ ಬಹುದಾ ವದಂತಿ' ಎಂಬುದನ್ನು ತಿರುಚಿ ನೂರಾರು ಸಾವಿರಾರು ದೇವಾನು-ದೇವತೆಗಳನ್ನು ಕಲ್ಪಿಸಿ, ಗುಡಿ-ಗುಂಡಾರಗಳನ್ನು ಕಟ್ಟಿಸಿ, ಶೂದ್ರಾತಿಶೂದ್ರರಿಗೂ, ಸ್ತ್ರೀಯರಿಗೂ, ಪ್ರವೇಶ ನಿರಾಕರಿಸಿ, ಕ್ಷತ್ರಿಯರನ್ನು, ವೈಶ್ಯರನ್ನು, ಶೂದ್ರರನ್ನು ಶೋಷಣೆ ಮಾಡುತ್ತಿರುವುದು ಕಂಡು ಯೋಚನೆಗೆ ತೊಡಗಿದನು.

ದೇವನೊಬ್ಬನೇ ಇರುವಂತೆ ಮಾನವ ಕುಲವೂ ಒಂದೇ ಇದೆ. ಎಲ್ಲರೂ ಒಂದೇ ರೀತಿ ಜನಿಸಿದ್ದಾರೆ. ಎಲ್ಲರಿಗೂ ಆಶೆ ಆಮಿಷ, ರೋಷ ಹರುಷ, ಸುಖ-ದುಃಖಗಳು ಒಂದೇ ತೆರನಾಗಿವೆ. ಆದಾಗ್ಯೂ ಈ ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯತೆ ಏಕೆ ? ಎಲ್ಲರಿಗೂ ಹಸಿವು-ತೃಷೆ, ನಿದ್ರೆ-ನೀರಡಿಕೆ, ಮೈಥುನ-ರತಿಸುಖ ಬಯಕೆ ಒಂದೇ ಆಗಿದ್ದರೂ ಈ ಭೇದನೀತಿ ಯಾಕೆ ? ಇದಕ್ಕೆ ಪರಿಹಾರವೇನು ? ಎಂದು ಚಿಂತನೆ ಮಾಡುತ್ತಲೇ ಇದ್ದ. ದೇವರು-ಧರ್ಮದ ಹೆಸರಿನಲ್ಲಿ ಶೋಷಣೆ ನಿಲ್ಲಬೇಕಾದರೆ ಪೂಜಾರಿ-ಪುರೋಹಿತರ ಮನಃಪರಿವರ್ತನೆ ಸಾಧ್ಯವಿಲ್ಲವೆಂಬು-ದನ್ನರಿತು, ಶೋಷಿತರಿಗೆ ಅರಿವು ನೀಡಿ, ಅವರು ಜಾಗೃತರಾಗಬೇಕು, ಶೋಷಣೆ ಗೊಳಗಾಗಬಾರದೆಂಬ ಪ್ರಜ್ಞೆ ಮೂಡಬೇಕು. ಅವರು ಸ್ವತಂತ್ರವಾಗಿ ವಿಶ್ವದ ತುಂಬ ಓತ ಪ್ರೋತವಾಗಿ ತುಂಬಿರುವ ದೇವಚೈತನ್ಯವನ್ನು ಪೂಜಿಸುವಂತೆ ಮಾಡಬೇಕು ಎಂಬ ಉತ್ಕಟ ಅಭೀಪ್ಸೆ, ಜಿಜ್ಞಾಸೆ ಸುರುವಾಯಿತು.

ಹೀಗೆಯೇ ಹಲವಾರು ದಿನಗಳು ಉರುಳಿ, ಒಂದು ದಿನ ಬೆಳಗಿನ ಜಾವ ಅರುಣೋದಯ ಕಾಲದಲ್ಲಿ ಕಪ್ಪಡಿ ಸಂಗಮದ ದಿನ್ನೆಯ ಹೆಬ್ಬಂಡೆಯ ಮೇಲೆ ಕುಳಿತು ಧ್ಯಾನಾಸಕ್ತನಾಗಿದ್ದಾಗ ಅಂತರಂಗದ ಚಿದಾಕಾಶದಲ್ಲಿ ಚಿಲ್ಲಿಂಗದ ಪ್ರಕಾಶ ಹೊರಹೊಮ್ಮ ತೊಡಗಿತು. ಆ ಚಿದ್ಬೆಳಕು ಭಾವದಿಂದ ಮನಕ್ಕೆ, ಮನದಿಂದ ನೇತ್ರಕ್ಕೆ, ನೇತ್ರದಿಂದ ಕರಸ್ಥಲವನ್ನು ವ್ಯಾಪಿಸಿ ಚುಳುಕಾಯಿತು.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ
ಕೂಡಲಸಂಗಮದೇವಯ್ಯ
ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ.

ಈ ದಿವ್ಯಾನುಭಾವವೇ 'ವಚನ' ವಾಗಿ ಹೊರಹೊಮ್ಮಿತು. ಈ

ಅನುಭಾವಕ್ಕೆ, ನಿರಾಕಾರ ಚೈತನ್ಯಕ್ಕೆ ಸಾಕಾರ ರೂಪುಕೊಡಲು ನಿರ್ಧರಿಸಿ, ಕಪ್ಪಡಿ ಸಂಗಮದಲ್ಲಿದ್ದ ಸ್ಥಾವರ ಲಿಂಗಗಳಿಗೆ ಕಂಥೆ ನೀಡುತ್ತಿದ್ದ ಕಂಥೆ ಕಾಯಕದ ಅಯ್ಯೋರನ್ನು ಭೆಟ್ಟಿಯಾಗಿ ಚರ್ಚಿಸಿದರು. ವ್ಯಕ್ತಿಯ ದೇಹದಲ್ಲಿರುವ ಚಿಲ್ಲಿಂಗ ತತ್ವವನ್ನು ಒಳಗಿಟ್ಟು, ವಿಶ್ವದೊಳಹೊರಗೆ ತುಂಬಿಕೊಂಡಿರುವ ಮಹಾಲಿಂಗ ತತ್ವವನ್ನು ಹೊರ ಆವರಣವಾಗಿಸಿ ಅಂಗುಷ್ಟ ಗಾತ್ರದಲ್ಲಿ **'ಇಷ್ಟಲಿಂಗ'** ವೆಂಬ ಕಂತೆಯ ಕಾಂತಿಯುಕ್ತ ಲಿಂಗವನ್ನು ತಯಾರಿಸಿ ಅಂದರೆ ಸಾಕಾರಗೊಳಿಸಿದ ಇಷ್ಟಲಿಂಗ ಒಳಗಿನ ಚೈತನ್ಯ [Microcosm] ಹೊರಗಿನ ವಿಶ್ವಚೈತನ್ಯ [Macrocosm] ಎರಡರ ಅವಿನಾಭಾವ ಸಂಬಂಧ-ಸಂಯೋಜನೆಯೇ ಕರಸ್ಥಲಕೆ ಚುಳುಕಾಗಿ ತಂದುಕೊಂಡರು.

ಬಸವಣ್ಣನವರ ಅಂತರಂಗದ ಚಿತ್ ಅರಿವೇ ಗುರುವಾಗಿ, ಸ್ವಯಂಕೃತ ಗುರುವಾದರು. ಲಿಂಗವು ಬಸವಣ್ಣನ ಉದರದಲ್ಲಿ ಜನಿಸಿತ್ತು. ಆದಿಯಲ್ಲಿ ನೀನೇ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ, ಬಸವಪೂಯದ ಬಂದು ಆರೈದ ಲಿಂಗವನು ಎಂದು ಅನಂತರ ಶರಣರು ತಮ್ಮ ವಚನಗಳಲ್ಲಿ ದಾಖಲಿಸಿರುವುದನ್ನು ಕಾಣುತ್ತೇವೆ. ಸ್ವತಃ ಬಸವಣ್ಣನವರೇ-

ಎನಗೆ ಗುರುಪಥವ ತೋರಿದವರಾರು ?
ಲಿಂಗಪಥವ ತೋರಿದವರಾರು ?
ಜಂಗಮಪಥವ ತೋರಿದವರಾರು ?
ಪಾದೋದಕ ಪ್ರಸಾದ ಪಥವ ತೋರಿದವರಾರು ?
ತೋರಿದ ಮನವೇ ನೀವೆಂದರಿದೆ
ಎನಗಿನ್ನಾವ ಭವವಿಲ್ಲ
ಕೂಡಲಸಂಗಮದೇವಾ

ಎಂದು ಹೇಳಿಕೊಂಡಿದ್ದಾರೆ. ಇಷ್ಟಲಿಂಗದ ಜನಕ ಗುರುಬಸವಣ್ಣನವರಾದರು.

೭. ಅಕ್ಕನಾಗಮ್ಮ-ಚೆನ್ನಬಸವರಿಗೆ ಇಷ್ಟಲಿಂಗ ಸಂಸ್ಕಾರ :

ಬಸವಣ್ಣನವರು 'ಇಷ್ಟಲಿಂಗ' ವೆಂಬ ವಿನೂತನವಾದ ಅರಿವಿನ ಕುರುಹು ಆಚಾರದ ಪ್ರತೀಕ, ಅನುಭಾವದ ನೆಲೆಯಾಗಿರುವ, ನಿರಾಕಾರ-ಸಾಕಾರ ಏಕೋದೇವ ಕೂಡಲಸಂಗಮದೇವ ಎಂಬ ಚುಳುಕನ್ನು ಸ್ವಯಂ ಸಾಧನೆ ಮಾಡಿದರು. ಇಷ್ಟಲಿಂಗ ಯೋಗ, ಲಿಂಗಾಂಗಯೋಗ, ದೃಷ್ಟಿಯೋಗ, ಅನಿಮಿಷದೃಷ್ಟಿಯೋಗವಾಗಿ ಸಾಧನೆ ಮಾಡಿ, ಲಿಂಗಸಿದ್ಧಿ ಪಡೆದರು. ಈ ಇಷ್ಟಲಿಂಗ ದೀಕ್ಷಾ ಸಂಸ್ಕಾರವನ್ನು ಕುಲಜ-ಅಂತ್ಯಜ, ವಿಪ್ರ-ಶೂದ್ರ, ಸ್ತ್ರೀ-ಪುರುಷ, ಬಡವ-ಬಲ್ಲಿದ, ಬಾಲಕ-ವೃದ್ಧ, ಮೇಲ್ಜಾತಿ-ಕೆಳಜಾತಿ ಎಂಬ ಯಾವುದೇ ಭೇದವಿಲ್ಲದೆ ನೀಡಬಹುದೆಂದು ನಿರ್ಧರಿಸಿದರು. ಆಗಲೇ ಎಲ್ಲ ರೀತಿಯ ಶೋಷಣೆಯಿಂದ ಮುಕ್ತರಾಗಲು ಸಾಧ್ಯವೆಂದು ಅರಿತರು.

ತಮ್ಮ ಈ ಸಾಧನೆಯನ್ನು ಮನೆಯಲ್ಲಿ ಅಕ್ಕ ನಾಗಲಾಂಬಿಕೆಗೆ ತಿಳಿಸಿ, ಇಷ್ಟಲಿಂಗ, ತೋರಿಸಿ, ಅದರ ನೆಲೆ-ಕಲೆಗಳನ್ನು, ಲಿಂಗ ಸಕೀಲವನ್ನು ಅರುಹಿದರು. ಯಾವ ಉಪನಯನ ಸಂಸ್ಕಾರದಿಂದ ಅಕ್ಕ ವಂಚಿತಳಾಗಿದ್ದಳೋ, ಅಂತಹ ಅಕ್ಕನಿಗೆ ಇಷ್ಟಲಿಂಗ ಸಂಸ್ಕಾರ ಕರುಣಿಸಿ, ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾದ ಧಾರ್ಮಿಕ ಸಂಸ್ಕಾರವೆಂದು ತೋರಿದರು.

ಅಕ್ಕನಾಗಮ್ಮ ತಾಯಿಯ ಆನಂದಕ್ಕೆ ಪಾರವೇ ಇಲ್ಲ. ಅಪರಿಮಿತವಾದ ಲಿಂಗಾನಂದವನ್ನು ಅನುಭವಿಸಿದಳು. ಆನಂದದಿಂದ ಅನುಭಾವದ ವಚನ ಹೊರಹೊಮ್ಮಿತು-

ಇನ್ನು ಅರಿದ ಬಳಿಕ ಬಳಲಲುಂಟೇ ?
ಹೃದಯ ಕಮಲ ಮಧ್ಯದಲ್ಲಿ
ನಿಜವು ನೆಲೆಗೊಂಡ ಬಳಿಕ
ಪುಣ್ಯ-ಪಾಪವೆಂಬುದಕ್ಕೆ ಹೊರಗಾದೆನು
ಭುವನ ಹದಿನಾಲ್ಕರೊಳಗೆ ಪರಿಪೂರ್ಣ
ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭೆಯ
ಕಂಡು ಬದುಕಿದೆನು ಕಾಣಾ
ಬಸವಣ್ಣ ಪ್ರಿಯ ಚೆನ್ನಸಂಗಯ್ಯ.

ಎಂದು ಆನಂದದಿಂದ ನಲಿದಾಡಿದಳು. ಈ ವಿಚಾರವನ್ನು ಪತಿ ಶಿವದೇವನಲ್ಲಿ ಹೇಳಿಕೊಂಡಳು. ಶಿವದೇವನಿಗೆ ಆಶ್ಚರ್ಯವಾಯಿತು. ಬಾಗೇವಾಡಿಯಲ್ಲಿ ಎಂಟು ವರುಷಗಳ ಹಿಂದೆ ಜರುಗಿದ ಉಪನಯನ ಪ್ರಸಂಗ ಕಣ್ಮುಂದೆ ಸುಳಿಯಿತು. ಯುವಕ ಬಸವಣ್ಣ ಕಂಡುಹಿಡಿದ ಸರ್ವಸಮಾನತೆಯ ಹೊಸ ದರ್ಮ-ಸಂಸ್ಕಾರದ ಮಹತಿಯನ್ನು ಅರಿತನು. ಗುರುಮುಟ್ಟಿ-ಗುರುವಾಗುವ, ಲಿಂಗ ಮುಟ್ಟಿ ಲಿಂಗವೇ ಆಗುವ ಈ ಅದ್ಭುತ ಸಂಸ್ಕಾರದ ಪ್ರಭಾವಕ್ಕೊಳಗಾಗಿ, ತಾನೂ ಬಸವಣ್ಣನವರಿಂದಲೇ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಹೊಂದಿದನು.

ಶಿವದೇವ-ಅಕ್ಕನಾಗಮ್ಮನವರು ಇಷ್ಟಲಿಂಗ ಸಂಸ್ಕಾರ ಹೊಂದಿ ಶರಣದಂಪತಿಗಳೆನಿಸಿದರು. ಕೆಲವೇ ದಿನಗಳಲ್ಲಿ ಅಕ್ಕನಾಗಮ್ಮ ಗರ್ಭಿಣಿಯಾದಳು. ಅಕ್ಕನಾಗಮ್ಮನವರ ಗರ್ಭಸ್ಥ ಶಿಶುವಿಗೆ ಎಂಟು ತಿಂಗಳು ತುಂಬಲು, ಬಸವಣ್ಣನವರೇ ಗುರುಮೂರ್ತಿಯಾಗಿ ಗರ್ಭಸ್ಥ ಶಿಶುವಿಗೆ ಲಿಂಗತತ್ತ್ವೋಪದೇಶ ಮಾಡಿ, ಅಕ್ಕನಾಗಮ್ಮಳ ಗರ್ಭಕ್ಕೆ ವಿಭೂತಿ ಸ್ಪರ್ಶಿಸಿ, ಕಿವಿಯಲ್ಲಿ ಪ್ರಣವಪಂಚಾಕ್ಷರಿ ಮಂತ್ರ ಬೋಧಿಸಿ, ಲಿಂಗಧಾರಣೆ ಮಾಡಿದರು. ಅಕ್ಕನಾಗಮ್ಮನವರು ತಮ್ಮ ಇಷ್ಟ ಲಿಂಗದೊಂದಿಗೆ, ಗರ್ಭಸ್ಥ ಶಿಶುವಿನ ಇಷ್ಟಲಿಂಗ (ನಾಗೋಸಲಿಂಗ)ವನ್ನೂ ಪೂಜೆ ಮಾಡಿಕೊಳ್ಳುತ್ತಿದ್ದರು.

ಲಿಂಗವಂತ ತಂದೆ-ತಾಯಿಯರ ಉದರದಿಂದ ಈ ಭೂಮಿಗೆ ಜನಿಸಿ ಬರುವ ಶಿಶು ಭವಿಯಾಗಿ ಬರದೇ ಲಿಂಗಭಕ್ತನಾಗಿ ಜನಿಸಲಿ ಎಂಬ ತಾತ್ವಿಕ ವಿಚಾರದಂತೆ, ನವಮಾಸ ತುಂಬಿ ಕ್ರಿ.ಶ.೧೧೨೫ರಲ್ಲಿ ಗಂಡು ಕೂಸಿನ ಜನನವಾಯಿತು. ಈ ಮುದ್ದಾದ ಚೆನ್ನಾದ ಮಗುವಿಗೆ ಗುರುವಿನ ಹೆಸರು 'ಬಸವ' ಸೇರಿಸಿ ಚೆನ್ನಬಸವಣ್ಣ ಎಂದು ನಾಮಕರಣ ಮಾಡಿದರು.

ಇಪ್ಪತ್ತು ವರುಷಗಳ ಹಿಂದೆ ಇಂಗಳೇಶ್ವರ-ಬಾಗೇವಾಡಿಯಲ್ಲಿ ಸೋದರ ಬಸವಣ್ಣ ಜನಿಸಿದಾಗ, ಆ ಮಗುವನ್ನು ಬೆಳೆಸಿದಂತೆಯೇ, ಈಗ ತನ್ನ ಮಗು ಚೆನ್ನಬಸವನನ್ನು ಪೋಷಿಸತೊಡಗಿದಳು.

ಶತ ಶತಮಾನಗಳಿಂದ ಧರ್ಮ-ದೇವರು-ಧಾರ್ಮಿಕ ಸಂಸ್ಕಾರ-ಅಧ್ಯಾತ್ಮ ಸಾಧನೆಯಿಂದ ವಂಚಿತವಾಗಿದ್ದ ಸ್ತ್ರೀ ಕುಲವನ್ನು ಉದ್ಧರಿಸಿದ ಬಸವಣ್ಣ ಈಗ 'ತಮ್ಮ' ನಾಗಿರದೇ 'ಗುರು' ಬಸವಣ್ಣನಾಗಿದ್ದನು. ಅಕ್ಕನಾಗಮ್ಮ ತನಗೆ ಮರುಜನ್ಮ (ದ್ವಿಜ) ನೀಡಿದ ಬಸವಣ್ಣನನ್ನು ಎನ್ನ ತಂದೆ ಸಂಗನಬಸವಣ್ಣ ಎಂದು ಕೃತಜ್ಞತೆಯಿಂದ ಹೃದಯತುಂಬಿ ಹೇಳಿರುವುದನ್ನು ವಚನದಲ್ಲಿ ಕಾಣುತ್ತೇವೆ.

ಎನ್ನ ಕುಲಸೂತಕವ ಕಳೆದಾತ ಬಸವಣ್ಣ
ಎನ್ನ ಛಲಸೂತಕವ ಕಳೆದಾತ ಬಸವಣ್ಣ
ಎನ್ನ ತನು ಸೂತಕವ ಕಳೆದಾತ ಬಸವಣ್ಣ
ಎನ್ನ ಮನ ಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ
ಎನ್ನ ಅರುಹು ಮರುಹಿನ ಸಂದು ಸಂಶಯವ
ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ
ಬಸವಣ್ಣಪ್ರಿಯ ಚೆನ್ನ ಸಂಗಯ್ಯನ ಹೃದಯಕಮಲದಲ್ಲಿ
ನಿಜ ನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು.

ಅಕ್ಕನಾಗಮ್ಮ-ಶಿವದೇವರ ಮುದ್ದಿನ ಮಗುವಾಗಿ, ಮಾವ ಬಸವಣ್ಣನ ಸೋದರಳಿಯನಾಗಿ ಚೆನ್ನಬಸವ ಒಳ್ಳೆಯ ಜ್ಞಾನ-ಸಂಸ್ಕಾರ ಪಡೆಯುತ್ತಾ ಬೆಳೆಯತೊಡಗಿದ 'ಮರುಗದ ಗಿಡದಂತೆ ಹುಟ್ಟುತ್ತಲೇ ಪರಿಮಳ ಸೂಸುವ ತೆರನಾಗಿ ಚೆನ್ನಬಸವಣ್ಣ ಸುಜ್ಞಾನಿ ಯಾಗಿ ಅವಿರಳಜ್ಞಾನಿಯಾಗಿ ಹೊರಹೊಮ್ಮ

ತೊಡಗಿದ. ಬೆಳೆವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಚೆನ್ನಬಸವ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಓಡಾಡತೊಡಗಿದ. ಅರಳು ಹುರಿದಂತೆ ಪಟ ಪಟನೆ ಮಾತನಾಡತೊಡಗಿದ. ಕಪ್ಪಡಿ ಸಂಗಮದ ಪ್ರಕೃತಿಯ ಸುಂದರ ಪರಿಸರದಲ್ಲಿ ಎಲ್ಲರಿಗೂ ಅಚ್ಚು-ಮೆಚ್ಚಿನ ಮಗುವಾಗಿ, ಕಂಗೊಳಿಸಿದ.

೮. ಬಸವಣ್ಣನವರ ಲೋಕ ಪರ್ಯಟನ :

ಕಪ್ಪಡಿ ಸಂಗಮದ ಗುರುಕುಲದಲ್ಲಿ ೧೨ ವರುಷಗಳ ವಿದ್ಯಾರ್ಜನೆ ಅಂತಿಮ ಹಂತ ತಲುಪಿದಾಗ, ಅಂದಿನ ಕಾಲದ ಶಿಕ್ಷಣ ಪದ್ಧತಿಯ ನಿಯಮಾವಳಿಯಂತೆ ಕೋಶವನ್ನು ಓದಬೇಕು, ದೇಶವನ್ನು ಸುತ್ತಬೇಕು. ಅಧ್ಯಯನದಿಂದ ಸಹಸ್ರಾರು ವರುಷಗಳಿಂದ ಜ್ಞಾನಪರಂಪರೆ ಕೈವಶವಾದರೆ, ದೇಶಪರ್ಯಟನದಿಂದ ಲೋಕಾನುಭವ ದೊರೆಯುತ್ತದೆ. ಬಸವಣ್ಣ ಹಾಗೂ ಆತನ ಸಹಪಾಠಿಗಳು ಈಗ ಇಪ್ಪತ್ತರ ಹರೆಯದ ತರುಣರು. ಗುರುಕುಲದ ಸ್ಥಾನಪತಿಗಳ ಅಪ್ಪಣೆಯಂತೆ ಲೋಕ ಪರ್ಯಟನ ಕೈಗೊಂಡರು.

ಇಲ್ಲಿಯವರೆಗೆ ಜಂಬೂದ್ವೀಪವೆಂದೆನಿಸಿದ್ದ ಭಾರತದ ಇತಿಹಾಸ, ಭೂಗೋಲ, ದಾರ್ಶನಿಕ ಪರಂಪರೆಯ ಶೈವ, ವೈದಿಕ, ಜೈನ, ಬೌದ್ಧ, ಚಾರ್ವಾಕ, ವೇದಾಂತ ಮುಂತಾದ ದರ್ಶನಗಳ ಅಧ್ಯಯನವಾಗಿತ್ತು. ಛಪ್ಪನ್ನಾರು ಪ್ರಾಂತಗಳ ೫೬ ಭಾಷೆಗಳ ಪರಿಚಯವಾಗಿತ್ತು. ಪ್ರಾಚೀನ ಶಾಸನಗಳ, ತಾಡೋಲೆಗಳ ಅಧ್ಯಯನವಾಗಿತ್ತು. ಈಗ ಲೋಕಪರ್ಯಟನದಿಂದ ಇಡೀ ದೇಶವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿ, ಎಲ್ಲ ರಾಜ್ಯಗಳ ಆಡಳಿತ ವ್ಯವಸ್ಥೆ, ಪ್ರಜೆಗಳ ಬದುಕು, ಅಲ್ಲಲ್ಲಿಯ ವಿದ್ವಾಂಸರ ಭೆಟ್ಟಿ, ಆವರೊಂದಿಗೆ ಸಂದರ್ಶನ, ಚರ್ಚೆ, ಅವರನ್ನು ಕಣ್ಣಾರೆ ಕಾಣುವ, ಅರಿಯುವ ಅವಕಾಶ ಲಭಿಸಿತು. ಸಮಗ್ರ ಉತ್ತರದೇಶಗಳಿಗೆ-ಹಿಮಾಲಯ-ನೇಪಾಳ-ಗಾಂಧಾರದಿಂದ ಬಿಹಾರ-ಪಾಟಣಾ, ಗಯಾ, ಬುದ್ಧಗಯಾ, ಆಸಾಮ, ಬ್ರಹ್ಮದೇಶ, ಬಂಗಾಲ, ಓಡಿಸಾ, ತೆಲಗುನಾಡು, ತಮಿಳುನಾಡು, ಕೇರಳ, ಕನ್ಯಾಕುಮಾರಿ ಸುತ್ತಾಡಿ ಮರಳಿ ಕಪ್ಪಡಿ ಸಂಗಮಕ್ಕೆ ಬಂದರು. ಲೋಕಾನುಭವದಿಂದ ಈಗ ಶಿಕ್ಷಣ ಪೂರ್ಣಹಂತ ತಲುಪಿತು. ಗುರುಕುಲದ ಎಲ್ಲ ಗುರುಗಳ ಮಾರ್ಗದರ್ಶನದಲ್ಲಿ ಭಾರತದ ಅಂತರಂಗ ಬಹಿರಂಗದ ದರ್ಶನವಾಯಿತು.

೯. ಘಟಿಕೋತ್ಸವ-ಕಪಿಲಷಷ್ಠಿಯೋಗ-ವಿದ್ವತ್‌ಸಮ್ಮೇಳನ :

ಕಪ್ಪಡಿಸಂಗಮದಲಿ ಪ್ರತಿ ಹನ್ನೆರಡು ವರುಷಕ್ಕೊಮ್ಮೆ 'ಕಪಿಲಷಷ್ಠಿಯೋಗ' ಸಂದರ್ಭ ಕಾಲಕ್ಕೆ ಬೃಹತ್ ಮಟ್ಟದಲ್ಲಿ ನಾಡಿನ ವಿದ್ವಜ್ಜನರ ತತ್ವಗೋಷ್ಠಿ ಜರಗುತ್ತಿತ್ತು. ಆ ಸಮಯದಲ್ಲಿಯೇ ೧೨ ವರುಷ ಪೂರೈಸಿದ ವಿದ್ಯಾರ್ಥಿಗಳ ಘಟಿಕೋತ್ಸವವನ್ನು ಏರ್ಪಡಿಸಲಾಯಿತು.

ಬಸವಣ್ಣನು ಈಗ ೨೧ ವರುಷದ ಪ್ರೌಢ ಯುವಕನಾಗಿದ್ದನು. ವಿದ್ಯೆ ಸಂಪೂರ್ಣಗೊಂಡಿತ್ತು. ಬಹುಭಾಷಾ ಪಾಂಡಿತ್ಯ ಹಾಗೂ ಸಕಲ ವಿದ್ಯಾಪಾರಂಗತ-ನಾಗಿದ್ದನು. ಬಸವಣ್ಣ ಹಾಗೂ ಆತನ ಸಹಪಾಠಿಗಳು ಘಟಿಕೋತ್ಸವದಲ್ಲಿ ಪದವಿ ಪಡೆದರು. ಅನಂತರ ವಿದ್ವಜ್ಜನರ ತತ್ವಗೋಷ್ಠಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡರು. ನಾಡಿನ ಎಲ್ಲ ಭಾಗಗಳಿಂದ ಆಗಮಿಸಿದ್ದ ವೇದಾಗಮ ಪಂಡಿತರು, ವೇದಾಂತ ಕೇಸರಿಗಳು, ಆಚಾರ್ಯರು ತಮ್ಮ ತಮ್ಮ ವಿಚಾರಗಳನ್ನು ಅದ್ಭುತವಾಗಿ ಮಂಡಿಸುತ್ತಿದ್ದರು. ಬಸವಣ್ಣನವರು ಪ್ರತಿಯೊಂದು ಗೋಷ್ಠಿಗಳಲ್ಲಿ ತನ್ನ ವಿಚಾರಗಳನ್ನು ಮಂಡಿಸುತ್ತ ಅವರನ್ನೆಲ್ಲ ಬೆರಗುಗೊಳಿಸುತ್ತಿದ್ದನು.

ಭಾರತೀಯ ದಾರ್ಶನಿಕ ಪರಂಪರೆಯ ತತ್ವವಿಚಾರಗಳು ಕೇವಲ ಬೌದ್ಧಿಕ ಚಿಂತನೆಯ ಮಟ್ಟಿಗೆ ಸೀಮಿತವಾಗುವುದಾದರೆ ಏನು ಉಪಯೋಗ ? ಅವು ಬಹುಸಂಖ್ಯಾತ ಜನಸಾಮಾನ್ಯರ ಜೀವನಕ್ಕೆ ಉಪಯೋಗವಾಗಬೇಕು. ಜನರ ಆರ್ಥಿಕ ಬದುಕನ್ನು, ರಾಜಕೀಯ-ಸಾಮಾಜಿಕ-ಧಾರ್ಮಿಕ ರಂಗಗಳಿಗೆ ಮಾರ್ಗ-ದರ್ಶನವಾಗಿರಬೇಕು. ಸುಖೀರಾಜ್ಯ ನಿರ್ಮಾಣವಾಗಬೇಕಾದರೆ ಸರ್ವರಿಗೂ ವಿದ್ಯೆ ಲಭಿಸುವಂತಾಬೇಕು. ವರ್ಣಾಶ್ರಮ ಜಾತಿವ್ಯವಸ್ಥೆಯಲ್ಲಿ ಇದು ಸಾಧ್ಯವೆ ? ಮಾನವ ಕುಲದ ಅರ್ಧಭಾಗವಾಗಿರುವ ಮಹಿಳೆಯರಿಗೆ ಅವಕಾಶವೇ ಇಲ್ಲದಿದ್ದರೆ, ಬಹುಸಂಖ್ಯಾತ ಶ್ರಮಜೀವಿಗಳಿಗೆ, ಶೂದ್ರಾತಿಶೂದ್ರರಿಗೆ ವಿದ್ಯೆ ದೊರೆಯದಿದ್ದರೆ ಏನು ಪ್ರಯೋಜನ? ಪ್ರತಿಶತ ೧೦ ಟಕ್ಕೆ ಇರುವ ಮೇಲ್ಜಾತಿ, ಮೇಲ್ವರ್ಗದ ಜನರು ಐಷಾರಾಮ ಬದುಕು ಬಾಳಿದರೆ ಸಾಕೆ ? ೯೦ ಟಕ್ಕೆ ಜನರು ಪಡಬಾರದ ಕಷ್ಟಗಳನ್ನು ಅನುಭವಿಸುತ್ತಾ, ಬಡತನದಲಿ ಬದುಕುತ್ತಿರುವುದನ್ನು ದೇಶಪರ್ಯಟನ ಕಾಲದಲ್ಲಿ ಕಂಡಿದ್ದೇವೆ. ಇಂಥವರೂ ನೆಮ್ಮದಿಯಿಂದ ಜೀವಿಸುವಂತಾದರೆ ಮಾತ್ರ-'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಋಷಿಗಳ ವಾಣಿಯು ಸಾರ್ಥಕ ವಾಗುತ್ತದೆ. ಇಲ್ಲದಿದ್ದರೆ ಅದು ಅರ್ಥಹೀನವೆನಿಸುತ್ತದೆಯಲ್ಲವೆ ?

ಇವೇ ಮುಂತಾದ ವಿಮರ್ಶಾತ್ಮಕ ವಿಚಾರಗಳನ್ನು ವಿದ್ವಜ್ಜನರ ಸಭೆಯಲ್ಲಿ ಬಸವಣ್ಣ ಅನುಭವಪೂರ್ಣವಾಗಿ ಮಂಡಿಸಿದಾಗ, ಅವರೆಲ್ಲ ಬೆರಗಾದರು. ಇದಕ್ಕೆಲ್ಲ ಪರಿಹಾರ ಸೂಚಿಸುವೆಯಾ ? ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ವಯೋವೃದ್ಧ ಈಶಾನ್ಯಗುರುಗಳು ಪ್ರಶ್ನಿಸಿದರು. ಬಸವಣ್ಣನವರ ಹೊಸ ಹೊಸ ತತ್ವ-ಧರ್ಮ-ಸಾಮಾಜಿಕ ಚಿಂತನೆಗಳು ನಾಡಿನ ವಿದ್ವಜ್ಜನರಿಗೂ ತಿಳಿಯುವಂತಾಗಲಿ ಎಂಬ ಮನೀಷೆ ಗುರುಗಳದಾಗಿತ್ತು. ಬಸವಣ್ಣನವರನ್ನು ಗುರುಗಳು ವೇದಿಕೆಗೆ ಕರೆದು ಸಾವಿರಾರು ವರುಷಗಳಿಂದ ಹಾಗೆಯೇ ಉಳಿದು ಬಂದಿದ್ದ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಲು ತಿಳಿಸಿದರು.

ಬಸವಣ್ಣನವರು ಗಂಭೀರವಾಗಿ ವೇದಿಕೆಯತ್ತ ಸಾಗಿ ಬಂದರು. ಈ

ತರುಣ ವಿದ್ವಾಂಸನ ಗಂಭೀರ ನಡೆ-ನುಡಿಗಳು, ಆತನ ವಿನೂತನ ಚಿಂತನೆಗಳನ್ನು ಆಲಿಸಲು ಇಡೀ ಸಭೆ ಕಾತುರಗೊಂಡಿತ್ತು.

'ವಿದ್ಯಾ ವಿನಯೇನ ಶೋಭತೆ' ಎನ್ನುವಂತೆ ಸದುವಿನಯದಿಂದ ವೇದಿಕೆ ಹತ್ತಿ, ಎಲ್ಲ ಹಿರಿಯ ಗುರುಗಳಿಗೆ, ವಿದ್ವಜ್ಜನರಿಗೆ, ಪಂಡಿತ್ತೋತ್ತಮರಿಗೆ ಬ್ರಹ್ಮಪುರಿಯ ಮಾತೆಯರಿಗೆ, ಹಿರಿಯರಿಗೆ ತಲೆಬಾಗಿ ಕೈಮುಗಿದು ವಚನದೊಂದಿಗೆ ಮಾತು ಪ್ರಾರಂಭಿಸಿದರು ಬಸವಣ್ಣ-

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ

ಎಂದು ಗಂಭೀರ ಕಂಠದಿಂದ ಹೇಳಿದಾಗ 'ಇವನಮ್ಮವ' ಎಂಬ ಆತ್ಮೀಯಭಾವ ಎಲ್ಲರಲ್ಲಿ ಉದಿಸಿತು. ಬಸವಣ್ಣ ಮಾತು ಮುಂದುವರೆಸಿ-

ವಿದ್ಯಾಹೀನ ಮಾನವಾಃ ಪಶುಸಮಾನಃ ಎಂದು ಸನಾತನಕಾಲದಿಂದ ಹೇಳುತ್ತಲೇ ಬಂದಿದ್ದೇವೆ. ವಿದ್ಯೆ ಎಲ್ಲ ಮಾನವರಿಗೂ ನೀಡಬೇಕಲ್ಲವೇ ? ಸ್ತ್ರೀಯರಿಗೆ, ಶೂದ್ರಾತಿ ಶೂದ್ರರಿಗೆ ವಿದ್ಯೆ ಪಡೆಯುವ ಅವಕಾಶ ನೀಡದೇ ಇದ್ದರೆ ಅವರು ಪಶುಸಮಾನವಾಗಿಯೇ ಬಾಳಬೇಕೆ ? ಅವರೆಲ್ಲರಿಗಾಗಿ ವಿದ್ಯಾಕೇಂದ್ರಗಳು ಮುಕ್ತವಾಗಿ ಬಾಗಿಲು ತೆರೆದು ಸ್ವಾಗತಿಸುವಂತಾಗಬೇಕು. ಅವರೂ ಕೂಡಾ ಜ್ಞಾನ ಪಡೆದು ವಿದ್ಯಾವಂತರಾಗಬೇಕು.

ಧಾರ್ಮಿಕವಾಗಿ- 'ಜನ್ಮನಾ ಜಾಯತೇ ಶೂದ್ರಃ ಕರ್ಮಣಾತ್ ಅಂದರೆ ಸಂಸ್ಕಾರಾತ್ ದ್ವಿಜಮುಚ್ಯತೆ' ಎಂದು ಧರ್ಮಶಾಸ್ತ್ರಗಳು ಹೇಳುತ್ತಲೇ ಬಂದಿದ್ದರೂ ವಾಸ್ತವಿಕವಾಗಿ ಸ್ತ್ರೀಯರಿಗೆ, ಶೂದ್ರಾತಿಶೂದ್ರರಿಗೆ ಧರ್ಮ ಸಂಸ್ಕಾರ ನೀಡದೇ ಹೋದರೆ, ಅವರಿಗೂ ದೇವಪೂಜೆಗೆ ಅವಕಾಶ ಕಲ್ಪಿಸದೇ ಹೋದರೆ ಋಷಿಗಳ ಈ ದೇವವಾಣಿಗೆ ಅರ್ಥವಿದೆಯೇ ? ಧರ್ಮ-ದೇವಪೂಜೆಯ ಸಂಸ್ಕಾರ ಎಲ್ಲರಿಗೂ ದೊರೆತು, ಎಲ್ಲರೂ ಧಾರ್ಮಿಕ ಜೀವನ ಬಾಳುವಂತಾಬೇಕು.

ಸಾಮಾಜಿಕವಾಗಿ-ವರ್ಣಪದ್ಧತಿಯು 'ಚಾತುವರ್ಣಂ ಮಯಾ ಸೃಷ್ಟ್ವಮ್ ಗುಣಕರ್ಮ ವಿಭಾಗಶಃ' ಎಂದು ಹೇಳುತ್ತಾ ಬಂದಿದ್ದರೂ. ಕೂಡ ಎಲ್ಲ ವರ್ಣ-ಜಾತಿ-ವೃತ್ತಿಗಳಲ್ಲಿರುವ ಗುಣವಂತ-ಸತ್ಕರ್ಮಿಗಳಿಗೆ ಎಲ್ಲ ರಂಗಗಳಲ್ಲಿ ಸಮಾನ ಅವಕಾಶ ಕಲ್ಪಿಸದೇ, ಅವರನ್ನೆಲ್ಲ ಶೋಷಿಸುವುದೇಕೆ ? ಜಾತಿಭೇದ ಅಳಿದು ಮಾನವಕುಲ ಒಂದೇ ಎಂಬ ಸಾಮಾಜಿಕ ನೀತಿ ಆಚರಣೆಗೆ ಬರುವಂತಾಗಬೇಕು.

ಆಧ್ಯಾತ್ಮಿಕವಾಗಿ-ಎಲ್ಲ ಜೀವಿಗಳಲ್ಲಿ ಆತ್ಮ ಒಂದೇ, ಸುಖ ದುಃಖಗಳು ಒಂದೇ ಇವೆ. ಆಧ್ಯಾತ್ಮ-ಯೋಗ ಸಾಧನೆಯಿಂದ ಮಾನವ ಮಹಾದೇವನಾಗಬಲ್ಲ.

ನರನು ನಾರಾಯಣನಾಗಬಲ್ಲ ಎಂದು ಶಾಸ್ತ್ರ ಬೋಧಿಸಿದರೆ ಸಾಕೆ ? ಇದು ಸಾಧ್ಯವಾಗಬೇಕಾದರೆ ಸರ್ವರಿಗೂ ಅವಕಾಶ ನೀಡಬೇಕಲ್ಲವೆ ? ತನು-ಮನ-ಭಾವಗಳಿರುವ ಪ್ರತಿಯೊಬ್ಬರಿಗೂ ಕಾಯಕ-ಕಲೆ-ಉಪಾಸನೆಗಳು ಬೇಕಲ್ಲವೆ ? ಈ ಅನುಕೂಲ ಎಲ್ಲರಿಗೂ ಕಲ್ಪಿಸುವಂತಾಗಬೇಕು.

ಮಾನವರ ಮನದಲ್ಲಿರುವ ಮದ, ಅಹಂಕಾರ, ಅಜ್ಞಾನ, ಸ್ವಾರ್ಥವನ್ನು ಜ್ಞಾನಾಗ್ನಿಯಲ್ಲಿ ಬಲಿಕೊಡಬೇಕೆಂಬುದನ್ನು ಮರೆತು, ಮುಗ್ಧ ಪ್ರಾಣಿಗಳ ಬಲಿಕೊಡುತ್ತಾ ಜೀವಹಿಂಸೆ ಮಾಡುವುದು ಧರ್ಮಾಚರಣೆಯೆ ? ಇದು' ಬಲಿಃ ಧರ್ಮಸ್ಯಮೂಲಂ' ಆಗಿದೆಯಲ್ಲವೆ ? ಧರ್ಮದ ಮೂಲ ದಯೆ ಆಗಿರಬೇಕು. ಸಕಲಪ್ರಾಣಿಗಳೆಲ್ಲರಲ್ಲಿ ದಯವಿರಬೇಕು. ದೇವ ಸೃಷ್ಟಿಯಲ್ಲಿ ನಾವೂ ಜೀವಿಸಬೇಕು. ಸರ್ವರಿಗೂ ಜೀವಿಸಲು ಅವಕಾಶವಿರಬೇಕು.

'ಏಕಂ ಸತ್ ವಿಪ್ರಃ ಬಹುಧಾ ವದಂತಿ' ಎಂಬ ಋಷಿ ವಾಣಿಯು ಗ್ರಂಥಗಳಲ್ಲಿಯೇ ಉಳಿಯಬೇಕೆ ? ಇಡೀ ವಿಶ್ವದಲ್ಲಿ ದೇವನೊಬ್ಬನೇ ಇದ್ದಾನೆ ದೇವತತ್ವ ಒಂದೇ ಇದೆ. ಅಂತಹ ನಿರಾಕಾರ ದೇವಚೈತನ್ಯವನ್ನು ಅರಿತುಕೊಳ್ಳದೇ, ಉಪಜೀವನಕ್ಕಾಗಿ, ಸ್ವಾರ್ಥಕ್ಕಾಗಿ ಕೋಟ್ಯಾನುಕೋಟಿ ದೇವಾನುದೇವತೆಗಳನ್ನು ಕಲ್ಪಿಸಿ, ಗುಡಿ ಗುಂಡಾರಗಳನ್ನು ಕಟ್ಟಿಸಿ, ಜಾತಿಗೊಂದು ದೇವರು, ಕುಲಕ್ಕೊಂದು ದೇವರು, ಮನೆಗೊಂದು ದೇವರು ಎಂದು ಸಹಸ್ರಾರು ರೀತಿಯಲ್ಲಿ ವಿಗ್ರಹಗಳನ್ನು ಕೆತ್ತಿಸಿ, ಕರ್ಮಸಿದ್ಧಾಂತ, ಪಾಪ-ಪುಣ್ಯ, ಸ್ವರ್ಗ-ನರಕ, ಈ ಲೋಕ-ಆ ಲೋಕ ಎಂಬ ಭೇದಗಳನ್ನು ಹುಟ್ಟು ಹಾಕಿ ಭಯ ಹುಟ್ಟಿಸಿ ಶೋಷಣೆ ಮಾಡುವುದು ಧರ್ಮಾಚರಣೆಯಾಗಬಲ್ಲುದೆ ?

ಸಹಸ್ರಾರು ಪಾತ್ರೆಗಳಲ್ಲಿರುವ ನೀರಿನಲ್ಲಿ ಒಬ್ಬನೇ ಸೂರ್ಯ ಪ್ರಕಾಶಿಸುವಂತೆ, ಸರ್ವಜೀವಿಗಳ ದೇಹದಲ್ಲಿ ಒಬ್ಬನೇ ದೇವರು ಚೈತನ್ಯರೂಪದಲ್ಲಿ ಇದ್ದಾನೆಂಬ ಅರಿವು ಮರೆಯಾಗಬೇಕೆ ? ದೇಹವೇ ದೇವಾಲಯ ದೇಹದೊಳಗಣ ಆತ್ಮಚೈತನ್ಯವೇ ದೇವರು ಎಂಬ ಅರಿವು-ಆಚರಣೆಗೆ ಬರಬೇಕು.

ಈ ಜಗತ್ತಿನಲ್ಲಿ ಜನಿಸಿಬಂದಿರುವ ಪ್ರತಿಯೊಬ್ಬರೂ ಕಾಯಕ ಮಾಡಿ, ಗಳಿಸಿ, ಅನ್ನ ಉಣ್ಣಬೇಕಲ್ಲವೆ ? ಬಹುಸಂಖ್ಯಾತರ ದುಡಿಮೆಯ ಫಲದ ಮೇಲೆ ಕೆಲವರು ಪರೋಪಜೀವಿಗಳಾಗಿ ಬದುಕುವುದೇಕೆ ? ಹೊಟ್ಟೆಯಿದ್ದವರಿಗೆಲ್ಲ ರಟ್ಟೆಗಳಿಲ್ಲವೆ ? ಪ್ರತಿಯೊಬ್ಬರೂ ದುಡಿಯಬೇಕು. ತನ್ನ ಅನ್ನ ತಾನೇ ಗಳಿಸಿ ಉಂಡು-ಉಟ್ಟು ಜೀವಿಸುವಂತಾಗಬೇಕು.

ಇವೇ ಮುಂತಾದ ವಿಚಾರಗಳನ್ನು ಪ್ರತಿಪಾದಿಸಿ, ನಿರಾಕಾರ ವಿಶ್ವಚೈತನ್ಯವನ್ನು ಇಷ್ಟಲಿಂಗರೂಪದಲ್ಲಿ ಅಂದರೆ ವಿಶ್ವಾಕಾರದಲ್ಲಿ ಚುಳುಕಾಗಿಸಿ ಸ್ವತಂತ್ರವಾಗಿ ಪ್ರತಿಯೊಬ್ಬರೂ ಪೂಜಿಸುವ ಧಾರ್ಮಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ

ಸಾಧನೆಯ ಮಾರ್ಗ, ಸರ್ವರಿಗೂ ಸಮಾನತೆಯ ದೇವ ಪರಿಕಲ್ಪನೆಯನ್ನು ತೋರಿಸಿದರು ಬಸವಣ್ಣನವರು. ಕಾಯಕ–ದಾಸೋಹ–ಪ್ರಸಾದ–ಮಾನವೀಯತೆಯ ತಮ್ಮ ಸ್ವತಂತ್ರ ಚಿಂತನೆಗಳನ್ನು ಮಂಡಿಸಿದರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ. ಜಾತಿ–ಕುಲಭೇದವೆಣಿಸಬಾರದು. ಸಕಲಜೀವಾತ್ಮರಿಗೆ ಲೇಸನೆ ಬಯಸುವಂತಾಗಬೇಕು. ಸ್ತ್ರೀ–ಪುರುಷ, ವಿಪ್ರ–ಶೂದ್ರ, ಕುಲಜ–ಅಂತ್ಯಜರೆನ್ನದೇ ಸರ್ವರಿಗೂ ಒಂದೇ ರೀತಿಯ ಸಮಾನ ದೀಕ್ಷಾ ಸಂಸ್ಕಾರ (ಇಷ್ಟಲಿಂಗ ದೀಕ್ಷೆ) ಎಂಬ ತಮ್ಮ ಹೊಸದಾದ ಆವಿಷ್ಕಾರವನ್ನು ಪ್ರಾತ್ಯಕ್ಷಿಕವಾಗಿ ತೋರಿಸಿದರು.

ಬಸವಣ್ಣನವರ ಈ ವಿನೂತನವಾದ ಇಷ್ಟಲಿಂಗ ತತ್ವ–ಸಿದ್ಧಾಂತದರ್ಶನ ವಿಚಾರ ಕೇಳಿ–ನೋಡಿ ವಿದ್ವತ್ ಸಭೆ ಬೆರಗಾಯಿತು. ಈ ಯುವ ಪ್ರತಿಭೆ ಈ ಸನಾತನ ಧರ್ಮ–ದಾರ್ಶನಿಕ ಪರಂಪರೆಗೆ ಹೊಸ ಆಯಾಮ ನೀಡಬಲ್ಲನೆಂದು ಎಲ್ಲರೂ ಹಾರ್ದಿಕವಾಗಿ ಅಭಿನಂದಿಸಿ ಶುಭ ಹಾರೈಸಿದರು. ಈ ಘಟಿಕೋತ್ಸವಕ್ಕೆ ಆಗಮಿಸಿದ್ದ ಆ ನಾಡಿನ ಮಂಗಳವಾಡದ ಮಂತ್ರಿ ಬಲದೇವರಸರು ಪ್ರಸನ್ನರಾಗಿ, ಈಶಾನ್ಯಗುರುಗಳಲ್ಲಿ ಬಸವಣ್ಣನ ಬಗ್ಗೆ ಇವರು ಯಾರೆಂದು ಅರಿಕೆ ಮಾಡಿಕೊಂಡರು. ಬಸವಣ್ಣ ತಮ್ಮ ಸೋದರಿ ಮಾದಲಾಂಬಿಕೆಯ ಮಗನೆಂದು ತಿಳಿದ ನಂತರ, ಈ ಪ್ರತಿಭಾವಂತ ತರುಣ ತಮ್ಮ ಸೋದರಳಿಯ ಎಂದು ಹೆಮ್ಮೆ, ಅಭಿಮಾನಪಟ್ಟರು. ಅಕ್ಕನಾಗಮ್ಮಳಿಗಂತೂ ತನ್ನ ತಮ್ಮ ಸಾಧಿಸಿದ ಸಾಧನೆ ಕಣ್ಣಾರೆ ಕಂಡು ಆನಂದದಿಂದ ಅಶ್ರು ಹೊರಹೊಮ್ಮಿದವು.

ಬಸವಣ್ಣ, ನಾಗಮ್ಮ, ಶಿವದೇವ, ಚೆನ್ನಬಸವರನ್ನು ಕಂಡ ಬಲದೇವರಸ ಮಂತ್ರಿಗಳು ಹಾಗೂ ಅವರೊಂದಿಗೆ ಬಂದಿದ್ದ ಅವರ ಮಗಳು ಗಂಗಾಂಬಿಕೆ ಹಾಗೂ ಸಿದ್ಧರಸದಣ್ಣಾಯಕರ ಮಗಳು ನೀಲಾಂಬಿಕೆ (ಬಿಜ್ಜಳನ ಸಾಕು ತಂಗಿ) ಇವರೆಲ್ಲ ಸಂತಸಪಟ್ಟರು. ಬಸವಣ್ಣನ ವಿದ್ಯಾರ್ಜನೆ ಪೂರ್ಣಗೊಂಡಿರುವುದರಿಂದ ಅವರ ಕಾಯಕ–ಉದ್ಯೋಗಕ್ಕಾಗಿ ಮಂಗಳವಾಡ ರಾಜಧಾನಿಗೆ ಬರಲು ಆಮಂತ್ರಿಸಿ ಹೊರಟು ಹೋದರು.

೧೦. ಅಕ್ಕನಾಗಮ್ಮ–ಬಸವಣ್ಣನವರು ಮಂಗಳವಾಡಕ್ಕೆ :

ಬಲದೇವರಸ ಮಂತ್ರಿಗಳ ಆತ್ಮೀಯ ಕೋರಿಕೆಯನ್ನು ಈಶಾನ್ಯಗುರುಗಳ ಮುಂದೆ ಚರ್ಚಿಸಿದರು. ಗುರುಗಳು ತಮ್ಮ ಜ್ಞಾನ ದೃಷ್ಟಿಯಿಂದ ಬಸವಣ್ಣನವರ ಉಜ್ವಲ ಭವಿಷ್ಯಕ್ಕಾಗಿ, ಅವರ ಧ್ಯೇಯಾದರ್ಶಗಳ ಕಾರ್ಯರೂಪಕ್ಕಾಗಿ ರಾಜಾಶ್ರಯದಲ್ಲಿ ಕಾಯಕ ಮಾಡುತ್ತಾ ಜೀವನರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಗುರುಗಳ ಅಪ್ಪಣೆ, ಬ್ರಹ್ಮಪುರಿಯ ಬಂಧು–ಬಾಂಧವರ ಒಪ್ಪಿಗೆ ಪಡೆದರು. ಈಗಾಗಲೇ ಇಂಗಳೇಶ್ವರ ಬಾಗೇವಾಡಿಯಲ್ಲಿ ಮಾದರಸ ಮಾದಲಾಂಬಿಕೆ–ಮುತ್ತಜ್ಜಿಯರು ನಿಧನರಾಗಿದ್ದರು. ಬಾಗೇವಾಡಿ ಅಗ್ರಹಾರದಿಂದ ಹನ್ನೆರಡು

ವರುಷಗಳ ಹಿಂದೆ ಬಹಿಷ್ಕೃತರಾದುದರಿಂದ ಅತ್ತ ಹೋಗುವ ಪ್ರಶ್ನೆಯೇ ಇರಲಿಲ್ಲ.

ಅಕ್ಕನಾಗಮ್ಮ-ಶಿವದೇವರೊಂದಿಗೆ ಬಸವಣ್ಣನವರು ಮಂಗಳವಾಡಿಗೆ ಬಂದರು. ಅಲ್ಲಿ ಸೋದರ ಮಾವ ಬಲದೇವರಸ ಮಂತ್ರಿಯ ನಿವಾಸಕ್ಕೆ ಆಗಮಿಸಿದರು. ಬಲದೇವರಸರ ಪತ್ನಿಯು ಈಗಾಗಲೇ ನಿಧನಳಾಗಿದ್ದರಿಂದ, ೧೮ ವರುಷದ ಯುವತಿ ಗಂಗಾಂಬಿಕೆಯೇ ಮನೆಯ ಮಗಳಾಗಿ ತಂದೆಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಳು. ಮಂತ್ರಿಗಳ ಮನೆಯಾದುದರಿಂದ ಆಳು-ಕಾಳುಗಳಿದ್ದರು. ಗಂಗಾಂಬಿಕೆಯು ಅಕ್ಕನಾಗಮ್ಮಳನ್ನು ತಾಯಿಯಂತೆ ನೋಡಿಕೊಂಡಳು. ಬಸವಣ್ಣನವರ ಬಗ್ಗೆ ಗೌರವ-ಪ್ರೀತಿ ಬೆಳೆಸಿಕೊಂಡಿದ್ದಳು. ಚಿಕ್ಕ ಬಾಲಕ ಚೆನ್ನಬಸವಣ್ಣ ಮನೆಯಲಿ ಎಲ್ಲರ ಕಣ್ಮಣಿಯಾಗಿ ಬಿಟ್ಟನು. ಮನೆಯ ಒಳ-ಹೊರಗೆಲ್ಲ ಓಡಾಡುತ್ತಾ ಜಾಣ ಮಾತನಾಡುತ್ತಾ ಎಲ್ಲರ ಮನಸ್ಸು ಮುದಗೊಳಿಸುತ್ತಿದ್ದನು.

೧೧. ಬಿಜ್ಜಳನ ರಾಜ್ಯ-ಕೋಶದಲ್ಲಿ ಕರಣಿಕ ಕಾಯಕ ಪ್ರಾರಂಭ :

ಮಂತ್ರಿ ಬಲದೇವರಸರು ರಾಜ್ಯ-ಕೋಶದ ಆರ್ಥಿಕ ಮಂತ್ರಿಗಳೇ ಆಗಿದ್ದುದರಿಂದ ಸೋದರಳಿಯ ಬಸವಣ್ಣನನ್ನು ಕರೆದುಕೊಂಡು ಬಿಜ್ಜಳನ ಅರಮನೆಗೆ ಬಂದರು. ಆ ಸಂದರ್ಭದಲ್ಲಿ ಬಿಜ್ಜಳನ ಸಮ್ಮುಖದಲ್ಲಿ ಕೋಶಾಧಿಕಾರಿಗಳು, ಕರಣಿಕರು ರಾಜ್ಯಬೊಕ್ಕಸದ ವಾರ್ಷಿಕ ಲೆಕ್ಕಪತ್ರದ ಆಯ-ವ್ಯಯ ಪತ್ರಿಕೆ ಸಿದ್ಧಪಡಿಸುತ್ತಿದ್ದರು. ಲೆಕ್ಕಪತ್ರಕ್ಕೂ ಹಾಗೂ ಬೊಕ್ಕಸದ ಹಣಕ್ಕೂ ತಾಳೆಯಾಗುತ್ತಿರಲಿಲ್ಲ. ಒಂದು ಲಕ್ಷ ಹೊನ್ನು ವ್ಯತ್ಯಾಸವಾಗುತ್ತಿತ್ತು. ಎಲ್ಲರೂ ತರುಣ ಬಿಜ್ಜಳ ರಾಜನ ಸಮ್ಮುಖದಲ್ಲಿ ಭಯವಿಹ್ವಲರಾಗಿದ್ದರು. ಎಷ್ಟೇ ಪ್ರಯತ್ನಿಸಿದರೂ ಹಣಕಾಸು ತಾಳೆಯಾಗುತ್ತಿರಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಅರ್ಥಶಾಸ್ತ್ರ ಪರಿಣಿತ ಬಸವಣ್ಣನವರು, ತಾವೊಂದು ಸಲ ಲೆಕ್ಕಪತ್ರದ ಖಾತೆ-ಕೀರ್ದಿ ಪರಿಶೀಲಸಬಹುದೇ ಎಂದು ಕೋಶಾಧಿಕಾರಿ ಸೊಡ್ಡಳ ಬಾಚರಸರಲ್ಲಿ, ಮಂತ್ರಿ ಬಲದೇವರಲ್ಲಿ, ರಾಜ ಬಿಜ್ಜಳನಲ್ಲಿ ವಿನಂತಿ ಮಾಡಿಕೊಂಡರು. ರಾಜ ಬಿಜ್ಜಳನು ಒಪ್ಪಿಗೆ ನೀಡಿದಾಗ, ಲೆಕ್ಕ-ಪತ್ರ ಕೂಲಂಕಶವಾಗಿ ಪರಿಶೀಲನೆ ಮಾಡಿದಾಗ ಇವರ ತೀಕ್ಷ್ಣದೃಷ್ಟಿಗೆ ಅಂಕಿ-ಸಂಖ್ಯೆಗಳಲ್ಲಾಗಿರುವ ದೋಷ ಕಂಡು ಅದನ್ನು ಸರಿದೂಗಿಸಿಕೊಟ್ಟರು.

ಬಸವಣ್ಣನವರ ಪ್ರತಿಭೆ-ಹಣಕಾಸು ಲೆಕ್ಕಪತ್ರ ಜಾಣ್ಮೆ ಕಂಡು ಬಿಜ್ಜಳಗೆ ಸಂತೋಷವಾಗಿ, ಬಲದೇವಮಂತ್ರಿಯೊಂದಿಗೆ ವಿಚಾರಿಸಲಾಗಿ, ಬಸವಣ್ಣ, ಬಲದೇವರಸರ ಸೋದರಳಿಯನೆಂದೂ, ವಿದ್ಯಾರ್ಜನೆ ಪೂರೈಸಿರುವ, ಉದ್ಯೋಗದ ಅನ್ವೇಷಣೆಯಲ್ಲಿರುವ ಯುವಕನೆಂದು ಅರಿತು, ತನ್ನ ರಾಜ್ಯಕೋಶದಲ್ಲಿಯೇ ಲೆಕ್ಕಪತ್ರ ತಪಾಸಣೆ ಕರಣಿಕ ಕಾಯಕಕ್ಕೆ ನೇಮಿಸಿಕೊಂಡನು. ಬಸವಣ್ಣನವರು ಸತ್ಯ-ಶುದ್ಧವಾಗಿ ನಿಷ್ಠೆಯಿಂದ ಕಾಯಕ ಪ್ರಾರಂಭಿಸಿದರು.

೧೨. ಬಸವಣ್ಣ ಗಂಗಾಂಬಿಕೆಯರ ವಿವಾಹ :

ಅಕ್ಕನಾಗಮ್ಮಳ ಹಾಗೂ ಶಿವದೇವರು ಬಲದೇವರಸರ ಇಚ್ಛೆಯಂತೆ ಬಸವಣ್ಣ-ಗಂಗಾಂಬಿಕೆಯ ಮದುವೆ ಮಾಡಲು ನಿರ್ಧರಿಸಿದರು. ಕಪ್ಪಡಿ ಸಂಗಮದಲ್ಲಿದ್ದ ಈಶಾನ್ಯಗುರುಗಳನ್ನು ಶಿವದೇವರ ಮೂಲಕ ಬಿನ್ನಹ ಮಾಡಿ ಕರೆಯಿಸಿಕೊಂಡರು. ಬಸವಣ್ಣನವರ ಇಚ್ಛೆಯಂತೆ, ಅಕ್ಕನಾಗಮ್ಮನವರು ಗುರುಮೂರ್ತಿಯಾಗಿ ಗಂಗಾಂಬಿಕೆಗೆ ಇಷ್ಟಲಿಂಗದೀಕ್ಷಾ ಸಂಸ್ಕಾರ ನೀಡಿದರು.

ಬಸವಣ್ಣ-ಗಂಗಾಂಬಿಕೆಯರ ಕಲ್ಯಾಣ ಮಹೋತ್ಸವಕ್ಕೆ ರಾಜಬಿಜ್ಜಳ, ಮಂತ್ರಿಪರಿವಾರದವರು, ಕಪ್ಪಡಿ ಸಂಗಮದ ವಿದ್ಯಾಗುರುಗಳು, ಹಾಗೂ ಸಹಪಾಠಿಗಳು ಆಗಮಿಸಿ, ಶುಭ ಹಾರೈಸಿದರು. ಅನಂತರ ಬಾಲಕ ಚೆನ್ನಬಸವಣ್ಣ ಕಪ್ಪಡಿ ಸಂಗಮದ ಗುರುಕುಲದಲ್ಲಿ ಓದುತ್ತಿದ್ದುದರಿಂದ ಶಿವದೇವರು ಮಗನನ್ನು ಕರೆದುಕೊಂಡು ಕಪ್ಪಡಿ ಸಂಗಮಕ್ಕೆ ತೆರಳಿದರು. ಅಕ್ಕನಾಗಮ್ಮಳು ಮನೆಯಲ್ಲಿ ಹಿರಿಯ ತಾಯಿಯಾಗಿದ್ದು, ಬಲದೇವರಸರ ಇಚ್ಛೆಯಂತೆ ಮಂಗಳವಾಡಿಯಲ್ಲಿಯೇ ಉಳಿದಳು.

೧೩. ಮಂಗಳವಾಡಿಯಲ್ಲಿ ಅನುಭಾವಗೋಷ್ಠಿ ಪ್ರಾರಂಭ :

ಬಸವಣ್ಣನವರು ಈಗ ಸ್ವತಂತ್ರ ಕಾಯಕ ನಿರ್ವಹಿಸುತ್ತಿದ್ದುದರಿಂದ, ಮಾವನ ಮನೆಯಲ್ಲಿರುವುದು ಸೂಕ್ತವಲ್ಲವೆಂದು ನಿರ್ಧರಿಸಿ, ಅಕ್ಕನಾಗಮ್ಮ ಹಾಗೂ ಪತ್ನಿ ಗಂಗಾಂಬಿಕೆಯರೊಂದಿಗೆ ಚರ್ಚಿಸಿ, ಸ್ವತಂತ್ರ ಮನೆ ಮಾಡಿ ವಾಸಿಸಲು ನಿರ್ಧರಿಸಿದರು. ಬಸವಣ್ಣನವರ ಸ್ವಾಭಿಮಾನ ಹಾಗೂ ಸ್ವತಂತ್ರ ಜೀವನ ನಿರ್ಧಾರ ಕಂಡು ವಯೋವೃದ್ಧ ಬಲದೇವ ಮಂತ್ರಿಗಳು ಒಪ್ಪಿಗೆ ನೀಡಿದರು. ಅದರಂತೆಯೇ ಮಂಗಳವಾಡಿ ರಾಜಧಾನಿಯಲ್ಲಿರುವ ಅಧಿಕಾರಿಗಳ ವಸತಿ ಗೃಹಗಳ ಸಾಲಿನಲ್ಲಿಯೇ ಒಂದು ಅಧಿಕೃತ ಮನೆ ನೀಡಲಾಯಿತು.

ತನ್ನ ಕಾಯಕದ ಪ್ರತಿಫಲದಲ್ಲಿಯೇ ಅಚ್ಚುಕಟ್ಟಾಗಿ ಸಂಸಾರಕ್ಕೆ ಬೇಕಾಗುವ ಪಾತ್ರೆ-ಪಗಡೆಗಳನ್ನು, ದವಸ-ಧಾನ್ಯಗಳನ್ನು ಖರೀದಿಸಿದರು. ಸರಳ ಜೀವನಕ್ಕೆ ಹೊಂದಿಕೊಂಡ ಗಂಗಾಂಬಿಕೆಯು ಪತಿಯ ಮಾರ್ಗಾನುಸರಣೆಯಲ್ಲಿ, ಅಕ್ಕನಾಗಮ್ಮ ತಾಯಿಗಳ ಮಾರ್ಗದರ್ಶನದಲ್ಲಿ ಗೃಹಕಾರ್ಯಗಳನ್ನು ನಿಭಾಯಿಸುತ್ತಾ ಎಲ್ಲರ ಪ್ರೀತಿಗೆ ಪಾತ್ರಳಾದಳು.

ಬಸವಣ್ಣನವರು ತಮ್ಮ ನೂತನ ಮನೆಯ ಪಡಸಾಲೆಯಲ್ಲಿಯೇ ಪ್ರತಿದಿನ ಸಂಜೆ ಶಿವಾನುಭವ ಗೋಷ್ಠಿ ವಚನ ಚಿಂತನ ಪ್ರಾರಂಭಿಸಿದರು. ಕಪ್ಪಡಿ ಸಂಗಮದ ಶರಣದಂಪತಿಗಳಾದ ಹಡಪದ ಅಪ್ಪಣ್ಣ-ಲಿಂಗಮ್ಮರೂ ಮಂಗಳವಾಡಕ್ಕೆ ಆಗಮಿಸಿದ್ದರು. ಅಪ್ಪಣ್ಣನವರು ಕ್ಷೌರಿಕ ಕಾಯಕ ಕೈಕೊಂಡಿದ್ದರೆ, ಲಿಂಗಮ್ಮನವರು ಅಕ್ಕನಾಗಮ್ಮನವರ ಹತ್ತಿರ ಪ್ರಸಾದ-ದಾಸೋಹದಲ್ಲಿ ಸಹಕಾರ ನೀಡುತ್ತಿದ್ದರು.

ಬಸವಣ್ಣ, ಅಕ್ಕನಾಗಮ್ಮರು ವಚನ ರಚನೆ ಪ್ರಾರಂಭಿಸಿದ್ದರು. ತಮ್ಮ ಅನುಭವಗಳನ್ನು ಸರಳಗನ್ನಡದಲ್ಲಿ ತಾಡೋಲೆಗಳಲ್ಲಿ ಬರೆದಿಡುತ್ತಿದ್ದರು.

ಬಸವಣ್ಣನವರ ಮನೆಯ ಅನುಭಾವಗೋಷ್ಠಿಯ ವಿಚಾರ ತಿಳಿದು, ಸಿದ್ಧರಸ ಮಂತ್ರಿ ಹಾಗೂ ಪದ್ಮಗಂಧಿಯರ ಮಗಳು ನೀಲಾಂಬಿಕೆಯು (ಬಾಲ್ಯದಲ್ಲಿಯೇ ತಂದೆ-ತಾಯಿ ತೀರಿಕೊಂಡಿದ್ದರಿಂದ) ಬಿಜ್ಜಳನ ಸಾಕು ತಂಗಿಯಾಗಿ ಬೆಳೆದು ಸಂಗೀತ ಕಲೆಯಲಿ ಪರಿಣಿತಳಾಗಿದ್ದುದರಿಂದ, ಗಂಗಾಂಬಿಕೆಯ ಚಿಕ್ಕಪ್ಪನ ಮಗಳಾದುದರಿಂದ ಬಾಲ್ಯದಿಂದಲೂ ಕೂಡಿಯೇ ಬೆಳೆದವಳಾಗಿದ್ದರಿಂದ, ಪ್ರತಿದಿನ ಸಂಜೆಯ ಅನುಭಾವ-ವಚನ ಗೋಷ್ಠಿಗೆ ಆಗಮಿಸತೊಡಗಿದಳು. ಗಂಗಾಂಬಿಕೆ-ನೀಲಾಂಬಿಕೆಯರು ಅನ್ಯೋನ್ಯರಾಗಿದ್ದರು. ನೀಲಾಂಬಿಕೆಯು ಬಸವಣ್ಣನವರ ವಚನ ತಾಡೋಲೆಗಳನ್ನು ಓದಿ, ಸುಶ್ರಾವ್ಯವಾಗಿ ವಚನ-ಗಾಯನ ಮಾಡುತ್ತಿದ್ದಳು. ಬರಬರುತ್ತಾ ಬಸವಣ್ಣನವರನ್ನು ತನ್ನಂತರಂಗದಲ್ಲಿ ಆರಾಧಿಸ-ತೊಡಗಿದಳು, ಅದು ಪ್ರೇಮವಾಗಿ ಮಾರ್ಪಾಟಾಗತೊಡಗಿತು.

೧೪. ಬಸವಣ್ಣ ನೀಲಾಂಬಿಕೆಯರ ಕಲ್ಯಾಣ ವಿವಾಹ :

ನೀಲಾಂಬಿಕೆಯು ಮದುವೆಯ ವಯಸ್ಸಿಗೆ ಬಂದುದನ್ನರಿತ ಬಿಜ್ಜಳನು ಈ ಕುರಿತು ತಂಗಿಯನ್ನು ವಿಚಾರಿಸಲಾಗಿ ಅವಳು ಸಂಕೋಚದಿಂದ ತನ್ನ ಮನದ ಇಂಗಿತವನ್ನು ಅಣ್ಣ ಬಿಜ್ಜಳನಲ್ಲಿ ಹೇಳಿಕೊಂಡಳು. ಇತ್ತ ಬಸವಣ್ಣನವರ ಮನೆಯಲ್ಲಿ ಅಕ್ಕನಾಗಮ್ಮನವರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ನೀಲಾಂಬಿಕೆಯೂ ಒಳಗಿಂದೊಳಗೆ ಬಸವಣ್ಣನವರನ್ನು ಪ್ರೀತಿ-ಆರಾಧನಾ ಭಾವದಿಂದ ನೋಡುವುದನ್ನು ಗಮನಿಸಿದ್ದರು. ಬಸವಣ್ಣನವರ ವಚನಗಳನ್ನು ಶ್ರದ್ಧೆಯಿಂದ ಹಾಡುವುದನ್ನು, ಸ್ವತಃ ತಾನೂ ವಚನಗಳನ್ನು ರಚಿಸಿ ಗೋಷ್ಠಿಗಳಲ್ಲಿ ಹಾಡುವುದನ್ನೂ ಕೇಳಿದ್ದರು. ಒಂದು ಸಲ ಒಬ್ಬಳೇ ಕುಳಿತು-

ಎನಗೆ ಲಿಂಗವು ನೀವೆ ಬಸವಯ್ಯಾ
ಎನಗೆ ಸಂಗವು ನೀವೆ ಬಸವಯ್ಯಾ
ಎನಗೆ ಪ್ರಾಣವು ನೀವೆ ಬಸವಯ್ಯಾ
ಎನಗೆ ಪ್ರಸಾದವು ನೀವೆ ಬಸವಯ್ಯಾ
ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ
ಎನಗೆ ಸಂಗಯ್ಯನು ನೀವೆ ಬಸವಯ್ಯಾ

ಎಂದು ಹಾಡುತ್ತಾ ಹಾಡುತ್ತಾ ಮೈಮರೆತು ಭಾವಲೋಕದಲ್ಲಿ ಮುಳುಗಿದುದನ್ನು ಅಕ್ಕನಾಗಮ್ಮ ಹಾಗೂ ಗಂಗಾಂಬಿಕೆ ಇಬ್ಬರೂ ಗಮನಿಸಿದ್ದರು. ಆಗಿನ ಕಾಲದಲ್ಲಿ ರಾಜ-ಮಹಾರಾಜರಲ್ಲಿ, ಮಂತ್ರಿ-ಪಾಳೆಯಗಾರರಲ್ಲಿ ಬಹುಪತ್ನಿತ್ವ ಸಹಜ ರೂಢಿಯಲ್ಲಿತ್ತು. ಈ ಕುರಿತು ಬಿಜ್ಜಳರಾಜನಲ್ಲಿ ಪ್ರಸ್ತಾಪಿಸುವುದು ಹೇಗೆಂದು

ಯೋಚನೆಯಲ್ಲಿರುವಾಗಲೇ ಸ್ವತಃ ಬಿಜ್ಜಳರಾಜನೇ ಸಪತ್ನೀಕನಾಗಿ ತನ್ನ ಪರಿವಾರದೊಂದಿಗೆ ಫಲ-ಪುಷ್ಪ-ತಾಂಬೂಲದೊಂದಿಗೆ ಮದುವೆ ಪ್ರಸ್ತಾಪ ಮಾಡಲು ಬಸವಣ್ಣನವರ ಮನೆಗೆ ಆಗಮಿಸಿದನು. ಸ್ವತಃ ರಾಜರೇ ಬಂದುದನ್ನು ಕಂಡು ಅಕ್ಕನಾಗಮ್ಮ, ಗಂಗಾಂಬಿಕೆಯರು ಆನಂದಾಶ್ಚರ್ಯಗಳಿಂದ ಸ್ವಾಗತಿಸಿದರು. ಈ ಪ್ರಸ್ತಾವನೆಗೆ ಬಸವಣ್ಣನವರು ಏನನ್ನೂ ಹೇಳದೆ ಮೌನವಾದರು. ಅಕ್ಕನಾಗಮ್ಮ ಹಾಗೂ ಗಂಗಾಂಬಿಕೆಯರೇ ಬಸವಣ್ಣನವರನ್ನು ಅನುನಯದಿಂದ– 'ಬಾಲ್ಯದಲಿಯೇ ತಂದೆ-ತಾಯಿಯರನ್ನು ಕಳೆದುಕೊಂಡ ನೀಲಾಂಬಿಕೆಯು ಬಿಜ್ಜಳನ ಅರಮನೆಯಲ್ಲಿ ಆತನ ಸಾಕು ತಂಗಿಯಾಗಿ ರಾಜಕುವರಿಯಂತೆ ಬೆಳೆದಿದ್ದರೂ ಕೂಡ, ಅವಳೂ ಸಹಿತ ನಿನ್ನ ಇನ್ನೊಬ್ಬ ಸೋದರಮಾವ ಸಿದ್ಧರಸ ಮಂತ್ರಿಗಳ ಮಗಳೇ ಆಗಿದ್ದಾಳೆ. ಗಂಗಾಂಬಿಕೆ-ನೀಲಾಂಬಿಕೆಯರು ವಾಸ್ತವದಲ್ಲಿ ಅಕ್ಕ-ತಂಗಿಯರೇ ಆಗಿದ್ದು ಅನ್ಯೋನ್ಯ ಸ್ನೇಹ-ಸಂಬಂಧ ಹೊಂದಿದ್ದಾರೆ, ಒಪ್ಪಿಕೊಳ್ಳು ಎಂದು ಅಕ್ಕನಾಗಮ್ಮ ಹೇಳಿದರೆ; ಗಂಗಾಂಬಿಕೆಯು– 'ನಾವಿಬ್ಬರೂ ನಿಮ್ಮ ಬಾಳಿನಲ್ಲಿ ಕ್ರಿಯಾಶಕ್ತಿ-ಜ್ಞಾನಶಕ್ತಿಯರಾಗಿ ಕಾರ್ಯನಿರ್ವಹಿಸುತ್ತೇವೆ. ನಿಮ್ಮ ಮಹಾಮಣಿಹದಲ್ಲಿ ಸೇವೆ ಸಲ್ಲಿಸುತ್ತೇವೆ. ನಮ್ಮಲ್ಲಿ ಎಂದಿಗೂ ಭಿನ್ನ-ಅಭಿಪ್ರಾಯಗಳು ಬರದಂತೆ ಇರುತ್ತೇವೆ. ನಮ್ಮಿಬ್ಬರಿಗೂ ಅಕ್ಕನಾಗಮ್ಮ ತಾಯಿಯಂತಿದ್ದಾರೆ' ಒಪ್ಪಿಕೊಳ್ಳಿರಿ ಎಂದು ಬೇಡಿಕೊಂಡಳು.

ಎಲ್ಲವೂ ಸಂಗಯ್ಯನಿಚ್ಛೆಯಿದ್ದಂತಾಗಲಿ ಎಂದು ಬಸವಣ್ಣನವರು ಒಪ್ಪಿಗೆ ಸೂಚಿಸಿದರು. ರಾಜ ಬಿಜ್ಜಳನು ಅಣ್ಣನಾಗಿ ತನ್ನ ಜವಾಬ್ದಾರಿ ನಿರ್ವಹಿಸಿದನು. ಅಕ್ಕನಾಗಮ್ಮನವರೇ ಕಲ್ಯಾಣ ಮಹೋತ್ಸವದ ದಿನ ನೀಲಾಂಬಿಕೆಗೆ ಇಷ್ಟಲಿಂಗದೀಕ್ಷೆ ನೀಡಿದರು. ವಚನ ಪಠಣ-ಪುಷ್ಪವೃಷ್ಟಿಯೊಂದಿಗೆ ಕಲ್ಯಾಣಮಹೋತ್ಸವ ಜರುಗಿತು. ಅಕ್ಕನಾಗಮ್ಮ-ಶಿವದೇವರು ನೀಲಾಂಬಿಕೆಯನ್ನು ಮನೆ ತುಂಬಿಸಿಕೊಂಡರು. ಈ ವರೆಗೆ 'ಗಂಗಾ-ಬಸವ' ರಾಗಿದ್ದವರು ಈಗ 'ನೀಲಗಂಗಾಬಸವ' ರಾದರು. ಬಸವಣ್ಣನವರ ಬಾಳಿನಲ್ಲಿ ಗಂಗಾಂಬಿಕೆ ಆಚಾರಪತ್ನಿಯಾದರೆ, ನೀಲಾಂಬಿಕೆ ವಿಚಾರಪತ್ನಿಯಾದಳು. ಅಕ್ಕನಾಗಮ್ಮನವರಿಗೆ ಗಂಗಾ-ನೀಲಾರು ಎರಡು ಕಣ್ಣುಗಳಾದರೆ, ಬಸವಣ್ಣ, ಅವರ ಅರಿವಿನ ಮೂರನೆಯ ಕಣ್ಣಾಗಿದ್ದರು.

ಮಂಗಳವಾಡಿಯಲ್ಲಿ ೫-೬ ವರುಷಗಳು ಕಾಯಕ-ದಾಸೋಹ-ಶಿವಾನುಭಗೋಷ್ಠಿಯಲ್ಲಿ ಕಳೆದುದೇ ಗೊತ್ತಾಗಲಿಲ್ಲ. ಸುತ್ತ-ಮುತ್ತಲಿನ ಊರುಗಳಿಂದ ಆಗಾಗ ಶರಣ-ಶರಣೆಯರು ಆಗಮಿಸಿ ಶಿವಾನುಭವ ಕೇಳಿ ಹೋಗುತ್ತಿದ್ದರು.

೧೫. ಮಂಗಳವಾಡದಿಂದ ಕಲ್ಯಾಣಕ್ಕೆ :

ಬಿಜ್ಜಳರಾಜನು ಚಾಲುಕ್ಯ ಸಾಮ್ರಾಜ್ಯದ ಮಾಂಡಳಿಕ ದೊರೆಯಾಗಿದ್ದರೂ ಕೂಡ ಸಾಮ್ರಾಟರ ಮನೆತನದ ಸಂಬಂಧಿಕನೇ ಆಗಿದ್ದನು. ರಾಜಕೀಯ ಮಹಾತ್ವಾಕಾಂಕ್ಷಿಯಾಗಿದ್ದ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯದ ರಾಜಧಾನಿ ಕಲ್ಯಾಣದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನೆಲ್ಲ ಗಮನಿಸುತ್ತಲೇ ಇದ್ದನು. ಚಾಲುಕ್ಯರ ಮೂರನೆಯ

ತೈಲಪನು ಚಕ್ರವರ್ತಿಯಾಗಿ ಪಟ್ಟಾಭಿಷಕ್ತನಾದ ನಂತರ, ಕಾಲಾನಂತರದಲಿ ಭೋಗ-ವಿಲಾಸಕ್ಕೆ ಬಲಿಯಾದನು. ಕುಡಿತ-ಕುಣಿತ-ಜೂಜು-ಪಗಡೆಗಳಿಗೆ ಮಾರುಹೋಗಿ ರಾಜ್ಯಾಡಳಿತ ನಿರ್ವಹಣೆಯ ಕಡೆಗೆ ಅಲಕ್ಷ ಮಾಡಿದನು. ಇದರಿಂದಾಗಿ ಅಲ್ಲಲ್ಲಿ ಸಾಮಂತರಾಜರು ಸ್ವತಂತ್ರರಾಗಲು ಸಂಚುರೂಪಿಸಲು, ಹೊಂಚುಹಾಕಲು, ದಂಗೆಯೇಳಲು ಪ್ರಾರಂಭಿಸಿದರು. ಇದನ್ನರಿತ ವೀರ ಬಿಜ್ಜಳನು ಕಲ್ಯಾಣದ ಸೈನ್ಯಾಡಳಿತ ಕ್ರೋಢೀಕರಿಸಿ, ಈ ದಂಗೆಗಳನೆಲ್ಲ ಬಗ್ಗು ಬಡಿದು ಶಮನ ಮಾಡ-ತೊಡಗಿದನು. ವಿಲಾಸದಲ್ಲಿ ಮುಳುಗಿದ್ದ ೩ನೆಯ ತೈಲಪನು ದುರ್ಬಲಗೊಳ್ಳುತ್ತ ಬಂದಂತೆ ಬಿಜ್ಜಳನು ಸಬಲನಾಗುತ್ತಾ ಹೋದನು. ಪ್ರಜೆಗಳೂ ಕೂಡ ಬಿಜ್ಜಳನೆ ದೊರೆಯಾದರೆ ನಾಡು ಸುಭಿಕ್ಷವಾಗುವುದೆಂದೇ ಬಯಸತೊಡಗಿದ್ದರು.

ಗುಪ್ತಚಾರರಿಂದ ಇದನ್ನೆಲ್ಲ ಅರಿತ ಬಿಜ್ಜಳನು ಸಮಯಸಾಧಿಸಿ, ತೈಲಪನನ್ನು ಬಂಧಿಸಿ, ಕಾರಾಗೃಹದಲ್ಲಿರಿಸಿದನು. ಪ್ರಜೆಗಳ ನಿರೀಕ್ಷೆಯಂತೆ ಕಲ್ಯಾಣ ಸಾಮ್ರಾಜ್ಯದ ಚಕ್ರವರ್ತಿ, ಸಾಮ್ರಾಟ್, ಭೂಪಾಲನೆಂದು ಘೋಷಿಸಿಕೊಂಡನು. ಇದಕ್ಕೆ ತಕ್ಕಂತೆ, ಅಲ್ಲಿದ್ದ ತನ್ನ ಆಪ್ತರೂ, ವಿಶ್ವಾಸಿಕರೂ ಅಗಿದ್ದ ಮಂತ್ರಿ-ದಂಡನಾಯಕರನ್ನು, ಯೋಗ್ಯ ಅಧಿಕಾರಿಗಳನ್ನು ರಾಜಧಾನಿ ಕಲ್ಯಾಣಕ್ಕೆ ಬರುವಂತೆ ಮಾಡಿ, ಪ್ರಮುಖ ಖಾತೆಗಳನ್ನು ನಿರ್ವಹಿಸಲು ನೇಮಿಸಿದನು. ಹೀಗಾಗಿ ಮಂಗಳವಾಡಿಯಲ್ಲಿ ಬಲದೇವರಸರ ನಿಧನದ ನಂತರ ತೆರವಾಗಿದ್ದ ಅರ್ಥಮಂತ್ರಿ ಹುದ್ದೆಯನ್ನು ಬಸವಣ್ಣನವರಿಗೆ ನೀಡಿ ಗೌರವಿಸಿದ್ದನು.

ಬಸವಣ್ಣನವರು ಮಂತ್ರಿಯಾಗಿ ತರ್ದೇವಾಡಿ ೧೦೦೦ ಪ್ರಾಂತ ಹಾಗೂ ಕರ್ಹಾಡ ೪೦೦೦ ಪ್ರಾಂತಗಳಲ್ಲಿ ಆರ್ಥಿಕ ಯೋಜನೆಗಳನ್ನು ರೂಪಿಸಿ, ಪ್ರಜೆಗಳಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಸಿದ್ದರು. ಇದನ್ನರಿತಿದ್ದ ಬಿಜ್ಜಳನು ಬಸವಣ್ಣನವರ ಕುಟುಂಬ ಪರಿವಾರವನ್ನು ಕಲ್ಯಾಣಕ್ಕೆ ಕರೆಯಿಸಿಕೊಂಡನು. ಬಸವಣ್ಣನವರನ್ನು ಚಾಲುಕ್ಯ ಸಾಮ್ರಾಜ್ಯದ ರಾಜಕೋಶದ ಮಹಾಮಂತ್ರಿಯಾಗಿ ಮಾಡಿದನು.

೧೬. ಕಲ್ಯಾಣದಲ್ಲಿ ಕಾಯಕ-ದಾಸೋಹ ಯೋಜನೆಗಳು :

ಒಂದು ಮಾಂಡಲಿಕ ರಾಜ್ಯದ ಮಂತ್ರಿಯಾಗಿ ಕಾರ್ಯನಿರ್ವಹಿಸಿ ಹೆಸರು ಮಾಡಿದ್ದ ಬಸವಣ್ಣವರೀಗ ಚಾಲುಕ್ಯ ಸಾಮ್ರಾಜ್ಯದ ಆರ್ಥಿಕ ವ್ಯವಸ್ಥೆಯ-ರಾಜಭಂಡಾರದ ಮಹಾಮಂತ್ರಿಯಾಗಿ, ಪ್ರಧಾನಿಯಾಗಿ ಬಹುದೊಡ್ಡ ಜವಾಬ್ದಾರಿ ನಿರ್ವಹಿಸಬೇಕಾಯಿತು.

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗುಳ
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ

ಇದು ಕಲ್ಯಾಣದಲ್ಲಿ ಮಹಾಮಂತ್ರಿಯಾಗಿ ಬಸವಣ್ಣನವರು ತಮ್ಮ ಅಂತರಂಗ-ದಲ್ಲಿಯೇ ಕೂಡಲಸಂಗಮದೇವ ಸಾಕ್ಷಿಯಾಗಿ ಸ್ವೀಕರಿಸಿದ ಪ್ರತಿಜ್ಞಾವಿಧಿಯಾಗಿತ್ತು.

೩೬ ವರ್ಷರುಷಗಳ ಕಾಲ ಭಕ್ತಿಗೆ ಬೀಡಾಗಿತ್ತು ಕಲ್ಯಾಣ. ಬಸವಣ್ಣನವರು ಕಲ್ಯಾಣದಲ್ಲಿದ್ದ ೩೬ ವರುಷಗಳಲ್ಲಿ ಕಲ್ಯಾಣದ ಅಂತರಂಗ-ಬಹಿರಂಗಗಳ ಚಿತ್ರಣವನ್ನೇ ಬದಲಾಯಿಸಿದರು. ಅದು ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ-ವಾಯಿತು. ಅಂತರಂಗದಲ್ಲಿ ಅನುಭಾವ ಸಂಪತ್ತು. ಬಹಿರಂಗದಲ್ಲಿ ಸಿರಿಸಂಪತ್ತು ಅಭಿವೃದ್ಧಿಯಾಗಿ ಕಲ್ಯಾಣ-ಮಾನವಕಲ್ಯಾಣದ ಮಹಾರಾಜ್ಯವಾಯಿತು. ಸುಖೀ ರಾಜ್ಯ [Wellfare state] ವಾಯಿತು. ಬೇಡುವ ಭಿಕ್ಷುಕರಿಲ್ಲದ, ನೀಡುವ ಕಾಯಕಜೀವಿಗಳ **ಕಲ್ಯಾಣರಾಜ್ಯವಾಯಿತು.**

ಬಸವಣ್ಣನವರು-ಬಿಜ್ಜಳ ಕಲ್ಯಾಣಕ್ಕೆ ಬಂದಾಗ, ಹಿಂದಿನ ಸಾಮ್ರಾಟನ ವಿಲಾಸೀ ಜೀವನದಿಂದಾಗಿ ಆಡಳಿತದ ಮೇಲಿನ ಹಿಡಿತ ತಪ್ಪಿ ರಾಜ-ಮಂತ್ರಿ-ಅಧಿಕಾರಿಗಳು ಸಾಮ್ರಾಜ್ಯದ ಭಂಡಾರ (ಖಜಾನೆ) ವನ್ನೇ ಬರಿದು (ಖಾಲಿ) ಮಾಡಿದ್ದರು. ಪ್ರಜೆಗಳಿಗೆ ಬದುಕಿನ ಭದ್ರತೆಗೆ ಏನು ಮಾಡುವುದೆಂಬ ಯೋಚನೆಯಲ್ಲಿರುವಾಗಲೇ, ರಾಜ್ಯದ ಗ್ರಂಥಾಲಯ-ಹಸ್ತ ಪ್ರತಿ ಭಂಡಾರದಲ್ಲೊಂದು ವಿಚಿತ್ರ ಲಿಪಿಯ ತಾಮ್ರಪಟವೊಂದು ದೊರೆಯಿತು. ಅದನ್ನು ರಾಜನ ಮುಂದೆ ತಂದು ಕೊಡಲಾಗಿ, ಓದಿ ಹೇಳಲು ರಾಜನು ತನ್ನ ಆಸ್ಥಾನದ ವಿದ್ವಾಂಸರು, ಭಾಷಾ ಪಂಡಿತರುಗಳಿಗೆ ನೀಡಿದನು.

ಈ ವಿಚಿತ್ರಲಿಪಿಯನ್ನು ಓದುವಲ್ಲಿ ಪಂಡಿತರು ಅಸಮರ್ಥರಾಗಲು, ಮಹಾರಾಜ ಬಿಜ್ಜಳನು ಮಹಾಮಂತ್ರಿ ಬಸವಣ್ಣನವರನ್ನು ಕರೆಯಿಸಿ ಅವರ ಕೈಗೆ ನೀಡಲು, ಬಸವಣ್ಣನವರು ಸೂಕ್ಷ್ಮವಾಗಿ ಪರಿಶೀಲಿಸಿದರು. ಅದು ೯-೧೦ನೇ ಶತಮಾನದ ಹಳೆಗನ್ನಡ ಲಿಪಿಯನ್ನು ತಿರುವು-ಮುರುವಾಗಿ ಬರೆಯಲ್ಪಟ್ಟ ಲಿಪಿಯಾಗಿದ್ದುದು ತಿಳಿಯಿತು. ಕೂಡಲೇ ದೊಡ್ಡದಾದ ಕನ್ನಡಿ ತರಿಸಿ, ಅದರ ಮುಂದೆ ಹಿಡಿದು, ಕನ್ನಡಿಯೊಳಗೆ ಬಿಂಬಿತವಾದ ಲಿಪಿಯನ್ನು ಓದಿ ಹೇಳಿದರು. ಅದರಲ್ಲಿ 'ಚಾಲುಕ್ಯ ಸಾಮ್ರಾಟನ ಸಿಂಹಾಸನದ ಅಡಿಯಲ್ಲಿ ೯ ಕೊಪ್ಪರಿಗೆ ಹೊನ್ನು ತುಂಬಿಸಿ ಇಡಲಾಗಿದೆ. ರಾಜ್ಯದಲ್ಲಿ ಅನಾವೃಷ್ಟಿ, ಅತಿವೃಷ್ಟಿಯಾಗಿ ಕ್ಷಾಮ ತಲೆದೋರಿದಾಗ, ಸಿಂಹಾಸನ ಪಕ್ಕಕ್ಕೆ ಜರುಗಿಸಿ ನೆಲವನಗಿದು ೯ ಕೊಪ್ಪರಿಗೆ ಹೊನ್ನು ಹೊರತೆಗೆದು ಪ್ರಜೆಗಳ ಕಲ್ಯಾಣಕ್ಕೆ ಬಳಸುವುದು' ಎಂದು ಬರೆಯಲಾಗಿತ್ತು.

ಕೆಲ ಜನ ಪಂಡಿತರು ಹಾಗೂ ಕೊಂಡೆಯ ಮಂಚಣ್ಣನಂತಹ ಅಸೂಯೆ, ಮತ್ಸರದ ಮಂತ್ರಿಗಳು-ಸಿಂಹಾಸನ ಕದಲಿಸಿದರೆ ರಾಜನಿಗೆ ಹಾಗೂ ರಾಜ್ಯಕ್ಕೆ ವಿನಾಶ ಸಂಭವಿಸುವದೆಂದು ಹೇಳಿದರೂ, ರಾಜ ಬಿಜ್ಜಳ ಬಸವಣ್ಣನವರ ವಿದ್ವತ್ತು ಪ್ರಾಮಾಣಿಕತೆ ಬಲ್ಲವನಾದ್ದರಿಂದ ಧೈರ್ಯ ಮಾಡಿ ಒಪ್ಪಿಗೆ ಇತ್ತನು. ಆಗ ಸಿಂಹಾಸನವನ್ನು ಎತ್ತಿ ಪಕ್ಕಕ್ಕಿಟ್ಟು ನೆಲವನ್ನು ಆಳದವರೆಗೆ ಅಗೆಸಿದಾಗ ೯ ಕೊಪ್ಪರಿಗೆ

ಹೊನ್ನು ದೊರೆತವು. ಇದರಿಂದ ಹರ್ಷಿತನಾದ ರಾಜ ಬಿಜ್ಜಳನು ಭಂಡಾರ ತುಂಬಿಸಿದನು. ರಾಜಕೋಶದ ಮಹಾಮಂತ್ರಿಯಾಗಿದ್ದ ಬಸವಣ್ಣನವರಿಗೆ ಈ ಸಂಪತ್ತಿನಿಂದ ರಾಜ್ಯ ಸುಭಿಕ್ಷವಾಗುವಂತೆ ಕಾರ್ಯ ಮಾಡಲು ಒಪ್ಪಿಗೆ ಇತ್ತನು.

ಬಸವಣ್ಣನವರು ಚಾಲುಕ್ಯ ಸಾಮ್ರಾಜ್ಯದಾದ್ಯಂತ ಕೆರೆ, ಕಾಲುವೆಗಳನ್ನು ನಿರ್ಮಿಸಿ, ಒಡ್ಡುಗಳನ್ನು ಹಾಕಿಸಿ ಮಳೆಯನೀರು ಭೂಮಿಯಲ್ಲಿ ಇಂಗುವಂತೆ, ಎಲ್ಲ ಹೊಲಗಳಿಗೂ ಸರಿಯಾಗಿ ನೀರು ಸರಬರಾಜು ಆಗುವಂತೆ ಮಾಡಿದರು. ಜನರಿಗೆ, ದೀನ-ದಲಿತರಿಗೆ, ದುಡ್ಡು ಹಂಚದೇ ಕೈಗಳಿಗೆ ದುಡಿತವನ್ನು ಅಂದರೆ **ಕಾಯಕಗಳನ್ನು** ನೀಡಿದರು. ಗ್ರಾಮೀಣ ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದರು. ಹಳ್ಳಿಗಳಲ್ಲಿ ನಿರ್ಮಿಸುವ ಎಲ್ಲ ಪ್ರಕಾರದ ಉಪಕರಣಗಳಿಗೆ ಸೂಕ್ತ ಬೆಲೆ ನಿರ್ಧರಿಸಿದರು. ಸಾಮೂಹಿಕ ಕೃಷಿ ಪದ್ಧತಿ-ಸಾಮೂಹಿಕ ದಾಸೋಹ ಪದ್ಧತಿ ಜಾರಿಗೆ ತಂದರು. ಸಮಭೂಮಿ-ಸಮಪಾಲು-ಸಹಬಾಳ್ವೆ ಜಾರಿಗೆ ತಂದು ಸಹಕಾರ ತತ್ವದ ತಳಹದಿಯ ಮೇಲೆ ಗ್ರಾಮೀಣ ಅಭಿವೃದ್ಧಿ ಯೋಜನೆ ರೂಪಿಸಿದರು. ಇದರಿಂದಾಗಿ ಹಳ್ಳಿಗಳ ಜನ ಆನಂದದಿಂದ ಹಾಡು ಕಟ್ಟಿ-ಹಾಡಿದರು.

ಎಲ್ಲ ಬಲ್ಲಿದನಯ್ಯಾ ಕಲ್ಯಾಣ ಬಸವಣ್ಣ
ಚೆಲ್ಲಿದನು ತಂದು ಶಿವಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥

ಕಾಯಕವ ಕಲಿಸುದಕ ನಾಯಕನು ಬಸವಣ್ಣ
ಜೀಯ ಹೊಸಮತಕೆ ಶಿವಭಕ್ತಿ । ಸಾರುದಕೆ
ರಾಯ ಜೀವನದ ಹೊಸನಡಿಗೆ ॥

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವ ಮಾತು ॥

ಕಲ್ಯಾಣ ರಾಜ್ಯದ ಸರ್ವ ಪ್ರಜೆಗಳಿಗೂ **ಶಿವಪಂಚಾಯತಗಳು** ಅಂದರೆ ಕಾಯಕದ ಪ್ರತಿಫಲದಿಂದ ಅನ್ನ, ಅರಿವೆ, ಆಶ್ರಯ, ಅರಿವು (ಶಿಕ್ಷಣ), ಔಷಧ ದೊರೆಯುವಂತೆ ಮಾಡಿದರು. ಜನರಿಗೆ ಬೇಕಾದುದು, ದುಡಿಯುವ ಕೈಗಳಿಗೆ ಉದ್ಯೋಗ, **'ಕಾಯಕ ಭಾಗ್ಯ'** ನೀಡಿದರು. ಇದರಿಂದ ಪ್ರತಿಯೊಬ್ಬರೂ ಯಾರ ಹಂಗಿಲ್ಲದೇ ಸ್ವಾಭಿಮಾನ-ಸ್ವಾವಲಂಬನೆಯಿಂದ ಜೀವಿಸತೊಡಗಿದರು. ಇದರಿಂದ ಕಲ್ಯಾಣ ರಾಜ್ಯವು ಸುರಾಜ್ಯವಾಯಿತು.

೧೭. ಅನುಭವ ಮಂಟಪ ಸ್ಥಾಪನೆ-ಶರಣರ ಆಗಮನ :

ಬಸವಣ್ಣನವರು ವ್ಯಷ್ಟಿ-ಸಮಷ್ಟಿಯ ಕಲ್ಯಾಣಕ್ಕಾಗಿ, ಸಮಾಜೋ-ಧಾರ್ಮಿಕ-ರಾಜಕೀಯ ಸಮಸ್ಯೆಗಳ ಪರಿಹಾರಕ್ಕಾಗಿ-ಮುಕ್ತವಾಗಿ ಚರ್ಚಿಸಿ,

ನಿಯಮಗಳನ್ನು ರೂಪಿಸಲು, ಜಾರಿಗೊಳಿಸಲು ಪ್ರಜಾಪ್ರಭುತ್ವ ಮಾದರಿಯ ಪ್ರಪಂಚದ ಪ್ರಪ್ರಥಮ ಪಾರ್ಲಿಮೆಂಟ್, ಎಂದೇ ಖ್ಯಾತವಾದ **'ಅನುಭವ ಮಂಟಪ'** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. (ಕ್ರಿ.ಶ.೧೧೪೦) ಈ ಅನುಭವ ಮಂಟಪದ ಸದಸ್ಯರಾಗಲು ವರ್ಣಭೇದ-ವರ್ಗಭೇದ-ಆಶ್ರಮಭೇದ-ಲಿಂಗಭೇದ-ಜಾತಿಭೇದ-ಗಳಿಲ್ಲದೇ, ಸಮಾನತೆ-ಸ್ವಾತಂತ್ರ್ಯ-ಬಂಧುತ್ವ-ಮಾನವೀಯತೆಗಳಲ್ಲಿ ವಿಶ್ವಾಸವಿರುವ, ನಡೆ-ನುಡಿ ಶುದ್ಧವಾಗಿರುವ ಸ್ತ್ರೀ-ಪುರುಷರೆಲ್ಲರಿಗೂ ಮುಕ್ತ ಅವಕಾಶವಿತ್ತು.

ಬಸವಣ್ಣನವರ ವಿನೂತನವಾದ ಲಿಂಗಾಯತ ಧರ್ಮ, ಜಾತಿರಹಿತ ಸಮಾಜ, ಹೃದಯವಂತಿಕೆಯ ಸಂಸ್ಕೃತಿ, ಸರ್ವಸಮಾನತೆ-ಸರ್ವರ ಹಿತ ಬಯಸುವ ವಚನ ಸಾಹಿತ್ಯ, ಕಾಯಕ-ದಾಸೋಹ-ಪ್ರಸಾದ ತತ್ವ ಸಿದ್ಧಾಂತಗಳು, ಇಷ್ಟಲಿಂಗ ಉಪಾಸನೆಯ ಮೂಲಕ ವಿಶ್ವಚೈತನ್ಯದ ಪೂಜೆ ಇತ್ಯಾದಿ ತತ್ವಗಳು ಚರಜಂಗಮರ ಮೂಲಕ ಭಾರತದಾದ್ಯಂತ ಪ್ರಸಾರಗೊಂಡವು. ಇದರ ಪರಿಣಾಮ-ಪ್ರಭಾವದಿಂದ ನೇಪಾಳದಿಂದ-ಲಂಕಾದವರೆಗಿನ, ಗಾಂಧಾರದಿಂದ ಬ್ರಹ್ಮದೇಶದವರೆಗಿನ ತತ್ವ ಜಿಜ್ಞಾಸುಗಳು, ಆಧ್ಯಾತ್ಮಜೀವಿಗಳು, ಯೋಗಸಾಧಕರು, ಸಿದ್ಧರು, ಜ್ಞಾನಿಗಳು, ಅಪಾರ ಸಂಖ್ಯೆಯಲ್ಲಿ ಆಗಮಿಸಿದರು. ತಮ್ಮ ತಮ್ಮ ಅರ್ಹತೆ-ಸಾಮರ್ಥ್ಯಕ್ಕನುಗುಣ-ವಾಗಿ ಕಾಯಕ ಕೈಕೊಂಡರು. ಅನುಭವ ಮಂಟಪದ ಸದಸ್ಯರಾಗಿ ಶರಣ-ಶರಣೆಯರೆಂದೆನಿಸಿಕೊಂಡರು. ೭೭೦ ಜನ ಅನುಭಾವಿಗಳನ್ನು ಅಮರ ಗಣಂಗಳೆಂದು ಬಸವಣ್ಣನವರು ಕರೆದರು.

ಅಲ್ಲಮಪ್ರಭುಗಳು ಅನುಭವ ಮಂಟಪದ ಅಧ್ಯಕ್ಷರಾದರು. ಚೆನ್ನಬಸವಣ್ಣನವರು ಕಪ್ಪಡಿ ಸಂಗಮ ಗುರುಕುಲದ ಶಿಕ್ಷಣ ಪಡೆದು ೨೪ ವರುಷದ ಮಹಾಜ್ಞಾನಿಯಾಗಿ ಬಂದು ಅನುಭವ ಮಂಟಪದ ಸಂಚಾಲಕರಾದರು. ಈ ಅನುಭವ ಮಂಟಪದಲ್ಲಿ ಅನುಭಾವಿ ಶರಣರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹೊಲೆಯರ ಶಿವನಾಗಮಯ್ಯ, ಮೊಚ್ಚೆ ಕಾಯಕದ ಚಿಕ್ಕಯ್ಯ, ಮಾದರ ಧೂಳಯ್ಯ, ಜೇಡರ ದಾಸಿಮಯ್ಯ, ಮಡಿವಾಳ ಮಾಚಯ್ಯ, ಅಂಬಿಗ ಚೌಡಯ್ಯ, ನುಲಿಯ ಚಂದಯ್ಯ, ಕಿನ್ನರಿ ಬೊಮ್ಮಯ್ಯ, ಸೊನ್ನಲಿಗೆಯ ಸಿದ್ಧರಾಮೇಶ್ವರ, ಆಯ್ದಕ್ಕಿ ಮಾರಯ್ಯ, ಅಮುಗಿ ದೇವಯ್ಯ, ಕುರುಬ ಗೊಲ್ಲಾಳೇಶ್ವರ, ತುರುಗಾಹಿ ರಾಮಣ್ಣ, ಶಂಕರದಾಸಿಮಯ್ಯ, ಹಡಪದ ಅಪ್ಪಣ್ಣ, ಬಾಚಿಕಾಯಕದ ಬಸವಪ್ಪ, ಕಮ್ಮಾರ ಕಲ್ಲಯ್ಯ, ತಳವಾರ ಕಾಮಿದೇವಯ್ಯ, ಹೆಂಡದ ಮಾರಯ್ಯ, ವಚನ ಭಂಡಾರಿ ಶಾಂತರಸ, ಘಟ್ಟಿವಾಳಯ್ಯ, ಹಾವಿನಾಳ ಕಲ್ಲಯ್ಯ, ಕೊಲಶಾಂತಯ್ಯ, ಬಾಹೂರ ಬ್ರಹ್ಮಯ್ಯ, ಎಚ್ಚರಿಕೆ ಕಾಯಕದ ಮುತ್ತಣ್ಣ, ಸಕಲೇಶ ಮಾದರಸ, ಚಂದಿಮರಸ, ತೆಲಗು ಜೊಮ್ಮಯ್ಯ, ಮೋಳಿಗೆ ಮಾರಯ್ಯ, ಅಜಗಣ್ಣ, ಮೇದಾರ ಕೇತಯ್ಯಾ, ಅಲ್ಲಮಪ್ರಭು, ಚೆನ್ನಬಸವಣ್ಣ, ಬಾಲಸಂಗಯ್ಯ, ಆದಯ್ಯ, ಉರಿಲಿಂಗದೇವ, ಉರಿಲಿಂಗ ಪೆದ್ದಿ, ಒಕ್ಕಲಿಗ ಮುದ್ದಣ್ಣ, ಹೂಗಾರ ಮಾದಣ್ಣ, ಕುಂಬಾರ ಗುಂಡಯ್ಯ, ಶೀಲವಂತಯ್ಯ, ಗಜೇಶ ಮಸಣಯ್ಯ, ಢಕ್ಕೆಯ ಬೊಮ್ಮಣ್ಣ,

ದಸರಯ್ಯ, ನಗೆಮಾರಿತಂದೆ, ಬಿಬ್ಬಿ ಬಾಚಯ್ಯ, ಮಧುಮಯ್ಯ, ಮರುಳಶಂಕರದೇವ, ಲದ್ದೆಯ ಸೋಮಣ್ಣ, ವೈದ್ಯ ಸಂಗಣ್ಣ, ಸುಂಕದ ಬಂಕಣ್ಣ, ಸೊಡ್ಡಳ ಬಾಚಾರಸ, ಹೊಡೆಹುಲ್ಲ ಬಂಕಣ್ಣ ಮುಂತಾದ ಶರಣರು;

ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಲಿಂಗಮ್ಮ, ದುಗ್ಗಳೆ, ರಾಯಮ್ಮ, ಲಕ್ಕಮ್ಮ, ಕಾಳವ್ವೆ, ಮಸಣಮ್ಮ, ರೇವಮ್ಮ, ರೇಚವ್ವೆ, ರೆಮ್ಮವ್ವೆ, ಕಲ್ಯಾಣಮ್ಮ, ದಾನಮ್ಮ, ಸೋಮವ್ವೆ, ಪಿಟ್ಟವ್ವೆ, ಕೇತಲದೇವಿ, ಗೊಗ್ಗವ್ವೆ, ಮುಕ್ತಾಯಕ್ಕ, ಸತ್ಯಕ್ಕ, ಬೊಂತಾದೇವಿ, ಸಂಕವ್ವೆ, ಸಾತವ್ವೆ, ಗುಡ್ಡವ್ವೆ ಮೊಳಿಗೆ ಮಹಾದೇವಮ್ಮ, ಮಸಣಮ್ಮ, ಅಕ್ಕಮ್ಮ, ಕಾಮಮ್ಮ, ವೀರಮ್ಮ, ಮಹಾದೇವಿಯಕ್ಕ ಮುಂತಾದ ಶರಣೆಯರು ಅನುಭವ ಮಂಟಪದ ಅನುಭವ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು.

ಈ ೭೭೦ ಅನುಭಾವಿಗಳು ರಚಿಸಿ-ನಿರ್ಣಯಿಸಿದ ವಚನಗಳೇ ಇಂದು ಮಾನವಕುಲದ ವಿಶ್ವಸಂವಿಧಾನದ ತತ್ವ-ಸಿದ್ಧಾಂತ ಸೂತ್ರಗಳಾಗಿವೆ.

ಬಸವಣ್ಣನವರ ಈ ಅದ್ಭುತ, ಅಪ್ರತಿಮ ಸಾಧನೆಯನ್ನು ಕಣ್ಣಾರೆ ಕಂಡು, ಆನಂದದಿಂದ ಅಕ್ಕನಾಗಮ್ಮ ತಾಯಿಯು ತಮ್ಮ ದೊಂದು ವಚನದಲ್ಲಿ ಹೃದಯ ತುಂಬಿ ಬಣ್ಣಿಸಿದ್ದಾರೆ-

ಬಸವ ಮಾಡಿದಡಾಯ್ತು ಭುವಿಗೆ ಭಕ್ತಿಯ ಬೆಳಕು
ಬಸವ ಮಾಡಿದಡಾಯ್ತು ಗುರು ಲಿಂಗ ಜಂಗಮ
ಬಸವ ಮಾಡಿದಡಾಯ್ತು ಲಿಂಗಾಂಗ ಸಾಮರಸ್ಯ ಸುಧೆಯು
ಬಸವ ಮಾಡಿದಡಾಯ್ತು ಭಕ್ತ ಭಕ್ತರಲಿ ಸಮಭಾವ
ಎನ್ನ ಕಂಗಳೊಳಗಿಂಬಾದ ಬಸವ
ಎನ್ನ ಮನ ಭಾವಂಗಳೊಳಗಾದ ಬಸವ
ಎನ್ನಂತರಂಗ ತುಂಬಿ ನಿಂದಾತ ಬಸವ
ಹೊರಗೆ ಗುರುಬಸವನ ಕೀರುತಿ
ಬಸವ ಮಣಿಹವೆ ಎನ್ನ ಪ್ರಾಣವಿಂದಿಗೆ
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಸಾಕ್ಷಿಯಾಗಿ
ಬಸವಾ ಬಸವಾ ಬಸವಾ ಜಯತು
ಗುರು ಸಂಗನಬಸವಾ ಜಯತು

ಅನುಭವ ಮಂಟಪದ ಶರಣ-ಶರಣೆಯರ ಸಂಕುಳದಲ್ಲಿ ಅಕ್ಕನಾಗಮ್ಮ ತಾಯಿಯು ಪರಮಾನಂದದಲ್ಲಿ-ನಿಜನಿವಾಸದಲ್ಲಿರುವುದನ್ನು ಹೇಳಿಕೊಂಡಿದ್ದಾಳೆ-

-೧-

ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ
ಸಂಗನಬಸವಣ್ಣನ ಒಕ್ಕುದ ಕೊಂಡೆನಾಗಿ

ಎನ್ನ ಮನದ ಕಪಟ ಹಿಂಗಿತ್ತಯ್ಯಾ
ಚೆನ್ನಬಸವಣ್ಣನ ಕರುಣವ ಪಡೆದೆನಾಗಿ
ಎನ್ನಂತರಂಗದ ಸಂದು ಸಂಶಯ ತೊಲಗಿತ್ತಿಂದು
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ಎನ್ನ ಪರಮಗುರು ಅಲ್ಲಮಪ್ರಭುದೇವರ
ಶ್ರೀ ಚರಣವ ಕಂಡೆನಾಗಿ

-೨-

ಗುರು ಸಂಬಂಧಿ ಗುರುಭಕ್ತಯ್ಯನು
ಲಿಂಗಸಂಬಂಧಿ ಪ್ರಭುದೇವರು
ಜಂಗಮ ಸಂಬಂಧಿ ಸಿದ್ಧರಾಮಯ್ಯನು
ಪ್ರಸಾದ ಸಂಬಂಧಿ ಮರುಳಶಂಕರದೇವರು
ಪ್ರಾಣಲಿಂಗ ಸಂಬಂಧಿ ಅನಿಮಿಷದೇವರು
ಶರಣ ಸಂಬಂಧಿ ಘಟ್ಟಿವಾಳಯ್ಯನು
ಐಕ್ಯ ಸಂಬಂಧಿ ಅಜಗಣ್ಣಯ್ಯನು
ಸರ್ವಾಚಾರಿ ಸಂಬಂಧಿ ಚೆನ್ನಬಸವಣ್ಣನು
ಇಂತಿವರ ಸಂಬಂಧ ಎನ್ನ ಸರ್ವಾಂಗದಲ್ಲಿ ನಿಂದು
ಬಸವಣ್ಣಪ್ರಿಯ ಚೆನ್ನಸಂಗಯ್ಯನ
ಹೃದಯ ಕಮಲದಲ್ಲಿ ನಿಜನಿವಾಸಿಯಾಗಿದ್ದೆನು.

೧೮. ಬಸವ ಮಹಾಮನೆಯ ಮಹಾತಾಯಿ :

ಕಲ್ಯಾಣದ ಪ್ರಧಾನಮಂತ್ರಿ-ಹಿರಿಯ ದಣ್ಣಾಯಕ, ಅನುಭವ ಮಂಟಪದ ರೂವಾರಿ, ಸ್ವತಂತ್ರ ಲಿಂಗಾಯತಧರ್ಮಸ್ಥಾಪಕ, ವಿಶ್ವಗುರು ಬಸವಣ್ಣನವರ ಮಹಾಮನೆ ಎಂದರೆ ಅದು ತತ್ವತಃ ಮಹಾಮನೆಯೇ ಆಗಿತ್ತು. ಕಲ್ಯಾಣಕ್ಕೆ ಆಗಮಿಸುವ ಶರಣ-ಶರಣೆಯರು, ಭಕ್ತರು, ಪ್ರಜೆಗಳಿಗೆ ಅದು ಮುಕ್ತದ್ವಾರವಾಗಿತ್ತು. ಬಸವ ಮಹಾಮನೆಯ ಹೆಬ್ಬಾಗಿಲು (ಮಹಾದ್ವಾರವು) ಹಗಲಿರುಳು ತೆರೆದೇ ಇರುತ್ತಿತ್ತು.

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು
ಬತ್ತಿಯನಿಕ್ಕಿ ಬರವ ಹಾರುತಿದ್ದೆನೆಲೆಗವ್ವಾ
ತರಗೆಲೆ ಗಿರುಕೆಂದಡೆ ಹೊರಗಸಾಲಿಸುವೆ
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ
ಕೂಡಲಸಂಗಮದೇವನ ಶರಣರು ಬಂದು
ಬಾಗಿಲ ಮುಂದೆ ನಿಂದು 'ಶಿವಾ' ಎಂದಡೆ
ಸಂತೋಷಪಟ್ಟೆನೆಲೆಗವ್ವಾ

ಎಂದು ಬಸವಣ್ಣನವರು ಸದಾಕಾಲ ಪ್ರಜೆಗಳ, ಭಕ್ತರ, ಶರಣರ ಬರವಿಗಾಗಿ ಹಂಬಲಿಸುತ್ತಿದ್ದರು. ಅವರು ಪ್ರತಿದಿನ ಪರುಷಕಟ್ಟೆಯ ಮೇಲೆ ಕುಳಿತು ಪ್ರಜೆಗಳ ಅಹವಾಲು ಅಂದರೆ ಮನವಿ ಸ್ವೀಕರಿಸುತ್ತಿದ್ದರು. ಪರಿಹಾರ ಒದಗಿಸುತ್ತಿದ್ದರು. ಮನೆಗೆ ಬಂದವರಿಗೆ ಆದರೋಪಚಾರ ಮಾಡುತ್ತಿದ್ದರು.

ಅಕ್ಕನಾಗಮ್ಮ ತಾಯಿಯವರು ಬಸವಮಹಾಮನೆಯ ಮಹಾತಾಯಿಯಾಗಿ ಎಲ್ಲ ಜವಾಬ್ದಾರಿ ನೋಡಿಕೊಳ್ಳುತ್ತಿದ್ದರು. ಗಂಗಾಂಬಿಕೆ-ನೀಲಾಂಬಿಕೆಯರು ಪ್ರಸಾದ ದಾಸೋಹ, ಜ್ಞಾನದಾಸೋಹಗಳ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಅಕ್ಕನಾಗಮ್ಮ ತಾಯಿಯ ವಾತ್ಸಲ್ಯವನ್ನು ಹೃದಯಂಗಮವಾಗಿ ವಚನವೊಂದರಲ್ಲಿ ಚಿತ್ರಿಸಿದ್ದಾರೆ.

ಎನಗೆ ಹಾಲೂಟವನಿಕ್ಕುವ ತಾಯೆ
ಎನಗೆ ಪರಿಣಾಮವ ತೋರುವ ತಾಯೆ
ಪರಮ ಸುಖದೊಳಗಿಪ್ಪ ತಾಯೆ
ಪರವಸ್ತುವ ನಂಬಿದ ತಾಯೆ
ಬಸವನ ಗುರು ತಾಯೆ
ಸಂಗಯ್ಯನಲ್ಲಿ ಸ್ವಯಲಿಂಗಿಯಾದ
ಅಕ್ಕನಾಗಮ್ಮ ತಾಯೆ

ಕಾಶ್ಮೀರದ ರಾಜಕುವರಿ ಬೊಂತಾದೇವಿ, ಉಡುತಡಿಯ ಮಹಾದೇವಿಯಕ್ಕ ಮುಂತಾದ ವೀರ ವಿರಾಗಿಣಿಯರು ಕಲ್ಯಾಣಕ್ಕೆ ಆಗಮಿಸಿದಾಗ, ಅವರನ್ನು ಬಸವ ಮಹಾಮನೆಯಲ್ಲಿ ತಾಯಿಯಾಗಿ ಮಾತೃವಾತ್ಸಲ್ಯದಿಂದ ನೋಡಿಕೊಂಡ ಮಹಾತಾಯಿ ಅಕ್ಕನಾಗಮ್ಮನವರು.

ಗಂಗಾಂಬಿಕೆಯ ಮಗು 'ಸಿದ್ಧರಸ' ಜನಿಸಿದ ಒಂದೆರಡು ವರುಷದಲ್ಲಿ ತೀರಿಕೊಂಡಾಗ ಸಾಂತ್ವನ ಹೇಳಿ, ತನ್ನ ಬಾಲಕ ಚೆನ್ನಬಸವಣ್ಣನನ್ನೇ ಅವಳ ಉಡಿಯಲ್ಲಿ ಹಾಕಿ ಈ ಬಾಲಕನನ್ನೇ ಮಗನಂತೆ ಬೆಳೆಸು ಎಂದು ಸಂತೈಸಿದ ಹಿರಿಯ ತಾಯಿ ಅಕ್ಕನಾಗಮ್ಮ. ನೀಲಾಂಬಿಕೆಯ ಮಗ ಬಾಲಸಂಗಯ್ಯ ಬೆಳೆದು ದೊಡ್ಡವನಾಗಿ, ವಚನ ರಚನೆ ಮಾಡಿ ಎಲ್ಲರ ಪ್ರೇಮಾದರಗಳಿಗೆ ಪಾತ್ರನಾದವನು ಅಕಾಲಿಕವಾಗಿ ಲಿಂಗದೊಳಗಾದಾಗ ನೀಲಾಳ ದುಃಖವನ್ನು ಶಮನ ಮಾಡಿ, ವಾತ್ಸಲ್ಯದಿಂದ ಸಂತೈಸಿದ ಬಸವಮಹಾಮನೆಯ ಮಹಾತಾಯಿ ಅಕ್ಕನಾಗಮ್ಮನವರು.

ಇಂತಹ ಮಹಾತಾಯಿಗೂ ಕೂಡ ಕೊಂಡೆಯರು ನಿಂದನೆಯ ನುಡಿಗಳನ್ನಾಡಿರಬಹುದೆಂದು ಕಾಣುತ್ತದೆ. ಅಂತಹ ಸಂದರ್ಭದಲ್ಲಿ ತಾಯಿಯವರು ತಮ್ಮ ಮನಕ್ಕೆ ತಾವೇ ಸಮಾಧಾನ ಹೇಳಿಕೊಳ್ಳುವ ರೀತಿಯು ಪ್ರಪಂಚದ ಸ್ತ್ರೀಯರಿಗೆ ಮಾರ್ಗದರ್ಶನವಾಗಿದೆ-

ಮನದೊಡೆಯ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ
ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ
ಬಸವಣ್ಣ ಪ್ರಿಯ ಚೆನ್ನಸಂಗಯ್ಯನು
ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು.

ಈ ರೀತಿಯಾಗಿ ಬಾಳಿನಲ್ಲಿ ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತಾ, ಬಸವಣ್ಣನನ್ನು ಹೊತ್ತ ತಾಯಿಯಾಗಿ, ಚೆನ್ನಬಸವಣ್ಣನ್ನು ಹೆತ್ತ ತಾಯಿಯಾಗಿ, ಗಂಗಾಂಬಿಕೆ-ನೀಲಾಂಬಿಕೆಯರನ್ನು ಪಡೆದ ತಾಯಿಯಾಗಿ, ಕಲ್ಯಾಣಕ್ಕೆ ಆಗಮಿಸಿದ ಶರಣ-ಶರಣೆಯರಿಗೆಲ್ಲಾ ಮಹಾತಾಯಿಯಾಗಿ ಮಾತೃತ್ವವನ್ನು ಧಾರೆಯೆರೆದವಳು ಅಕ್ಕನಾಗಮ್ಮತಾಯಿಯು.

೧೯. ಕಲ್ಯಾಣ ಕ್ರಾಂತಿ-ಮರಣವೇ ಮಹಾನವಮಿ :

ಬಸವಣ್ಣನವರ ಜಾತಿ ರಹಿತ ಧರ್ಮ-ಸಮಾಜ-ಸಾಹಿತ್ಯ-ಸಂಸ್ಕೃತಿಯ ಪ್ರಭಾವಕ್ಕೊಳಗಾಗಿ ಕಲ್ಯಾಣಕ್ಕೆ ಬಂದ ಶರಣ-ಸಂಕುಳದಲ್ಲಿ ಸಮಗಾರ ಹರಳಯ್ಯ-ಕಲ್ಯಾಣಮ್ಮ ದಂಪತಿಗಳು ಚಾರಿತ್ರಿಕವಾಗಿ ಚಿರಸ್ಮರಣೀಯರಾಗಿ ಉಳಿದಿದ್ದಾರೆ. ಈ ದಂಪತಿಗಳು ತಮ್ಮ ಮಗ ಶೀಲವಂತನನ್ನು ಕರೆದುಕೊಂಡು ಕಲ್ಯಾಣಕ್ಕೆ ಬಂದು ಬಸವಗುರುವಿನಿಂದ ಇಷ್ಟಲಿಂಗ ಸಂಸ್ಕಾರ ಹೊಂದಿ ಅಸ್ಪೃಶ್ಯತೆಯ ಕಲಂಕ ಕಳೆದುಕೊಂಡು, ಜಾತಿಯನಳಿದು ಜ್ಯೋತಿಸ್ವರೂಪ ಶರಣರಾದವರು.

ತಮ್ಮ ಮನೆತನದ ಚಮ್ಮಾವುಗೆ ಉದ್ಯೋಗವನ್ನೇ 'ಕಾಯಕ' ಮಾಡಿಕೊಂಡು ಕಲ್ಯಾಣದ ಕಾಯಕ ಜೀವಿ ಶರಣರ ಓಣಿಯಲ್ಲಿ ಮನೆ ನಿರ್ಮಿಸಿಕೊಂಡು ಪ್ರತಿದಿನ ಚಮ್ಮಾವುಗೆ ತಯಾರಿಸಿ, ಅವನ್ನು ಕಲ್ಯಾಣದ ರಾಜಬೀದಿಯ ಮಾರಾಟ ಮಳಿಗೆಯಲ್ಲಿ ಮಾರಾಟ ಮಾಡಿ, ಬಂದ ಪ್ರತಿಫಲ ಹಣದಲ್ಲಿ ಮನೆಗೆ ಬೇಕಾಗುವ ದವಸ-ಧಾನ್ಯ, ತರಕಾರಿಗಳನ್ನು ತಂದುಕೊಂಡು ದಾಸೋಹಂಭಾವದಿಂದ ಪ್ರಸಾದ ಸಿದ್ಧಪಡಿಸಿ ಕಲ್ಯಾಣಕ್ಕೆ ಆಗಮಿಸುವ ಶರಣ-ಜಂಗಮರಿಗೆ ಆರೋಗಣೆ ಮಾಡಿ, ಒಕ್ಕುಮಿಕ್ಕ ಪ್ರಸಾದ ಸ್ವೀಕರಿಸಿ ಸಂತೃಪ್ತಿಯ ಶರಣಜೀವನ ನಡೆಸುತ್ತಿದ್ದರು.

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಶರಣರಾಗಿ ಪ್ರತಿದಿನ ಸಂಜೆ ಶರಣರ-ಸಂಗದಲ್ಲಿ ಅನುಭಾವಗೋಷ್ಠಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗೆಯೇ ಆನಂದದಿಂದ ಶರಣಜೀವನ ನಡೆದಿರುವಾಗ ಒಂದು ದಿನ ಅವರ ಬಾಳಿನಲ್ಲಿ ಒಂದು ಘಟನೆ ಘಟಿಸಿತು. ದಿನ ನಿತ್ಯದಂತೆ ರಾಜಬೀದಿಯ ಮಾರಾಟ ಮಳಿಗೆಗೆ ಹೋಗಿ ಚಮ್ಮಾವುಗೆ ಮಾರಾಟ ಮಾಡಿ ಮಧ್ಯಾಹ್ನ ೨ ಗಂಟೆಯ ಸುಮಾರಿಗೆ ರಾಜಬೀದಿಯಲ್ಲಿ ನಡೆಯುತ್ತಾ ಮನೆಯ ಕಡೆಗೆ ಸಾಗಿರುವಾಗ, ಪ್ರಧಾನಮಂತ್ರಿ

ಬಸವಣ್ಣನವರು ತಮ್ಮ ಕಾಯಕ ಪೂರೈಸಿಕೊಂಡು ಮಧ್ಯಾಹ್ನದ ಪ್ರಸಾದಕ್ಕಾಗಿ ತಮ್ಮ ಮಹಾಮನೆಯತ್ತ ಅಶ್ವಾರೂಢರಾಗಿ ಸಾಗಿದ್ದರು. ಬಸವಣ್ಣನವರನ್ನು ಕಂಡಂತಹ ರಾಜಬೀದಿಯ ಇಕ್ಕೆಲಗಳಲ್ಲಿ ಅಂಗಡಿಕಾರರು, ವ್ಯಾಪಾರಸ್ಥರು, ಗ್ರಾಹಕರು, ಪ್ರಜೆಗಳು ಎದ್ದು ನಿಂತು ಕೈಮುಗಿದು ಶರಣು (ವಂದನೆ) ಸಲ್ಲಿಸುತ್ತಿದ್ದರು. ಬಸವಣ್ಣನವರು ಹತ್ತಿರ ಬರುತ್ತಲೇ ಹರಳಯ್ಯ ಶರಣರು ತಮ್ಮ ಬಾಳು ಬೆಳಗಿದ ಮಹಾಗುರುವನ್ನು ಕಂಡು ಭಕ್ತಿಭಾವದಿಂದ ಕೈಜೋಡಿಸಿ **'ಶರಣು ಬಸವ ತಂದೆ'** ಎಂದರು.

ಹರಳಯ್ಯ ಶರಣರನ್ನು ಕಂಡ ಬಸವಣ್ಣನವರು ಭಕ್ತಿ ಗೌರವದಿಂದ ಬಾಗಿದ ತಲೆ ಮುಗಿದ ಕೈಯಾಗಿ ಅಂದರೆ ತಲೆಬಾಗಿ ಕೈಜೋಡಿಸಿ– **'ಶರಣು ಶರಣಾರ್ಥಿ ಹರಳಯ್ಯ ಶರಣರೆ'** ಎಂದು ನುಡಿದರು. ಅವರ ಕುದುರೆಯು ಮುಂದೆ ಸಾಗಿತು. ಶರಣು ಶರಣಾರ್ಥಿ ಎಂಬ ಎರಡು ಶರಣುಗಳನ್ನು ಆಲಿಸಿದ ಶರಣ ಹರಳಯ್ಯ ದಿಕ್ಕು ತೋಚದಂತಾಗಿ ನಿಂತು ಬಿಟ್ಟರು. ತಮ್ಮಂತಹ ದಲಿತ–ಪಂಚಮವರ್ಣಿಯರನ್ನು ಉದ್ಧಾರ ಮಾಡಿದ, ಅಪ್ಪಾ–ಬೊಪ್ಪಾ, ಅಯ್ಯಾ ಎಂದು ಅಪ್ಪಿಕೊಂಡು ಉದ್ಧಾರ ಮಾಡಿದ ಗುರುವು–ಒಂದು 'ಶರಣು' ಎಂಬ ಹೆಚ್ಚಿನ ಭಾರ ಹೊರಿಸಿದರಲ್ಲಾ ! ಎಂದು ಮುಗ್ಧ ಶರಣ ಹರಳಯ್ಯ ಚಿಂತಾಕ್ರಾಂತನಾಗಿ ಮನೆಗೆ ಬಂದರು. ಹರಳಯ್ಯನವರ ಚಿಂತೆಯ ಕಾರಣ ಕೇಳಿ ತಿಳಿದ ಮಡದಿ ಕಲ್ಯಾಣಮ್ಮಳು ಈ ಚಿಂತೆಗೆ ಪರಿಹಾರ ಹೇಳಿದಳು–

ಮಡದಿ ಕಲ್ಯಾಣಮ್ಮ ತೊಡಕು ಬಿಡಿಸಿದಳಾಕೆ
ಗಡನೊಂದು ಜೋಡು ಕೆರ ಮಾಡಿ । ಬಸವರಿಗೆ
ಒಡೆಯಾ ಮೆಚ್ಚೆಂದು ಅರ್ಪಿಸಿರಿ ॥

ಮಡದಿಯ ನುಡಿಕೇಳಿ, ಆನಂದಿತರಾದರು ಹರಳಯ್ಯ ಶರಣರು. ಕೂಡಲೇ ಶರಣದಂಪತಿಗಳು ಸ್ನಾನ ಮಾಡಿ, ಇಷ್ಟಲಿಂಗಪೂಜೆ ಮಾಡಿಕೊಂಡು, ಪಾದೋದಕ–ಪ್ರಸಾದ ಸ್ವೀಕರಿಸಿ, ಚಮ್ಮಾವುಗೆ ನಿರ್ಮಾಣ ಕಾಯಕಕ್ಕೆ ಕುಳಿತರು. ಇಬ್ಬರೂ ತಮ್ಮ ಒಂದೊಂದು ತೊಡೆಗಳಿಗೆ ಪಾದೋದಕ ಸವರಿ, ರೆಂಪಿಗೆಯಿಂದ ಚಮ್ಮಾವುಗೆ ಆಕಾರದಲ್ಲಿ ಚರ್ಮ ಸೀಳಿ ತೆಗೆದರು. ಆ ಗಾಯಗಳಿಗೆ ಕ್ರಿಯಾಭಸ್ಮ (ವಿಭೂತಿ) ಲೇಪಿಸಿದರು. ಬಸವಾ ಬಸವಾ ಎಂದು ಮಂತ್ರ ಜಪಿಸುತ್ತಾ ಎರಡು ಚಮ್ಮಾವುಗೆಗಳಿಗೆ ಮಧ್ಯದಲಿ ತಮ್ಮ ಚರ್ಮ ಅಂಟಿಸಿ ಹೊಲಿದು. ಸುಂದರವಾದ ರಾಜರು ಹಾಕಿಕೊಳ್ಳುವ ಆಕಾರದ ಚಮ್ಮಾವುಗೆಗಳನ್ನು ತಯಾರಿಸಿ, ಶುಭ್ರವಾದ ನೂಲಿನ ಬಟ್ಟೆಯಲ್ಲಿಟ್ಟು ಗುರುಬಸವಧ್ಯಾನಗೈಯುತ್ತಾ ಶಾಂತವಾಗಿ ನಿದ್ರೆ ಮಾಡಿದರು.

ಮರುದಿನ ಬೆಳಿಗ್ಗೆ ಬೇಗನೆ ಎದ್ದು ಸ್ನಾನ–ಪೂಜೆ ಪೂರೈಸಿಕೊಂಡು ದಂಪತಿಗಳು ಚಮ್ಮಾವುಗೆಗಳನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಬಸವಣ್ಣನವರ ಮಹಾಮನೆಗೆ ಬಂದರು. ಶರಣ ಅಪ್ಪಣ್ಣನವರಿಂದ ಹರಳಯ್ಯ–ಕಲ್ಯಾಣಮ್ಮ ದಂಪತಿಗಳ ಆಗಮನ ಅರಿತ ಬಸವಣ್ಣನವರು ಗಂಗಾಂಬಿಕೆ–ನೀಲಾಂಬಿಕೆಯ–

ರೊಂದಿಗೆ ಹೊರಬಂದು, ಶರಣದಂಪತಿಗಳ ಪಾದಕ್ಕೆ ನೀರು ಎರೆದು, ಕೈಹಿಡಿದು ಮಹಾಮನೆಯೊಳಗೆ ಕರೆತಂದು ಉಚಿತವಾದ ಆಸನದಲ್ಲಿ ಕೂಡಿಸಿ, ಬಂದ ಸಮಾಚಾರವನ್ನು ಕೇಳಿದರು. ಆಗ ಹರಳಯ್ಯ ಶರಣರು ಭಾವುಕರಾಗಿ ನಿನ್ನೆ ನಡೆದ 'ಶರಣು-ಶರಣಾರ್ಥಿ' ಪ್ರಸಂಗ ತಿಳಿಸಿ, ತಾವು ತಯಾರಿಸಿ ತಂದ ಚಮ್ಮಾವುಗೆ ಕಾಲಲ್ಲಿ ಧರಿಸಿ ತಮ್ಮ ಭಾರ ಇಳಿಸಬೇಕೆಂದು ಬೇಡಿಕೊಂಡು ಚಮ್ಮಾವುಗೆಗಳನ್ನು ಬಟ್ಟೆ ಬಿಚ್ಚಿ-ಬಸವಣ್ಣನವರ ಪಾದಗಳ ಮುಂದೆ ಇಡಲು-ಹೋದರು. ಕೂಡಲೇ ಬಸವಣ್ಣನವರು ಆ ಪಾದುಕೆಗಳನ್ನು ಕೈಯಲ್ಲಿ ತೆಗೆದುಕೊಂಡು ಹಣೆಗೆ ಮುಟ್ಟಿಸಿಕೊಂಡು ತಮ್ಮ ತಲೆಯ ಮೇಲೆ ಇಟ್ಟುಕೊಂಡು ನುಡಿದರು-

ನಿಮ್ಮ ಶರಣರ ಚಮ್ಮಾವುಗೆಗೆ
ಪೃಥ್ವಿ ಸಮಬಾರದು, ಸರಿಯಲ್ಲ ನೋಡಾ
ಕೂಡಲಸಂಗಮದೇವಾ
ನಿಮ್ಮ ಶರಣರ ಚಮ್ಮಾವುಗೆಗೆ.

ಹೀಗೆ ಭಾವುಕರಾಗಿ ಆನಂದಾಶ್ರು ಸುರಿಸುತ್ತಾ, ಭಕ್ತಿಯಿಂದ ಕುಣಿದಾಡಿದರು. ಆ ಚಮ್ಮಾವುಗೆಗಳು ಕೂಡಲಸಂಗಮದೇವಂಗೆ ಅರ್ಪಿತವಾಗಿದೆ. ನಾನು ಶರಣರ ಕಿಂಕರ, ತೊತ್ತಿನ ತೊತ್ತು ಎಂದು ವಿನಮ್ರವಾಗಿ ನುಡಿದು, ಶರಣದಂಪತಿಗಳಿಗೆ ಪ್ರಸಾದ ಮಾಡಿಸಿ, ಕಳುಹಿಸಿಕೊಟ್ಟರು.

ಹರಳಯ್ಯ ಶರಣರು ಚಮ್ಮಾವುಗೆಗಳನ್ನು ಬಟ್ಟೆಯಲ್ಲಿ ಗಂಟುಕಟ್ಟಿ ತಲೆಯ ಮೇಲಿರಿಸಿಕೊಂಡು ಮನೆಯತ್ತ ಹೋಗುವ ರಾಜಬೀದಿಯಲ್ಲಿ ಎದುರಿಗೆ ಬಂದ ಉಚ್ಚಕುಲದ ಮಧುವರಸ ಮಂತ್ರಿಯು ಅಹಂಕಾರದಿಂದ ಆ ಚಮ್ಮಾವುಗೆಗಳನ್ನು ಎಳೆದು ನೆಲದ ಮೇಲೆ ಹಾಕಿ ಕಾಲಲ್ಲಿ ಧರಿಸಲು ಹೋದಾಗ, ಒಮ್ಮೆಲೆ ಅಗ್ನಿಜ್ವಾಲೆಗಳು ಪಸರಿಸಿದಂತೆ ಮೈಯೆಲ್ಲಾ ಉರಿ ಉರಿ ಎಂದು ಸಂಕಟಪಡುತ್ತಾ ತನ್ನ ಮನೆಗೆ ಹೊರಟುಹೋದನು.

'ಶರಣರೊಡನೆ ಮರೆತು ಸರಸವಾಡಿದರೆ ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ' ಎಂಬ ಗುರುಬಸವರ ವಚನವಾಣಿಯಂತೆ ಮಧುವರಸ ವಿಲವಿಲನೆ ಒದ್ದಾಡಿದ, ಎಲ್ಲಾ ನದಿಗಳ ಪವಿತ್ರ ಜಲವನ್ನು ತಂದು ಸ್ನಾನ ಮಾಡಿಸಿದರೂ ತಾಪ ಆರಲಿಲ್ಲ. ಕೊನೆಗೆ ತಂದೆಯ ಸಂಕಟ ನೋಡಲಾಗದೇ ಅವರ ಮಗಳು ಲಾವಣ್ಯವತಿಯು ಸಮಸ್ಯೆಯ ಮೂಲವನ್ನು ಭಟರಿಂದ ಅರಿತು, ಪ್ರಧಾನಮಂತ್ರಿ ಬಸವಣ್ಣನವರ ಮಹಾಮನೆಗೆ ಹೋಗಿ ಪರಿಹಾರ ಸೂಚಿಸಲು ಬೇಡಿಕೊಂಡಳು. ಆಗ ಬಸವಣ್ಣನವರು-"ಯಾವ ಶರಣರ ಕಾಯಕವನ್ನು ಕೀಳೆಂದು ಜರೆದು, ಅಹಂಕಾರದಿಂದ ವರ್ತಿಸಿರುವರೋ, ಅವರ ತಾಪ ಪರಿಹಾರವಾಗ ಬೇಕಾದರೆ ಹರಳಯ್ಯ ಶರಣರ ಮನೆಯ ಕಾಯಕದ ಕರಿಬಾನೆಯ ನೀರು ತಂದು ಸ್ನಾನ ಮಾಡಿಸು' ಎಂದು ಪರಿಹಾರ ಸೂಚಿಸಿದರು.

ಬಸವಣ್ಣನವರ ಸಲಹೆಯಂತೆ ಲಾವಣ್ಯಳು ಹರಳಯ್ಯ ಶರಣರ ಮನೆಗೆ ಹೋಗಿ ವಿನಮ್ರಳಾಗಿ ಬೇಡಿಕೊಂಡಾಗ, ಅವರು ಕರಿಬಾನೆಯ ನೀರನ್ನು ಒಂದು ಪಾತ್ರೆಯಲ್ಲಿ ಸುರವಿ ಬಸವಮಂತ್ರದೊಂದಿಗೆ ಭಸ್ಮ ಸ್ಪರ್ಶಿಸಿ–ಪಾದೋದಕ ಮಾಡಿ ಕೊಟ್ಟರು. ಆ ನೀರನ್ನು ತಂದು ಲಾವಣ್ಯಳು ತಂದೆಗೆ ಸ್ನಾನಮಾಡಿಸಿದಾಗ 'ತಾಪ' ಆರಿತು. ವಿಷಯ ಅರಿತ ಮಧುವರಸ ಮಂತ್ರಿಯ ಒಳಗಣ್ಣು ತೆರೆಯಿತು, ಪಶ್ಚಾತ್ತಾಪ ಪಟ್ಟನು.

ಅದೇ ದಿನ ಹರಳಯ್ಯ ಶರಣರ ಮನೆಗೆ ತನ್ನ ಪರಿವಾರದೊಂದಿಗೆ ಆಗಮಿಸಿ ಕ್ಷಮೆಕೋರಿದನು. ಅಂದಿನ ದಿನವೇ ಸಂಜೆಯ ಹೊತ್ತು ಅನುಭವ ಮಂಟಪಕ್ಕೆ ಬಂದು ಬಸವಣ್ಣನವರ ಮಾರ್ಗದರ್ಶನದಲ್ಲಿ ಹರಳಯ್ಯ ಶರಣರಿಂದಲೇ ಇಷ್ಟಲಿಂಗ ಸಂಸ್ಕಾರ ಹೊಂದಿ ಶರಣನಾಗಿ ಪರಿವರ್ತನೆಗೊಂಡನು. ಮುಂದೆ ವಚನಕಾರನೂ ಆದನು.

ಕೆಲ ದಿನಗಳ ನಂತರ, ಮಧುವರಸನು ಬಸವಣ್ಣನವರ ಸಮಾನತೆಯ ತತ್ವ ಅರಿತು ತನ್ನ ಮಗಳು ಲಾವಣ್ಯಳನ್ನು ಹರಳಯ್ಯ ಶರಣರ ಮಗ ಶೀಲವಂತನಿಗೆ ಕೊಟ್ಟು ಕಲ್ಯಾಣ–ವಿವಾಹ ಮಾಡಿದನು. ಇದು ಮೂಲಭೂತವಾದಿ ವರ್ಣವಾದಿಗಳು ವರ್ಣಸಂಕರ ಹಾಗೂ **ವಿಲೋಮ ವಿವಾಹ**ವೆಂದು ಗದ್ದಲ ಹಾಕಲು ಕಾರಣವಾಯಿತು. ಬಸವಾದಿ ಶರಣರ ದೃಷ್ಟಿಯಲ್ಲಿ ಇದು ಲಿಂಗಾಯತಧರ್ಮದ ಸಮಾನಧರ್ಮೀಯರ ನಡುವೆ ನಡೆದ ಮದುವೆಯೆನಿಸಿತು. ಶರಣ ಮೋಳಿಗೆ ಮಾರಯ್ಯನವರು ಈ ಕಲ್ಯಾಣ ಮಹೋತ್ಸವವನ್ನು ಮಾನವತೆಯ ಮಹಾಸಿದ್ಧಿ ಎಂದು ವಚನದಲ್ಲಿ ದಾಖಲಿಸಿದರು–

ಅಗ್ರಜ ಅಂತ್ಯಜ ವರ್ಣಧರ್ಮದ ಎರಡು ಧ್ರುವಗಳು
ಒಂದು ಉತ್ತರ, ಇನ್ನೊಂದು ದಕ್ಷಿಣ
ನಡುವೆ ದೊಡ್ಡ ಕಮರಿ
ಸಮತೆಯ ಗಾಳಿ ಬೀಸಿ
ಶಿವಭಕ್ತಿಯ ಸೂತ್ರ ಬಂಧಿಸಿತ್ತು ಇವೆರಡನ್ನೂ !
ಅಗ್ರಜನ ಪುತ್ರಿ ಅಂತ್ಯಜನ ಮಗನ ಕೈಹಿಡಿದಳು
ಸಾಧಿಸಿತು ಮಾನವತೆಯ ಮಹಾಸಿದ್ಧಿ ಶರಣರಲ್ಲಿ !
ನಿಃಕಳಂಕ ಮಲ್ಲಿಕಾರ್ಜುನಾ ನೋಡಿ ಬೆರಗಾದೆ ನಾನು.

ಸಾವಿರಾರು ವರುಷಗಳಿಂದ ಮೇಲ್ಜಾತಿಯ ಜನರು ಕೆಳಜಾತಿಯ ಸ್ತ್ರೀಯರನ್ನು ಉಪಪತ್ನಿಯರನ್ನಾಗಿ ವಿವಾಹ ಮಾಡಿಕೊಳ್ಳುತ್ತಿದ್ದರು. ಅದು ಅನುಲೋಮ ವಿವಾಹವೆಂದು ಮಾನ್ಯತೆ ಪಡೆದಿತ್ತು. ಆದರೆ ನಿಮ್ನ ಜಾತಿಯ ವರನಿಗೆ ಉಚ್ಚಜಾತಿಯ ಕನ್ಯೆಯ ಕೊಟ್ಟು ಮದುವೆ ನಡೆದಿರಲಿಲ್ಲವಾದ್ದರಿಂದ ಇದು ವಿಲೋಮ

ವಿವಾಹವೆಂದು ಕರ್ಮಠ ಸಂಪ್ರದಾಯವಾದಿಗಳು ರಾಜ ಬಿಜ್ಜಳನಲ್ಲಿ ದೂರು ಕೊಟ್ಟರು. ಈ ವಿವಾಹ ಮಾಡಿದವರಿಗೆ, ಮಾಡಿಸಿದವರಿಗೆ ಧರ್ಮಶಾಸ್ತ್ರಗಳ ಪ್ರಕಾರ ಕಠಿಣ ಶಿಕ್ಷೆಯಾಗಬೇಕು ಎಂದು ವಾದಿಸಿದರು.

ವರ್ಣಾಶ್ರಮ ಧರ್ಮ ರಕ್ಷಣೆ ರಾಜನ ಕರ್ತವ್ಯವೆಂದು ಪುರೋಹಿತ ಶಾಹಿಗಳು ಎಚ್ಚರಿಸಿದರು. ಇಲ್ಲದಿದ್ದರೆ ಜನರು ಕ್ರಾಂತಿಯೆದ್ದು ರಾಜನನ್ನು ಸಿಂಹಾಸನದಿಂದ ಕೆಳಗಿಳಿಸುವರೆಂದೂ ಒತ್ತಡ ತಂತ್ರಹೂಡಿದರು. ಅವರ ಒತ್ತಡಕ್ಕೆ ಮಣಿದ ಬಿಜ್ಜಳನು ಹರಳಯ್ಯ ಮಧುವರಸರನ್ನು ಬಂಧಿಸಿ ತರಿಸಿದನು. ರಾಜಾಸ್ಥಾನದಲಿ ವಿಚಾರಣೆಯ ನಾಟಕ ನಡೆಯಿತು. ಬಸವಣ್ಣನವರು- ಈ ವಿವಾಹವು ಇಷ್ಟಲಿಂಗ ಸಂಸ್ಕಾರಹೊಂದಿದ ಸಮಾನ ಧರ್ಮೀಯರಲ್ಲಿ ನಡೆದಿದೆ, ಎಂದು ಎಷ್ಟೇ ತಿಳಿಸಿ ಹೇಳಿದರೂ ಕೂಡ ರಾಜಪುರೋಹಿತರು ಒಪ್ಪದೇ ಈ ಶರಣರಿಬ್ಬರಿಗೂ ಎಳೆಹೂಟಿ ಶಿಕ್ಷೆ ಎಂದು ನಿರ್ಣಯ ಸಾರಲಾಯಿತು. ಇದನ್ನು ನೋಡಿ ಬಸವಣ್ಣನವರು ತಕ್ಷಣವೇ ಪ್ರಧಾನಿ ಹುದ್ದೆಗೆ ರಾಜೀನಾಮೆ ಇತ್ತು, ರಾಜಾಸ್ಥಾನದಿಂದ ಮಹಾಮನೆಗೆ ಬಂದರು.

ಹರಳಯ್ಯ-ಮಧುವರಸರಿಗೆ ಎಳೆಹೂಟಿ ಶಿಕ್ಷೆ ಹಾಗೂ ಬಸವಣ್ಣನವರು ಪ್ರಧಾನಮಂತ್ರಿ ಹುದ್ದೆ ತ್ಯಾಗ ಮಾಡಿರುವ ಸುದ್ದಿಗಳು ಕಾಳ್ಗಿಚ್ಚಿನಂತೆ ಹರಡಿದವು. ಬಸವಾದಿ ಶರಣರ ಅನುಯಾಯಿಗಳು ಇದನ್ನು ಪ್ರತಿಭಟಿಸಲು ನಿರ್ಧರಿಸಿದರು. ಇದನ್ನು ಮೊದಲೇ ಊಹಿಸಿದ್ದ ಸಂಪ್ರದಾಯವಾದಿ ಮಂತ್ರಿಗಳು ಹಾಗೂ ರಾಜಪುರೋಹಿತರು ಬಿಜ್ಜಳರಾಜನ ಅರಮನೆಗೆ ಹೋಗಿ 'ಬಸವಣ್ಣನವರು ಕಲ್ಯಾಣದಲ್ಲಿದ್ದರೆ ಅವರ ಲಕ್ಷಾಂತರ ಶರಣಗಣ-ಗಣಾಚಾರಿ ಶರಣರು ಶಸ್ತ್ರ ಹಿಡಿದು, ರಾಜನನ್ನು ಸಂಹರಿಸಿ ತಮ್ಮ ನಾಯಕನಾಗಿರುವ ಬಸವಣ್ಣನವರನ್ನು ಪಟ್ಟಗಟ್ಟಿ ಬಸವರಾಜ ಎಂದು ಘೋಷಿಸುವರು, ಎಂದು ಬಿಜ್ಜಳರಾಜನ ಕಿವಿಯಲ್ಲಿ ಸಂಶಯದ ವಿಷಬೀಜ ಬಿತ್ತಿದರು. ತಂತ್ರ-ಕುತಂತ್ರಮಾಡಿ ಅದೇ ರಾತ್ರಿ ಬಸವಣ್ಣನವರಿಗೆ **'ಗಡೀಪಾರು ಆಜ್ಞೆ'** ಮಾಡಿಸಿ, ಸೂರ್ಯೋದಯದೊಳಗೆ ಕಲ್ಯಾಣ ಮಹಾನಗರದ ಗಡಿದಾಟಿ ಹೋಗಬೇಕೆಂದು ರಾಜಮುದ್ರೆ ಹಾಕಿಸಿ, ಆಜ್ಞಾಪತ್ರವನ್ನು ಬಸವಣ್ಣನವರಿಗೆ ತಲುಪುವಂತೆ ಕಳಿಸಿದರು.

ಬಸವಣ್ಣನವರು ಮಹಾಮನೆಯಲ್ಲಿ ನೆರೆದಿದ್ದ ಹಿರಿಯ ಶರಣರಿಗೆ ಅಕ್ಕನಾಗಮ್ಮ ಮುಂತಾದ ಶರಣೆಯರಿಗೆ ಸಮಾಧಾನ-ಶಾಂತಿ ಕಾಪಾಡಲು ತಿಳಿಸಿ ನಡುರಾತ್ರಿಯಲ್ಲಿಯೇ ಅಪ್ಪಣ್ಣ ಶರಣರೊಂದಿಗೆ ಅಶ್ವಾರೂಢರಾಗಿ ಕಲ್ಯಾಣದಿಂದ ನಿರ್ಗಮಿಸಿದರು.

ಮರುದಿನವೇ ಹರಳಯ್ಯ-ಮಧುವರಸರಿಗೆ ಎಳೆಹೂಟಿ ಶಿಕ್ಷೆ ಜಾರಿಗೊಳಿಸಿದರು. ಸಂಜೆಯ ಹೊತ್ತು ಕಲ್ಯಾಣದ ಹೊರವಲಯದಲ್ಲಿ ಮದವೇರಿದ ಆನೆಯ ಹಿಂದಿನ ಕಾಲುಗಳಿಗೆ ಇಬ್ಬರೂ ಶರಣರನ್ನು ಸರಪಳಿಯಿಂದ ಬಿಗಿದು,

ಆನೆಗೆ ಸೆರೆ ಕುಡಿಸಿ ಕಲ್ಲು-ಮುಳ್ಳುಕಂಟಗಳಿಂದ ಕೂಡಿದ ಬಯಲು-ಗುಡ್ಡ-ದಿನ್ನೆಗಳ ಮೇಲೆ ಆನೆಯನ್ನು ಅಂಕುಶ-ಭರ್ಚಿಯಿಂದ ತಿವಿದು ಓಡಿಸಿದರು. ಶರಣರಿಬ್ಬರೂ ಗುರುಬಸವಣ್ಣನವರ ವಚನ ಸ್ಮರಿಸಿಕೊಂಡರು.

ಜೋಳವಾಳಿಯಾನಲ್ಲ, ವೇಳೆವಾಳಿ ನಾನಯ್ಯಾ
ಹಾಳು ಗೆಟ್ಟೋಡುವ ಆಳು ನಾನಲ್ಲವಯ್ಯಾ
ಕೇಳು ಕೂಡಲ ಸಂಗಮದೇವಾ
ಮರಣವೇ ಮಹಾನವಮಿ !

ಮರಣವನ್ನು ಮಹಾನವಮಿ ಹಬ್ಬವಾಗಿ ಸ್ವೀಕರಿಸಿದ ಶರಣರಿಬ್ಬರೂ ಬಸವತತ್ವಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿ ಬಲಿದಾನವಾದರು, ಹುತಾತ್ಮರಾದರು.

೨೦. ಕಲ್ಯಾಣ ಕ್ರಾಂತಿಯ ಧೀರ ಸೇನಾನಿ ಅಕ್ಕನಾಗಮ್ಮ :

ಅನುಭವ ಮಂಟಪದಲ್ಲಿ ಶರಣ-ಶರಣೆಯರೆಲ್ಲ ಸಭೆ ಸೇರಿದರು. ಅಲ್ಲಮಪ್ರಭುಗಳ ಸಲಹೆಯಂತೆ ಚೆನ್ನಬಸವಣ್ಣನವರನ್ನು ಚಿಕ್ಕದಣ್ಣಾಯರೆಂದು ಸಾರಿದರು. ಅಕ್ಕನಾಗಮ್ಮ, ಮಡಿವಾಳ ಮಾಚಿದೇವ, ಮೋಳಿಗೆ ಮಾರಯ್ಯ ಅಂಬಿಗರ ಚೌಡಯ್ಯ ಮುಂತಾದ ಹಿರಿಯ ಶರಣರೊಂದಿಗೆ ವಿಚಾರ-ವಿನಿಮಯ ನಡೆಸಿದರು. ವಚನತಾಡೋಲೆ ಕಟ್ಟುಗಳ ಸಂರಕ್ಷಣೆ ಹಾಗೂ ಶರಣ ಸಮೂಹದ ರಕ್ಷಣೆ ಬಗ್ಗೆ ಯೋಜನೆ ರೂಪಿಸಿದರು. ಅತ್ತ ಬಸವಣ್ಣನವರು ಕಪ್ಪಡಿ ಸಂಗಮ ತಲುಪಿದರು. ಕಲ್ಯಾಣದಲ್ಲಿ ಹರಳಯ್ಯ-ಮಧುವರಸರಿಗೆ ಎಳೆಹೂಟ ಶಿಕ್ಷೆಯಾದುದನ್ನು ತಿಳಿದು ಮನನೊಂದರು. ಕೂಡಲೇ ಅಪ್ಪಣ್ಣನವರನ್ನು ಕಲ್ಯಾಣಕ್ಕೆ ಕಳಿಸಿ, ಎಲ್ಲ ಶರಣ-ಶರಣೆಯರೂ ಜಾಗ್ರತೆಯಿಂದ ಕಲ್ಯಾಣ ತೊರೆದು ತಮ ತಮಗೆ ಸುರಕ್ಷಿತವೆಂದು ತೋರುವ ಸ್ಥಳಗಳಿಗೆ ಹೋಗಬೇಕೆಂದು ಪತ್ರ ಬರೆದು ತಿಳಿಸಿದರು. ಅಕ್ಕನಾಗಮ್ಮ ನೀಲಾಂಬಿಕೆ-ಗಂಗಾಂಬಿಕೆಯರನ್ನು ಕಪ್ಪಡಿ ಸಂಗಮಕ್ಕೆ ಕರೆತರಲು ಹೇಳಿದರು. ಅಪ್ಪಣ್ಣನವರು ಬಸವಣ್ಣನವರ ಸಂದೇಶ ಹೇಳಿದ ನಂತರ ಅಲ್ಲಮಾದಿಶರಣರ ಒಂದು ಗುಂಪು ಅಕ್ಕಮಹಾದೇವಿ ಮುಂತಾದ ಶರಣೆಯರೊಂದಿಗೆ ಶ್ರೀಶೈಲದ ಕದಳಿ ಪ್ರಾಂತದೆಡೆಗೆ ಹೊರಟಿತು. ಹಲವಾರು ಶರಣ-ಶರಣೆಯರು ನಾಲ್ಕು ದಿಕ್ಕಿಗೂ ಚದುರಿಹೋದರು. ಅಕ್ಕನಾಗಮ್ಮ, ಗಂಗಾಂಬಿಕೆ, ಚೆನ್ನಬಸವಣ್ಣನವರು ಮಡಿವಾಳ ಮಾಚಿದೇವ, ಅಂಬಿಗ ಚೌಡಯ್ಯ, ಡೋಹರ ಕಕ್ಕಯ್ಯ, ಸುಲಿಯ ಚಂದಯ್ಯ, ಕಿನ್ನರಿ ಬೊಮ್ಮಯ್ಯ ಮುಂತಾದವರು ಶರಣ ಸಂಕುಳದ ರಕ್ಷಣೆ ಹಾಗೂ ಅಪಾರ ವಚನ ವಾಙ್ಮಯದ ಸಂರಕ್ಷಣೆಗಾಗಿ ಕಲ್ಯಾಣದಲ್ಲಿಯೇ ಉಳಿಯಲು ನಿರ್ಧರಿಸಿದರು. ಬಸವಣ್ಣನವರ ಯೋಗಕ್ಷೇಮಕ್ಕಾಗಿ ನೀಲಾಂಬಿಕೆಯನ್ನು ಮಾತ್ರ ಅಪ್ಪಣ್ಣ-ಲಿಂಗಮ್ಮ ಶರಣದಂಪತಿಗಳೊಂದಿಗೆ ಕಳಿಸಿಕೊಟ್ಟರು.

ಕಲ್ಯಾಣದಲ್ಲಿ ಕಪಟ ಕಾರಸ್ಥಾನ, ರಾಜಕೀಯ ಅಧಿಕಾರಲಾಲಸೆಗಾಗಿ

ತಿಕ್ಕಾಟ ನಡೆದು ಪಟ್ಟಭದ್ರ ಹಿತಾಸಕ್ತಿಗಳು ಕುತಂತ್ರ ನಡೆಸುತ್ತಿರುವಷ್ಟರಲ್ಲಿ ಹರಳಯ್ಯ ಮಧುವರಸರ ಬಲಿದಾನದ ಸೇಡು ತೀರಿಸಿಕೊಳ್ಳಬೇಕೆಂದು **ಜಗದೇವ ಮೊಲ್ಲಿಬೊಮ್ಮ** ಎಂಬ ತರುಣ ಸೈನಿಕರು ಒಂದು ರಾತ್ರಿ ಅರಮನೆಯಲ್ಲಿಯೇ ಕಾವಲುಭಟರ ವೇಷದಲ್ಲಿ ಹೋಗಿ ಬಿಜ್ಜಳನ ಹತ್ಯೆ ಮಾಡಿದರು. ಈ ಹತ್ಯೆಯ ಅಪವಾದವನ್ನು ಜಾತ್ಯಾಂಧರು ಅಹಿಂಸಾವಾದಿ ಶರಣರ ಮೇಲೆ ಹೊರಿಸಿ, ಶರಣರಿಂದ ಬಿಜ್ಜಳರಾಜನ ಕೊಲೆಯಾಯ್ತು ಎಂದು ಎಲ್ಲೆಡೆ ಅಪಪ್ರಚಾರದ ಸುದ್ಧಿ ಹರಡಿಸಿದರು. ರಾಜನಿಷ್ಠ ಸೈನಿಕರಿಗೂ ಬಸವಭಕ್ತ ಶರಣರಿಗೂ ಕಾಳಗ ಸುರುವಾಯ್ತು. ಇದರ ಶಮನಕ್ಕಾಗಿ ಚೆನ್ನಬಸವಣ್ಣ ಮುಂತಾದ ಶರಣರು ಬಹಳ ಪ್ರಯತ್ನಿಸುತ್ತಲಿದ್ದರು.

ಅತ್ತ ಬಸವಣ್ಣನವರು ಕಪ್ಪಡಿ ಸಂಗಮದಲ್ಲಿ ಮಹಾಲಿಂಗದೊಳು ಬಯಲಾದರು, ನೀಲಾಂಬಿಕೆ–ಅಪ್ಪಣ್ಣ–ಲಿಂಗಮ್ಮರು ತಂಗಡಗಿಯಲ್ಲಿ ಬಯಲಾದರು. ಬಸವಣ್ಣನವರು ಬಯಲಾದ ಸುದ್ಧಿ ತಿಳಿದು ಅಕ್ಕನಾಗಮ್ಮತಾಯಿ ಕಣ್ಣೀರುಗರೆದರು. ಹೃದಯದ ಭಾವನೆಗಳು ವಚನ ರೂಪವಾಗಿ ಹೊರಹೊಮ್ಮಿದವು–

–೧–

ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ,
ಲಿಂಗಜಂಗಮದ ಚೈತನ್ಯವೆ,
ನಿಮ್ಮನಗಲಿ ಎಂತು ಸೈರಿಸುವೆನು ?
ಎಲೆ ಅಯ್ಯಾ ಪರಮಗುರುವೆ
ಆಹಾ ಎನ್ನ ಅಂತರಂಗದ ಜ್ಯೋತಿಯೇ
ನಿಮ್ಮ ಒಕ್ಕ ಶೇಷ ಪ್ರಸಾದವನಿಕ್ಕಿ
ಎನ್ನ ಪಾವನವ ಮಾಡಿ ಉಳುಹಿದೆಯಯ್ಯಾ
ಲಿಂಗವೆ, ಎನಗಿನ್ನಾರು ಹೇಳಯ್ಯಾ ನೀವಲ್ಲದೆ ?
ಬಸವಣ್ಣ ಪ್ರಿಯ ಚೆನ್ನಸಂಗಯ್ಯಾ
ನೀವಗಲಿದಡೆ ಎನ್ನ ಪ್ರಾಣ
ನಿಮ್ಮೊಳಗಲ್ಲದೇ ಅಗಲಬಲ್ಲುದೆ ?

–೨–

ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ !
ಅಯ್ಯಾ, ಸ್ವರ್ಗ ಮರ್ತ್ಯಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರುಬಲ್ಲರು ?
ಅಣ್ಣಾ, ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು

ನೀವು ಲಿಂಗೈಕ್ಯವಾದೊಡೆ
ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ !
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತಲ್ಲಾ ಬಸವಣ್ಣಾ
ಎನ್ನನೊಯ್ಯದೆ ಹೋದೆಯಲ್ಲಾ!
ಪಂಚಪರುಷಮೂರ್ತಿ ಬಸವಣ್ಣಾ
ಬಸವಣ್ಣ ಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಾ ಸಂಗನಬಸವಣ್ಣ.

ಈ ಪ್ರಕಾರ ಅಕ್ಕನಾಗಮ್ಮ ತಾಯಿಯವರು ಬಸವಣ್ಣನವರ ಅಗಲಿಕೆಯ ನೋವನ್ನು ಹೊರಹಾಕಿರುವುದನ್ನು ಕಾಣುತ್ತೇವೆ.

ರಾಜನ ಅರಮನೆಯಲಿ ಕ್ಷಿಪ್ರವಾಗಿ ರಾಜಕೀಯ ಬೆಳವಣಿಗೆಗಳು ನಡೆದು ಬಿಜ್ಜಳನ ಕೊಲೆಯಿಂದ ತೆರವಾದ ಸಿಂಹಾಸನಕ್ಕೆ ಆತನ ಮಗ ಸೋವಿದೇವನನ್ನು ಪಟ್ಟಗಟ್ಟಿ, 'ನಿಮ್ಮ ತಂದೆ ಬಿಜ್ಜಳನ ಕೊಲೆಗೆ ಶರಣರೇ ಕಾರಣರು' ಎಂದು ಕಿವಿಯೂದಿ ಶರಣರನ್ನು ಚೆಂಡಾಡಲು ಕಂಡಲ್ಲಿ ಕೊಲ್ಲಲು ರಾಜಾಜ್ಞೆ ಹೊರಡಿಸಿದರು. ಇದನ್ನು ಮೊದಲೇ ಊಹಿಸಿದ್ದ ಶರಣ ಸಂಕುಳ ಅಕ್ಕನಾಗಮ್ಮ ತಾಯಿಯ ನೇತೃತ್ವದಲ್ಲಿ ಅಪಾರವಾದ ವಚನ ತಾಡೋಲೆ ಕಟ್ಟುಗಳನ್ನು ಬಂಡಿಯಲ್ಲಿ ಹೇರಿ ಕುದುರೆಗಳ ಮೇಲೆ, ಚರಜಂಗಮರ ಜೋಳಿಗೆಯಲ್ಲಿ ಹಾಕಿ ರಾಜ್ಯದ ಹೊರಗೆ ಕಳಿಸುವ ಏರ್ಪಾಟು ಮಾಡಿದರು.

ವಚನ ತಾಡೋಲೆಗಳ ರಕ್ಷಣೆಗಾಗಿ ಅಕ್ಕನಾಗಮ್ಮ ಶರಣೆ ಧೀರ ಸೇನಾನಿಯಾಗಿ ಖಡ್ಗ ಹಿಡಿದು ಕುದುರೆ ಏರಿದರು. ಅದೇ ರೀತಿ ಗಂಗಾಂಬಿಕೆ, ಚೆನ್ನಬಸಣ್ಣ, ಮಾಚಿದೇವ, ಕಕ್ಕಯ್ಯ, ಚೌಡಯ್ಯ, ಬೊಮ್ಮಯ್ಯ, ಚಂದಯ್ಯ, ಮಾರಯ್ಯ, ಕಲ್ಯಾಣಮ್ಮ, ಘನಲಿಂಗರುದ್ರಮುನಿ ಮುಂತಾದ ಸಾವಿರಾರು ಶರಣರು ಕಲ್ಯಾಣದಿಂದ ಹೊರನಡೆದರು. ಕಲ್ಯಾಣದಲ್ಲಿ ರಕ್ತದ ಕೋಡಿ ಹರಿಯಿತು. ಕಲ್ಯಾಣ ಕಟುಕರಕೇರಿಯಾಯಿತು. ಶರಣ ಸಮೂಹವನ್ನು ಬೆನ್ನಟ್ಟಿಕೊಲ್ಲಲು ಸೋವಿದೇವನ ಸೈನ್ಯ ಬೆನ್ನುಹತ್ತಿತ್ತು. ಕಲ್ಯಾಣದಿಂದ ಹೊರಟ ಶರಣ ಸಂಕುಳ ತರ್ದೇವಾಡಿ ಪ್ರಾಂತದ ಮೂಲಕ ಅಂದರೆ ಸೊಲ್ಲಾಪುರ-ವಿಜಯಪುರ, ಗೊಡಚಿ ಮುರಗೋಡ, ಕಾದರವಳ್ಳಿ, ತಿಗಡಿ, ಲಿಂಗನಮಠ ಮೂಲಕ ಉಳವಿಯ ಘೋರಾರಣ್ಯ ಪ್ರವೇಶಿಸಿತು. ಗೊಡಚಿಯಲ್ಲಿ ಘನಘೋರ ಸಂಗ್ರಾಮ, ಕಾದರವಳ್ಳಿಯಲ್ಲಿ ಕಡೆಯ ಕಾಳಗ ಜರುಗಿ ಸೈನ್ಯ ಹಿಮ್ಮೆಟ್ಟಿತು. ಶರಣರು ಮುಂದೆಸಾಗಿ ಹೋದರು. ಕಾದರವಳ್ಳಿಯಲ್ಲಿ ಶರಣೆ ಗಂಗಾಂಬಿಕೆ ಯುದ್ಧದಲ್ಲಿ ವೀರಮರಣ ಹೊಂದಿದಳು. ಅವಳ ಸಮಾಧಿಯು ಮುಗುಟಖಾನ ಹುಬ್ಬಳ್ಳಿ ಹತ್ತಿರ ಮಲಪ್ರಭಾನದಿಯ ದಡದಲ್ಲಿ ಇಂದು ಸ್ಮಾರಕವಾಗಿದೆ. ಕಕ್ಕೇರಿಯಲ್ಲಿ ಕಕ್ಕಯ್ಯ ದಂಪತಿಗಳು, ತಿಗಡಿಯಲ್ಲಿ ಕಲ್ಯಾಣಮ್ಮನವರು ಲಿಂಗೈಕ್ಯರಾದರು.

ಅಕ್ಕನಾಗಮ್ಮ ಚೆನ್ನಬಸವಣ್ಣ ನುಲಿಯಚಂದಯ್ಯ. ರುದ್ರಮುನಿ ಮುಂತಾದ ಶರಣರು ಉಳವಿಯ ಘೋರಾರಣ್ಯದ ನಡುವೆ ಮಹಾಮನೆ ಗವಿಯಲ್ಲಿ ಕೆಲಕಾಲ ನೆಲೆಸಿದರು. ಚೆನ್ನಬಸವಣ್ಣನವರು ಹಾಗೂ ಹಲವಾರು ಶರಣರು ಉಳವಿಯಲ್ಲಿ ಮಹಾಲಿಂಗದೊಳು ಬೆರೆತರು. ಅಕ್ಕನಾಗಮ್ಮನವರು ಘನಲಿಂಗರುದ್ರಮುನಿಯನ್ನು ಬಾಳೆಹೊನ್ನೂರಲ್ಲಿ ಮಠಸ್ಥಾಪಿಸಿ ಪಟ್ಟಗಟ್ಟಿದರು.

೨೧. ಅಕ್ಕನಾಗಮ್ಮ ಬಯಲಾದುದು :

ಅಕ್ಕನಾಗಮ್ಮತಾಯಿಯು ಬಸವಜನನದ ಪೂರ್ವದಲ್ಲಿ ಜನಿಸಿ, ಬಸವಣ್ಣನವರ ಸಾಧನೆಗೆ ಬೆನ್ನೆಲುಬಾಗಿ ನಿಂತು, ಕಲ್ಯಾಣಕ್ರಾಂತಿ ಧೀರಸೇನಾನಿಯಾಗಿ ವಚನವಾಙ್ಮಯ ಉಳಿಸಿದ ಮಹಾಮಾತೆಯಾಗಿ ವಯೋವೃದ್ಧ ಅವಸ್ಥೆ ತಲುಪಿದರು.

ಆಚಾರವೆಂಬುದು ಅಗೋಚರ ನೋಡಯ್ಯಾ
ಆರಿಗೆಯೂ ಸಾಧ್ಯವಿಲ್ಲ
ಮರ್ತ್ಯಲೋಕದಲ್ಲಿ ಸದಾಚಾರದ ಬೆಳವಿಗೆಯ ಮಾಡಲೆಂದು
ಬಸವಣ್ಣ ಬಂದು ಭಕ್ತಿ ಸ್ಥಲವ ಹರಹಿದ.
ಗುರುಲಿಂಗ ಜಂಗಮ ಪಾದೋದಕ ಪ್ರಸಾದದ
ಹಾದಿಯನೆಲ್ಲರಿಗೆ ತೋರಿದ.
ಶಿವಾಚಾರದ ಬೆಳವಿಗೆಯ ಘನವನು
ಅಹುದಲ್ಲವೆಂದು ಬಿಜ್ಜಳ ತರ್ಕಿಸಲು
ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ.
ಬಂದ ಮಣಿಹ ಪೂರೈಸಿತ್ತೆಂದು
ಲಿಂಗದೊಳಗೆ ಬಗಿದು ಹೊಕ್ಕೊಡೆ
ಹಿಂದೆ ಲೋಕವರಿದು ಬದುಕಬೇಕೆಂದು ಸೆರಗಕೊಟ್ಟ.
ನಾನು ಹಿಂದುಳಿದಿಹಳೆಂದು ಮುಂದಣ ಗತಿಯ ತೋರಿ
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ
ತನ್ನ ಪ್ರಸನ್ನದೊಳಗೆ ಇಂಬಿಟ್ಟುಕೊಂಡನು
ಎನ್ನ ಹೆತ್ತ ತಂದೆ ಸಂಗನಬಸವಣ್ಣನು.

ಎಂದು ಭಾವತುಂಬಿ ಸ್ಮರಿಸಿಕೊಂಡರು. ಮುಂದುವರೆದು ಹೇಳುತ್ತಾರೆ–

ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು.
ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು.
ಎನ್ನ ಪ್ರಾಣ ಅಲ್ಲಮಪ್ರಭುದೇವರ ಅರಿವ ಬೆರಸಿತ್ತು.
ಇಂತೀ ಮೂವರು ಒಂದೊಂದು ಹಂಚಿಕೊಂಡ ಕಾರಣ
ಎನಗೇನೂ ಇಲ್ಲದೆ ಬಸವಣ್ಣ ಪ್ರಿಯ ಚೆನ್ನಸಂಗಯ್ಯನ
ಹೃದಯಕಮಲದಲ್ಲಿ ನಿಜನಿವಾಸಿಯಾಗಿದ್ದೆನು.

ಅಂತಿಮವಾಗಿ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ಹತ್ತಿರ ಎಣ್ಣೆಹೊಳೆಯಲ್ಲಿಗೆ ಬಂದು ಲಿಂಗೈಕ್ಯರಾಗುತ್ತಾರೆ, ಅಲ್ಲಿ ಅವರ ಸಮಾಧಿ ಇದ್ದು ಸ್ಮಾರಕ ಕಟ್ಟಲಾಗಿದೆ.

೨೨. ಬಸವಾದಿ ಶರಣರ ವಚನಗಳಲ್ಲಿ ಅಕ್ಕನಾಗಮ್ಮ :

೧. ಶಿಖಾಚಕ್ರವಿಡಿದು ಶಿವನೇ ತಾನಾದಳು ಅಕ್ಕನಾಗಾಯಿ
– ಬಸವಣ್ಣನವರು

೨. ಬಸವನ ಗುರುತಾಯೇ....ಅಕ್ಕನಾಗಮ್ಮತಾಯೆ **– ನೀಲಾಂಬಿಕೆ**

೩. ಎಮ್ಮಕ್ಕನಾಗಾಯಿಯ ವಚನ ಮೂರು ಲಕ್ಷದ ತೊಂಬತ್ತಾರು ಸಾಸಿರ
– ಸಿದ್ಧರಾಮೇಶ್ವರರು

೪. ಅವ್ವೆ ನಾಗವ್ವೆ ಸಂಗನಬಸವಣ್ಣನ ಬಯಲ ಕೂಡಿದರು
–ಚೆನ್ನಬಸವಣ್ಣ

೫. ಅಕ್ಕನಾಗಮ್ಮನ ಪ್ರಸಾದವ ಕೊಂಡು ಎನ್ನಂತರಂಗ ಶುದ್ಧವಾಯಿತ್ತು
– ಆಯ್ದಕ್ಕಿ ಲಕ್ಕಮ್ಮ

೬. ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು
–ಕೋಲಶಾಂತಯ್ಯಾ

೭. ಅಕ್ಕನಾಗಾಯಿ ಬಸವರಾಜನ ಬಯಲ ಬೆರಸಿದರು
– ಮಡಿವಾಳ ಮಾಚಿದೇವ

೮. ಪ್ರಸಾದಕ್ಕೆ ಸತಿಯಾದರು ಅಕ್ಕನಾಗಮ್ಮನವರು
–ಹಡಪದ ಅಪ್ಪಣ್ಣ

೯. ಇಷ್ಟಲಿಂದಲ್ಲಿ ನಿರವಯಲನೈದಿದರು ಅಕ್ಕನಾಗಲಾಂಬಿಕೆಯಮ್ಮನವರು
– ಅಜ್ಞಾತ ಶರಣ

೧೦. ಬಸವಣ್ಣ ಚೆನ್ನಬಸವಣ್ಣ– ಅವ್ವೆನಾಗಾಯಿ ಮೊದಲಾದ ಅಸಂಖ್ಯಾತ ಮಹಾ ಪ್ರಮಥಗಣಂಗಳ ಪರಮ ಪ್ರಸಾದವ ಕೊಂಡು ಬದುಕಿದೆನಯ್ಯಾ
– ಮರುಳಶಂಕರದೇವರು

ಈ ರೀತಿಯಾಗಿ ಅಕ್ಕನಾಗಮ್ಮತಾಯಿಯ ವ್ಯಕ್ತಿತ್ವವನ್ನು ಶರಣರು ಕೊಂಡಾಡಿದ್ದಾರೆ. ಬಸವಣ್ಣನವರ ಕಲ್ಯಾಣಕ್ರಾಂತಿಯ ಗಂಗೋತ್ರಿ ಎಂದರೆ ಉಗಮಸ್ಥಾನವೇ ಅಕ್ಕನಾಗಮ್ಮತಾಯಿಯೆನ್ನಬಹುದು. ಬಾಲ ಬಸವಣ್ಣನಲ್ಲಿ ವೈಚಾರಿಕ ಕ್ರಾಂತಿಯ ವಿಚಾರಗಳನ್ನು ಬಿತ್ತಿ ಬೆಳೆಸಿದ ಮಹಾತಾಯಿ ಅಕ್ಕನಾಗಮ್ಮಳು ಪ್ರಪಂಚದ ಸ್ತ್ರೀ ಕುಲಕ್ಕೆ ತಿಲಕವಾಗಿದ್ದಾಳೆ.

ಗ್ರಂಥ ಋಣ :

೧. ಬಸವಯುಗದ ವಚನ ಮಹಾಸಂಪುಟ – ಸಂ. ಡಾ. ಎಂ. ಎಂ. ಕಲಬುರ್ಗಿ

೨. ಶಿವಶರಣೆಯರ ವಚನಗಳು – ಸಂ. ಡಾ.ಆರ್.ಸಿ.ಹಿರೇಮಠ

೩. ಶಿವಶರಣೆಯರ ವಚನ ಸಂಪುಟ – ಸಂ. ಡಾ.ವೀರಣ್ಣ ರಾಜೂರ

೪. ಬಸವೇಶ್ವರರ ಸಮಕಾಲೀನರು – ಪ್ರ ಬಸವಸಮಿತಿ ಬೆಂಗಳೂರು

೫. ಶರಣಚರಿತಾಮೃತ – ಡಾ. ಸಿದ್ಧಯ್ಯ ಪುರಾಣಿಕ

೬. ಕ್ರಾಂತಿ ಮಾತೆ – ಡಾ. ಗಂಗಮ್ಮ ಸತ್ಯಂಪೇಟೆ

೭. ಧರ್ಮಪಿತ ಬಸವಣ್ಣನವರು – ಪ್ರೊ. ಸಿದ್ಧಣ್ಣ ಲಂಗೋಟಿ

೮. ಕನ್ನಡ ಜಾನಪದ ಗೀತಗಳು – ಡಾ. ಬಿ.ಎಸ್. ಗದ್ದಗಿಮಠ

೯. ಕಾಯಕವೀರ – ಶ್ರೀ ಲಕ್ಕಪ್ಪ ಶಿರಹಟ್ಟಿ

೧೦. ಶಿವಶರಣೆಯರ ಚರಿತ್ರೆಗಳು – ಡಾ. ಫ.ಗು.ಹಳಕಟ್ಟಿ

೧೧. ಅನುಭವ ಮಂಟಪ ಐತಿಹಾಸಿಕತೆ – ಉತ್ತಂಗಿ ಚೆನ್ನಪ್ಪ

೧೨. ಮನುಸ್ಮೃತಿ – (ಅನು) ಚಕ್ರಕೋಡಿ ಈಶ್ವರಶಾಸ್ತ್ರಿ

೧೩. ಬಸವತತ್ವ ಪ್ರದೀಪಿಕೆ – ಸಿದ್ಧರಾಮಶರಣರು ಬೆಲ್ದಾಳ ಹಾಗೂ ಡಿ.ಎಂ.ಧನ್ನೂರ ಶರಣರು

೧೪. ವಿಚಾರಪತ್ನಿ ನೀಲಾಂಬಿಕೆಯವರು – ಡಾ. ಕಲ್ಯಾಣಮ್ಮ ಲಂಗೋಟಿ

೧೫. ಬಸವಣ್ಣನವರ ಕೊನೆಯ ದಿನಗಳು – ಡಾ. ಗಂಗಮ್ಮ ಸತ್ಯಂಪೇಟೆ

೧೬. ಆಚಾರ ಪತ್ನಿ ಗಂಗಾಂಬಿಕೆಯವರು – ಡಾ. ಕಲ್ಯಾಣಮ್ಮ ಲಂಗೋಟಿ

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೮೦
೯.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ವಚನ ಸಂಶೋಧನ ಪಿತಾಮಹ ಫ.ಗು. ಹಳಕಟ್ಟಿಯವರು	೧೯೮೧
೧೨.	ಬಸವಣ್ಣನವರ ಬಯ್ಗುಳಗಳು	೧೯೮೧
೧೩.	ಅಕ್ಕ ಕಂಡ ಅಣ್ಣ	೧೯೮೧
೧೪.	ಅಂಬಿಗರ ಚೌಡಯ್ಯ	೧೯೮೧
೧೫.	ಶರಣರ ಶಿವರಾತ್ರಿ	೧೯೮೨
೧೬.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೭.	ಬಸವಾದಿ ಶರಣರ ವಚನಾಮೃತ (ಸಂಪಾದಿತ)	೧೯೮೩
೧೮.	ವಿಭೂತಿ ನಿರ್ಮಾಣ ವಿಧಾನ	೧೯೮೪
೧೯.	ಬಾಚಿಕಾಯಕದ ಬಸವಪ್ಪ ಕಾಳವ್ವೆ	೧೯೮೪
೨೦.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೧.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೨.	ಹಡಪದ ಅಪ್ಪಣ್ಣ ಲಿಂಗಮ್ಮ	೧೯೮೫
೨೩.	ಶ್ರೀ ಗುರುಸಿದ್ಧ ಪ್ರಭುದೇವರು	೧೯೮೫
೨೪.	ಇಷ್ಟಲಿಂಗ ಪೂಜಾ ವಿಧಾನ	೧೯೮೫
೨೫.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೬.	ಶಿವಶರಣರ ಕ್ರಾಂತಿ (ಕ.ವಿ.ವಿ. ಪ್ರಕಟಣೆ)	೧೯೮೬
೨೭.	ವಿಶ್ವಗುರು ಬಸವಣ್ಣನವರ ವಚನಗಳು (ಸಂಪಾದಿತ)	೧೯೮೬
೨೮.	ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬
೨೯.	ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು	೧೯೮೭
೩೦.	ಬಸವದರ್ಶನ (ಸಂಪಾದಿತ)	೧೯೮೭
೩೧.	ವಚನಸಾಹಿತ್ಯ : ತಾತ್ವಿಕ ವಿವೇಚನೆ	೧೯೮೭
೩೨.	ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು	೧೯೮೮
೩೩.	ಧರ್ಮಗುರು ಜಗಜ್ಯೋತಿ ಬಸವಣ್ಣನವರು	೧೯೮೮
೩೪.	ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ)	೧೯೮೯
೩೫.	ಬಸವಣ್ಣನವರು ಮತ್ತು ಜಾಗತಿಕ ಶಾಂತಿ	೧೯೮೯
೩೬.	ಬಸವಭಕ್ತ ಘನಮಠ ಶಿವಯೋಗಿಗಳು	೧೯೮೯
೩೭.	ಚೆನ್ನಬಸವಣ್ಣನವರ ವಚನಗಳು (ಸಂಪಾದಿತ)	೧೯೮೯
೩೮.	ಬಸವಭಕ್ತ ಅಥಣಿ ಶಿವಯೋಗಿಗಳು	೧೯೮೯
೩೯.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೪೦.	ಸಿದ್ಧರಾಮೇಶ್ವರ ವಚನಗಳು (ಸಂಪಾದಿತ)	೧೯೯೦
೪೧.	ಡಾ. ಜಚನಿ ಅಂದು-ಇಂದು : ಒಂದು ವಿಮರ್ಶೆ	೧೯೯೦
೪೨.	ಶ್ರೀ ಗುರುಬಸವ ಮಂಟಪ ನಡೆದು ಬಂದ ದಾರಿ	೧೯೯೧

೪೩.	ಮುರಗೋಡ ಮಹಾಂತಜ್ಜನವರು	೧೯೯೨
೪೪.	ಬಸವಕಲ್ಯಾಣ ದರ್ಶನ	೧೯೯೪
೪೫.	ಮಹಾಚೈತ್ರ (ವಿಮರ್ಶೆ)	೧೯೯೪
೪೬.	ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ)	೧೯೯೬
೪೭.	ಬಸವ ವಚನ ದೀಪ್ತಿ : ಒಂದು ವಿಮರ್ಶೆ	೧೯೯೬
೪೮.	ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ)	೧೯೯೭
೪೯.	ಕುಮಾರ ಕಕ್ಕಯ್ಯ ಪೋಳ	೧೯೯೮
೫೦.	ಬೀಳೂರು ಗುರುಬಸವ ಮಹಾಸ್ವಾಮಿಗಳು	೧೯೯೮
೫೧.	ಜೇಡರ ದಾಸಿಮಯ್ಯ ದುಗ್ಗಳೆಯರ ವಚನಗಳು (ಸಂ)	೧೯೯೮
೫೨.	ಬಸವಾದಿ ಶರಣರ ಶಿವಯೋಗದ ವಚನಗಳು (ಸಂ)	೧೯೯೯
೫೩.	ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು	೨೦೦೦
೫೪.	ಬಂಥನಾಳ ಸಂಗನಬಸವ ಶಿವಯೋಗಿಗಳು	೨೦೦೦
೫೫.	ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ	೨೦೦೧
೫೬.	ಶರಣ ಕುಮಾರ ಕಕ್ಕಯ್ಯ	೨೦೦೧
೫೭.	ಬಸವ ಬೆಳೆ	೨೦೦೨
೫೮.	ಶಿವಯೋಗಿ ವೇಮನರ ವಚನಗಳು (ಸಂ.)	೨೦೦೩
೫೯.	ಕನ್ನಡ ಕವಿಕಾವ್ಯ ಪರಂಪರೆ (ಸಂ.)	೨೦೦೪
೬೦.	ದರ್ಪಣ – ಸ್ಮರಣ ಸಂಪುಟ (ಸಂ.)	೨೦೦೪
೬೧.	ಲಿಂಗಾಯತ ಧರ್ಮ ದರ್ಶನ	೨೦೦೫
೬೨.	ಕಾಯಕ ಸಂಜೀವನಿ (ಸಂ.)	೨೦೦೬
೬೩.	ಬಸವಣ್ಣನವರು	೨೦೦೭
೬೪.	ನೆನಹು–ಡಾ. ಕರ್ಕಿ ಹಾಗೂ ಸಣಕಲ್ಲರ ಸ್ಮರಣ ಗ್ರಂಥ (ಸಂ.)	೨೦೦೭
೬೫.	ಡಾ. ಡಿ. ಎಸ್. ಕರ್ಕಿ ಜೀವನ ಸಾಧನೆ	೨೦೦೮
೬೬.	ಬಸವ ಜ್ಯೋತಿ ಮಹಾಂತ ಶಿವಯೋಗಿಗಳು	೨೦೧೧
೬೭.	ವಿಜಯ ಮಹಾಂತ ಶಿವಯೋಗಿಗಳು	೨೦೧೨
೬೮.	ಶಿವ–ಸುಮ (ಸಂಪಾದಿತ)	೨೦೧೨
೬೯.	ವಚನ ಶ್ರಾವಣ	೨೦೧೩
೭೦.	ಬಸವಾನುಭಾವಿ (ಸಂಪಾದಿತ)	೨೦೧೩
೭೧.	ಬಸವಾದಿ ಶಿವಶರಣರ ವಚನಗಳು (ಸಂ.)	೨೦೧೪
೭೨.	ಬಸವಯೋಗಿ ಗುರುಮಹಾಂತ ಸ್ವಾಮಿಗಳು	೨೦೧೫
೭೩.	ಮಹಾಂತ ಜೋಳಿಗೆ ಶಿಲ್ಪಿ ಮಹಾಂತ ಶಿವಯೋಗಿಗಳು	೨೦೧೫
೭೪.	ಡಾ. ಎಂ. ಎಂ. ಕಲಬುರ್ಗಿಯವರು	೨೦೧೫
೭೫.	ವಚನ ಸಂಗಮ (ಸಂಪಾದಿತ)	೨೦೧೬
೭೬.	ಅಮೃತ ಬೆಳಸು (ಸಂಪಾದಿತ)	೨೦೧೬
೭೭.	ಬಸವತತ್ವದ ಮಹಾದಂಡನಾಯಕ	೨೦೧೬
೭೮.	ಧರ್ಮಪಿತ ವಿಶ್ವಗುರು ಬಸವಣ್ಣನವರು	೨೦೧೬
೭೯.	ಶಿವಾನಂದ ಗುರೂಜಿಯವರು	೨೦೧೭
೮೦.	ಬಸವಾದಿ ಶರಣರ ವಚನಗಳಲ್ಲಿ ಲಿಂಗಾಯತ–ಲಿಂಗವಂತ (ಸಂ.)	೨೦೧೭
೮೧.	ಎ. ಸಿದ್ಧರಾಮಣ್ಣ ಶರಣರು	೨೦೧೮
೮೨.	ಸುಜ್ಞಾನ ಸಂಪತ್ತು (ಸಂ)	೨೦೧೮
೮೩.	ಯುಗಪುರುಷ ಮಹಾಂತ ಶಿವಯೋಗಿಗಳು	೨೦೧೮
೮೪.	ವೀರ ವಿರಾಗಿಣಿ ಶರಣೆ ಅಕ್ಕಮಹಾದೇವಿಯವರು	೨೦೧೮
೮೫.	ಕ್ರಾಂತಿ ಗಂಗೋತ್ರಿ ಶರಣೆ ಅಕ್ಕನಾಗಮ್ಮನವರು	೨೦೧೯

ಪ್ರೊ. ಸಿದ್ಧಣ್ಣ ಲಂಗೋಟಿ ಅವರು ಬಸವಭೂಮಿಯಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮದ ಲಿಂಗಾಯತ ಕೃಷಿ ಕುಟುಂಬದಲ್ಲಿ ಜನಿಸಿ (೧೯೫೧). ಚಾಂದಕವಠೆ, ಕನ್ನೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿಂದಗಿಯ ಎಚ್.ಜಿ. ಹೈಸ್ಕೂಲದಲ್ಲಿ ಮಾಧ್ಯಮಿಕ ಶಿಕ್ಷಣ, ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯಲ್ಲಿ ಬಿ.ಎಸ್‌ಸಿ. ಪದವಿ ಶಿಕ್ಷಣ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ತತ್ವಜ್ಞಾನ, ಎಂ.ಎ. ಹಿಂದಿ, ಎಂ.ಎ. ಕನ್ನಡ, ಎಲ್.ಎಲ್‌ಬಿ. ಕಾನೂನು ಶಿಕ್ಷಣ, ಸಿ ವಾಯ್, ಇಡಿ ಯೋಗ ಶಿಕ್ಷಣ ಪಡೆದವರಾಗಿದ್ದಾರೆ.

ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಸಾಹಿತ್ಯ ಕೃಷಿಕೈಕೊಂಡಿದ್ದಾರೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ವಜ್ಞಾನ ಚಿಂತಕರೂ, ಬಸವತತ್ವಜ್ಞಾನದ ಅನುಭಾವಿ ಲೇಖಕರೂ ಆಗಿರುವ ಸಿದ್ಧಣ್ಣ ಲಂಗೋಟಿಯವರು ೮೫ ಕ್ಕೂ ಮಿಕ್ಕಿ ಗ್ರಂಥಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ.

ಕ್ರಿ.ಶ. ೧೯೯೦ ರಲ್ಲಿ ಹಾಗೂ ಕ್ರಿ.ಶ. ೨೦೦೦ ಇಸ್ವಿಯಲ್ಲಿ ಪಾಶ್ಚಿಮಾತ್ಯ ಹಾಗೂ ಪ್ರಪಂಚದ ಪ್ರಮುಖ ದೇಶಗಳಾದ ಇಂಗ್ಲಂಡ, ಅಮೇರಿಕಾ, ಪ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ, ಅರಬ ರಾಷ್ಟ್ರಗಳ ಪ್ರವಾಸ ಕೈಕೊಂಡು ಬಸವತತ್ವಜ್ಞಾನ ಕುರಿತು ಉಪನ್ಯಾಸ ನೀಡಿ, ಬಸವ ತತ್ವ ಪ್ರಸಾರಗೈದು ಬಂದಿದ್ದಾರೆ.

೧೯೭೭ ರಲ್ಲಿ ಬಸವತತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ ಶರಣ ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ. ೧೯೮೬ ರಲ್ಲಿ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಆಚರಿಸಿ 'ಶರಣಸಂದೇಶ'ವನ್ನು 'ಬಸವಬೆಳಗು' ಹೆಸರಿನಲ್ಲಿ ಮರುಹುಟ್ಟಿಗೆ ಕಾರಣೀಕರ್ತರಾಗಿದ್ದಾರೆ. ೧೯೯೦ ರಲ್ಲಿ ಇಂಗ್ಲೆಂಡಿನಲ್ಲಿ 'ಬಸವ ಇಂಟರನ್ಯಾಶನಲ್ ಫೌಂಡೇಶನ್' ಪ್ರಾರಂಭಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ತರಗಿಯಲ್ಲಿ ೧೯೯೬ರಲ್ಲಿ ಬಸವಕೇಂದ್ರ ಸ್ಥಾಪಿಸಿದ್ದಾರೆ. ಇಳಕಲ್ಲ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ೪೨ ವರುಷಗಳಿಂದ ಶಿವಾನುಭವ ಶಿಬಿರಗಳನ್ನು ಸಂಘಟಿಸಿದ್ದಾರೆ. 'ಜಗಜ್ಯೋತಿ ಬಸವೇಶ್ವರ' ವಚನಾಂಕಿತದಲ್ಲಿ ಸಾವಿರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿದ್ದಾರೆ.

–ಅಂಬಿಗರ ಕುಮಾರಚೌಡಯ್ಯ
ಆಧುನಿಕ ವಚನಕಾರರು